ಗುಲ್ಬರ್ಗಾ ಡಿಸ್ಟ್ರಿಕ್ಟ್ ಹುಬ್ಬಳ್ಳಿ ಗ್ರಾಮದಲ್ಲಿ ತಾರೀಖು ೧೬.೧೧.೩೩ ನೇ ದಿನ ಶ್ರೀಮನುಜ್ಯಯಿನಿ ಜಗದ್ಗುರು ಸಿದ್ಧಲಿಂಗತಿವಾಚಾರ್ಯ ಮಹಾಸ್ವಾಮಿಗಳ ವರ ೧೬ ನೇ ಪುಣ್ಯತಿಥಿಯು, ತಾ।। ೨೩.೩.೩೩ ನೇ ದಿನ ಶ್ರೀ ಜಗದ್ಗುರು ಪಂಡಿತಾರಾಧ್ಯ ಹಾಗೂ ವಿಶ್ವಾರಾಧ್ಯರ ಜಯಂತಿಗಳು, ತಾ।। ೬.೪.೩೩ ನೇ ದಿನ ಪಂಡಿತ ಪ್ರಕಾಂಡ ಸನಾತನ ವೀರಶೈವ ಗುರುಕುಲೋದ್ಧಾರಕ ಮಹಾಪ್ರಾಜ್ಞೋದ್ಧಶ್ರೀ ಕಾಶೀನಾಥಶಾಸ್ತ್ರಿಗಳವರ ಪುಣ್ಯತಿಥಿಯು, ತಾ।। ೧೦.೪.೩೩ ನೇ ದಿನ ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತಿಯು ಪಂಡಿತ ವೇ।। ಗುರುಜಂತಶಾಸ್ತ್ರಿಗಳು ಆಳ್ಳಿಗಿಯವರ ಅಧ್ಯಕ್ಷತೆಯಲ್ಲಿ ಒಳ್ಳೆ ಭಾವಾಲಂಕಾರಗಳಿಂದ ನೆರವೇರಿದವು ಪ್ರತಿವರ್ಷದ ಪದ್ಧತಿಪ್ರಕಾರ ಅಯಾ ದಿನಗಳಲ್ಲಿ ಜಗದಾಚಾರ್ಯರ ಸುವರ್ಣಲಿಂಗೋದ್ಭವಮೂರ್ತಿಗಳಿಗೆ ಪೋಡಶೋಪಚಾರ ರುದ್ರಾಭಿಷೇಕಗಳಿಂದ ಪೂಜಿಸಿ, ಗುರು ಲಿಂಗಜಂಗಮರಿಗೂ, ಅತಿಥಿಗಳಿಗೂ ಕೃಪ್ತಿಪಡಿಸಿದರು ಸಾಯಂಕಾಲ ಜಗದಾಚಾರ್ಯರಿಲಿಂಗೋದ್ಭವ ಮೂರ್ತಿಯನ್ನು ಪಲ್ಲಕ್ಕಿಯ ಬ್ಲಿರಿಸಿ ಭಜನ ಬ್ಯಾಂಡುಗಳೊಡನೆ ವೆ ರವಣಿಗೆ ಕ್ರಡಿದು ಒಂದನೆಂತರ ಪದರಿ ಅಧ್ಯಕ್ಷರವರ ನೇತೃತ್ವದಲ್ಲಿ ಸಭೆ ಕೂಡಿತು ಅಧ್ಯಕ್ಷರವರು ನೆರೆದ ಸಭೆಯಲ್ಲಿ ಜೇಳಲ್ಪಿನೆಂದೆನೆ, ಓ ಸನಾತನವೀರಶೈವ ಮತಸೋದರರೇ, ಪ್ರತಿಯೊಂದು ಮತಗಳು ಸುಖರೂಪದಿಂದ ಸಾಗಬೇಕಾದರೆ ಅಯಾಯ ಮತಗಳ ಮುಖಂಡರು (ಗುರುಗಳು) ತಮ್ಮ ಸಕಲ ಶಕ್ತಿಯನ್ನು ಛಾರಿ ಎರೆಯಬೇಕು. ಏಕೆಂದರೆ—ಹೊಲದಲ್ಲಿ ಬೆಳೆದ ಬೆಳೆಯನ್ನು ಕೋಣ, ಕತ್ತೆ ಮೊದಲಾದ ಪಶುಗಳು ತಿಂದು ನಷ್ಟಮಾಡಬಹುದೆಂಬ ಭೀತಿಯಿಂದ ಸಂರಕ್ಷಣೆಗಾಗಿ ಬೇಲಿಯನ್ನು ಹಚ್ಚುವರು ಆ ಬೇಲಿಯೇ ಹೊಲ ವನ್ನು ಹಾಳುಮಾಡಿದರೆ ಮುಂದೇನುಗತಿ? ಹಾಗೆಯೇ ಧರ್ಮರಕ್ಷಣೆಗಾಗಿ ಧರ್ಮಾಚಾರ್ಯರು ಗುರುಗಳನ್ನು ನಿಯಮಿಸಿರಲು, ರಕ್ಷಕರಾದ ಇವರು ಭಕ್ಷಕರಾಗಿ ಬಹುದೇ, ಆದ್ದರಿಂದ ಗುರುಗಳೇ, ನಿಮ್ಮ ನಿಮ್ಮ ಶಿಷ್ಯ ವ್ಯಂದಕ್ಕೆ ಸರಿಯಾದ ಬುದ್ಧಿಯನ್ನು ಕಲಿಸಿರಿ ಇಲ್ಲ ವಾದರೆ ನಿಮ್ಮಗಳಿಗೆ ದಂಡಧರಕ ದಂಡಪ್ರಹಾರವು ತುಂಡಿತವಾಗಿಯೂ ಬಿಡುವುದಿಲ್ಲವೆಂದು ತಿಳಿಯಿರಿ ಆದ ಕ್ಕಾಗಿ ಮತಗಣಾಂಶುಕದಂತಿರುವ ವೀರಶೈವರಕ್ಕ ಈ ಗ್ರಂಥವನ್ನು ವಿಠಿರಿ ಅಳಿರಿ, ಉಳಿರಿ, ಓ ಗುರು ಭಕ್ತಪ್ರಿಯಾಮಣಿಗಳೇ, ಕೇಳಿರಿ ಕೇಳಿರಿ, ಈ ವೀರಮಾಹೇಶ್ವರ ಧರ್ಮ ಕಡೆಯ ಉಗ್ರ ಇನ್ನೊಮ್ಮೆ ಕೇಳಿರಿ ನಮ್ಮೀ ಹಿಂದುಳಿದ, ಹಾಗೂ ಹಾಳಾಗಿದ್ದ ವೀರಶೈವ ಧರ್ಮವನ್ನು ಸುಧಾರಿಸಿಕೊಂಡರೆ ಧರ್ಮೀ ಮತದ ಮುಖಂಡರಾದ ಪೂಜ್ಯ ಪಟ್ಟಾಚರ್ಯಮೂರ್ತಿಗಳು ಬೊಂಳಕ್ಕಿಲ್ಲ, ಕಂಡಾ ಬಿಡ್ಡರಾಗಿ ಶ್ರೀ ಜಗದ್ಗುರು ರೇಣುಕಾದಿ ಪಂಚಾಚಾರ್ಯರ ಪಂಕ್ತಿಗೂಂದಿ ದಿವ್ಯಧ್ಯಜವನ್ನು ಕೈಯಲ್ಲಿ ಏಡಿದು ಪ್ರತಿ ಜ್ಞಾಭೂಮಿಗೆ ತಮ್ಮ ತಮ್ಮ ತಿಷ್ಯೋದ್ಧಾರದ ಸಲು ವಾಗಿ ಎಲ್ಲಿಯವರೆಗೆ ಸಂಚರಿಸುತ್ತಿರುವೆವು, ಅಲ್ಲಿಯ ವರೆಗೂ ಧರ್ಮೋದ್ಧಾರವೇ ಇಲ್ಲವೆಂದು ಉದ್ಘಾರದಿಂದ ಜೇಗದರು ಬೋಲೋ ಶ್ರೀ ಜಗದ್ಗುರು ಪಂಚಾಚಾರ್ಯ ಮಹಾರಾಜಕೀ ಜೈ

ದುಂಡಪಿಂಗಪ್ಪ ಸಾಗಪ್ಪ ಮೂಕ್ತರ

ಹಳ್ಯಾಳ

ಶ್ರೀ ಜಗದ್ಗುರು ವಿಶ್ವಾರಾಧ್ಯ ಮೂರ್ತಿಸ್ವಾಮಿಸ ಮಹೋತ್ಸವ ಭೈಲವಂದ್ರಿ

ಶ್ರೀ ಜ। ವಿಶ್ವಾರಾಧ್ಯ ಸೇವಾಶ್ರಮ

ಈ ಹಿಂದೆ ಪ್ರಕಟಪಡಿಸಿದ ಮೇರೆಗೆ ಶ್ರೀ ಜ। ವಿಶ್ವಾರಾಧ್ಯತಿಲಾಮೂರ್ತಿಸ್ವಾಮಿಸ ಮಹಾಕಾರ್ಯವು ತಾ।। ೨೬.೩.೩೩ ರಲ್ಲಿ ಶ್ರೀ ಗಂಗಾಧರತಿವಾಚಾರ್ಯ ಮಹಾಸ್ವಾಮಿಗಳವರ ಘನ ನೇತೃತ್ವದಲ್ಲಿ ಅತ್ಯಂತ ವೈಭವದಿಂದ ನೆರವೇರಿತು ಜೈತ್ರ ಶು।। ಪ್ರತಿಪದೆಯಿಂದ ತದಿಗೆಯ ವರೆಗೆ ಜಗದಾಚಾರ್ಯರ ಜಾತ್ರೆಯಂತೆ ಜನಗಳ ಸಂದಣಿ ನೆರೆದಿದ್ದು ಬೆಳಿಗ್ಗೆ ಮಹಾಮೂರ್ತಿಗೆ ರುದ್ರಾಭಿಷೇಕವೂ ಮಧ್ಯಾನ್ಹ ಅನ್ನ ಸಪ್ತರ್ಪೂ ಸಾಯಂಕಾಲ ವಿವಿಧ ವಿಷಯಗಳ ಬಗ್ಗೆ ಪ್ರವಚನವೂ ಸಂತೃಪ್ತಿಕರ ವಾಗಿ ಸಾಗುತ್ತಿದ್ದವು ಆತಂತಪುರ ಜಿಲ್ಲೆಯ ಚಾಪುರಿಯ ಬೃಹನ್ಮಠದ ಶ್ರೀ।। ಹಜ್ಜಿ ಬ್ರಿ। ಮಲ್ಲಿಕಾರ್ಜುನತಿವಾ ಚಾರ್ಯಸ್ವಾಮಿಗಳವರ ಯಶಸ್ವಿಯಾದ ವೈದಿಕತ್ವದಲ್ಲಿ ಯ ಥಾವಿಧಿ ಸ್ಥಾಪನೆ ಕಾರ್ಯವು ನೆರವೇರಿ ಜಂಗಮ ವಟುಗಳಿಗೆ ಮಾಹೇಶ್ವರ ದೀಕ್ಷೆಯು ಅನುಗ್ರಹಿಸ ಲ್ಪಟ್ಟಿತು ಬೂದಿಗುಂಪಿ ನಾಲ್ಕುಕಾಣ್ಯ ಮರದ ಶ್ರೀ ರುದ್ರಮುನಿತಿವಾಚಾರ್ಯರು ಈ ಸುಪ್ರಸಂಗಕ್ಕೆ ಆಗಮಿ ಸಿದ್ದರು ತಾ।। ೨೮.೩.೩೩ ರಲ್ಲಿ ಮಹಾನ್ನದಾನವು ಜರುಗಿತು ಸಾವಿರಾರು ಜನಗಳು ಮೃಷ್ಟಾನ್ನ ಭೋಜನ ದಿಂದ ಸಂತುಷ್ಟರಾದರು ಈ ಮಂಗಲ ಸಮಯದಲ್ಲಿ ಕಾಕಬಾಳು, ಜೋಗ, ಗುಡದವದ್ದಿರಿ ಪಾಪಿನಾಯ್ಕನ ಹಳ್ಳ ಮೆಟ್ರಿ, ಬಳ್ಳಾರಿ, ಚಿಗಟೇರಿ ಹೊಸಪೇಟೆ ಮೊದ ಲಾದ ಗ್ರಾಮ ನಗರಗಳಿಂದ ಅನೇಕ ಭಕ್ತಮಾಹೇಶ್ವರರು ಸೇರಿದ್ದರು ರಾಜಾಪುರ ಧರ್ಮವೀರ ಸಿದ್ಧಪ್ಪ ಯಜ ಮಾನರ ಮತ್ತು ಅವರ ಮಕ್ಕಳಾದ ಶ್ರೀಮಂತ ಗಂಗಾಧರಪ್ಪ ಮತ್ತು ಶ್ರೀಯುತ ಶ್ರೀಕಂಠಪ್ಪ ಇವರ ಸೇವಾ ವೃತ್ತಿಯು ರಾಜಮರ್ಯವನ್ನೆಯಂತೆ ಸರ್ವಾಂಗ ಸುಂದರವಾಗಿ ಸುಖವಾಯಶವಾಗಿದ್ದಿತು ಇಂಥ ಮಹಾ ಕಾರ್ಯಗಳಕ್ಕನ್ನು ಮೇಲಿಂದ ಮೇಲೆ ನೆರವೇರಿಸುತ್ತ ಜಗತ್ಕಲ್ಯಾಣವನ್ನು ಮಾಡುತ್ತಲಿರುವ ಧರ್ಮವೀರ ಸಿದ್ಧಪ್ಪ ಯಜಮಾನರವರಿಗೂ ಮತ್ತು ಅವರ ಸಂತತಿಗೂ ಶ್ರೀ ಜಗದಾಚಾರ್ಯರು ಸಕಲ ಸನ್ಮಂಗಲವನ್ನಿತ್ತು ಕಾಪಾಡಿಲೆಂದು ಹೃತ್ಪೂರ್ವಕ ಸ್ವಾರ್ಥಿಸುತ್ತೇನೆ ಮತ್ತು ಈ ಮೇಲ್ಕಂಡ ಸರ್ವಮತೀಯ ಮಹಾಮ ಭಾವರಿಗೂ ಶ್ರೀ ಜಗದ್ಗುರು ವಿಶ್ವಾರಾಧ್ಯರು ಸುಖನ ನ್ನಿತ್ತು ಕಾಪಾಡಲಿ !!

ಜೋಕಿ ಮಠದ ಉದ್ಧಾನಯ್ಯನವರು

ದೀಕ್ಷಾ ವಿವಾಹಮಹೋತ್ಸವ ಹಿರೇಹಡಗಲಿ

ಸ್ಥಳಿ ಜಿ। ಹಜ್ಜಿ ತಾಲೂಕು ಹಿರೇಹಡಗಲಿ ಗ್ರಾಮ ನಿವಾಸಿಗಳಾದ ಸಂಗಳಿಂಗಯ್ಯನವರು ಇವರ ಧಾಲ್ಯಣ ಬ್ರಿ। ೩ (೧೪ ೩ ೩೩) ಕುಕ್ಕನಾರ ಸ್ವಗೃಹದಲ್ಲಿ ತಮ್ಮ ಜೇಷ್ಠ ಪುತ್ರ ಪಡಾಕಿಮೂರ್ತಿ ಮತ್ತು ತಾರ ತಮ್ಮಗಳ ಮೂಳೇಶ್ವರ ದೀಕ್ಷಾ ಕಾರ್ಯವನ್ನು ಹೊಳಗುಂದಿ ಅಜ್ಜಿನ ವಡಿಯರ ಮಠದ ಶ್ರೀ ಪಟ್ಟಾಧ್ಯಕ್ಷರ ಅತ್ಯಕ್ಷತೆ ಯಲ್ಲಿ ಹೆಜ್ಜೆ. ಎಂ ಗುರುಶಾಂತಶಾಸ್ತ್ರಿಗಳವರ ವೈದಿಕತ್ವ ದಿಂದ ಶಾಸ್ತ್ರೋಕ್ತರೀತಿಯಾಗಿ ನೆರವೇರಿತು ಅಲ್ಲದೆ ಇವೇ ಧಾಲ್ಯಣ ಬ್ರಿ। ೬ (೧೭-೩-೩೩) ಸೋಮವಾರ ಮೇಲ್ಕಂಡ ವೇ।। ಶಂಭುಲಿಂಗಯ್ಯನವರು ತಮ್ಮ ಜೇಷ್ಠ ಪುತ್ರಿ ಲಲಿತಾಂಬೆಯನ್ನು ಸದರಿ ಗ್ರಾಮದ ಶಬ್ದಮಣಿ ಮಠದ ವೇ।। ಕೊಟ್ರಪ್ಪಯ್ಯನವರ ಪುತ್ರ ಚಿ। ಹಜ್ಜ ಬಸವಾರ್ಯ ಬಿ ಎಸ್ ಸಿ, ಇವರಿಗೆ ಕೊಟ್ಟು ತಮ್ಮ ಸ್ವಗೃಹದಲ್ಲಿಯೇ ವಿವಾಹಮಹೋತ್ಸವನ್ನು ನೆರವೇರಿ ಸಿದರು ಈ ಮಹಾಮುಂಗಲಕಾರ್ಯಗಳಿಗಾಗಿ ತಮ್ಮ ಬಂಧುಬಾಂಧವರು ಇತ್ಯ ಮಿತ್ರರು ಆಗಮಿಸಿದ್ದರು ಕಾರ್ಯಗಳು ಸಾಂಗೋಪಾಂಗವಾಗಿ ಜರುಗಿದವು

ಏರ್ವ ಪ್ರೇಕ್ಷಕ

ಜಾಯಸೂರು

ಹೊಸಪೇಟೆ ತಾಲೂಕು ಜಾಯನೂರು ಶ್ರೀಮಾನ್ ಜಮಾದಾರ ಬಸವಪಗೌಡರ ಅಮಂತ್ರಣದ ಮೇರೆಗೆ ಶ್ರೀ ಹಂಪಿ ಸಾವಿರದೇವರು ಎಮ್ಮಿಗನೂರು ಮೆಹಾಂತಿಪ ಮಠದ ಪಟ್ಟಾಧ್ಯಕ್ಷ ಶ್ರೀಲಿ ಹಜ್ಜಿ ಬ್ರಿ। ಗುರುಸಿದ್ಧ ತಿವಾಚಾರ್ಯಸ್ವಾಮಿಗಳು ಮತ್ತು ಕಾಮಿತಪಾಲಿ ಚರಮೂರ್ತಿಸ್ವಾಮಿಗಳು ತಾ।। ೧೨.೩-೩೩ ಶ್ಕೆ ಆಗಮಿ ಸಿದರು ರಾತ್ರಿ ೩ ಗಂಟೆಯಿಂದ ೬ ಗಂಟೆಯ ವರೆಗೆ ವಟುಗಳಿಗೆ ತಿವದೀಕ್ಷಾಸಂಸ್ಕಾರ ಮತ್ತು ಗುರುವಾರ ಉದಯ ೯ ಗಂಟೆಗೆ ಪೂಜ್ಯರ ನೇತೃತ್ವದಲ್ಲಿ ಸದರಿ ಜಮವಪಗೌಡರ ಸುಪುತ್ರ ಚಿ। ಸಿದ್ಧಲಿಂಗಪಗೌಡರ ವಿವಾಹವು ಬಳ್ಳಾರಿ ತಾ। ಮದರ ಗ್ರಾಮದ ಮೂಲೇ ಮನೆ ನೀಲಪಗೌಡರ ಸುಪುತ್ರಿ ಚಿ। ಅಂಬಾ ಸೌ। ಗಂಗಮ್ಮನೆಂಬ ಕನ್ಯಾಮಣಿಯೊಡನೆ ಅಮರೇಶ್ವರ ಶರ್ಮ ಮೆಟ್ರಿ ಇವರ ಪೌರೋಹಿತ್ಯದೊಂದಿಗೆ ಬಹು ವಿಜೃಂಭಣೆಯಿಂದ ಜರುಗಿತು

ಡಿ ಎಂ ಆಡವಯ್ಯ ಟೀಚರ, ಮೆಟ್ರಿ

ಸ್ವೀಕಾರ

ಸೈದಾಂ ಸ್ವೀಟ್ ಕುಪ್ಪಿಗಿ ಪಟ್ಟಕಂಥಿ ಹಿರೇಮಠದ ಪಟ್ಟಾಧ್ಯಕ್ಷ ಶ್ರೀ।। ಹಜ್ಜಿ ಬ್ರಿ। ಕರಬಸವತಿವಾಚಾರ್ಯ ಸ್ವಾಮಿಗಳವರ ಪೂಷತ ಪಟ್ಟಾಭಿಷೇಕ ಸಮಯದಲ್ಲಿ ಪ್ರಥಾಪೋಷಣೆಗಾಗಿ ತೆಗೆಯಲ್ಪಟ್ಟ **5** ರೂ ಗಳು ಶ್ರೀ ಎಸ್ ಎಂ ರೇಣುಕಾಚಾರ್ಯ ಇವರ ದ್ವಾರಾ ತಲ್ಪಿರುತ್ತವೆ

ಧಾರವಾಡ ಟೌನ್ ವಾಸಿಗಳಾದ ಶ್ರೀ ಕೋಟೂರು ಬಸವಲಿಂಗಪ್ಪನವರ ಗೃಹದಲ್ಲಿ ವಿವಾಹಮಹೋತ್ಸವ ನಡೆದ ಸಂತೋಷಾರ್ಥಾಗಿ ಪ್ರಥಾಪೋಷಣೆಗೆ ಸಮರ್ಪಿ ಸಿದ **5** ರೂ ಗಳು ಚಿಕ್ಕಮಣ್ಣೂರ ಶ್ರೀಗಳವರ ದ್ವಾರಾ ತಲ್ಪಿರುತ್ತವೆ

ಕೆ ಆರ್ ನಗರ ತಾಲೂಕು ಅಲ್ಯಾಣಪುರದ ಶ್ರೀ। ಬಿ ವೀರಣ್ಣನವರ ಪುತ್ರಿ ಚಿ। ಕುಮಿ ಸೌ। ಕಮಲಾಂಬಿಕೆ ಯನ್ನು ಹೊಳೆನರಸೀಪುರ ತಾಲೂಕಿನ ಮೊದ್ದಕಾಡ ಪುರ ಗ್ರಾಮದ ಶ್ರೀ ಆನ್ನಪ್ಪನವರ ಮಗ ತಮ್ಮಯ್ಯ ನೆಂಬ ವರಿಗೆ ಕೊಟ್ಟು ಕನ್ಯಾದಾನ ಮಹೋತ್ಸವ ಸಮಯದಲ್ಲಿ ಪ್ರಥಾಪೋಷಣೆಗಾಗಿ ವಧುವರ ಕಡೆ ಯಿಂದ ತೆಗೆಯಿಸಿದ **2** ರೂ ಗಳು ಸದರಿ ಬಿ ವೀರಣ್ಣನವರಿಂದ ತಲ್ಪಿರುತ್ತವೆ

ಬಳ್ಳಾರಿ ಜಿ। ಹಿರೇಹಡಗಲಿ ಗ್ರಾಮವಾಸಿಗಳಾದ ಗುರುವಾದದೇವರ ಮಠದ ಶಂಭುಲಿಂಗಯ್ಯನವರು ತಮ್ಮ ಪುತ್ರ ಪೂತ್ರಿಯರ ದೀಕ್ಷಾ ವಿವಾಹ ಕಾರ್ಯ ಗಳಕ್ಕು ನೆರವೇರಿಸಿದ ಸಮಯದಲ್ಲಿ ಪ್ರಥಾಪೋಷಣೆ ಗಾಗಿ **2** ರೂ ಗಳಕ್ಕು ಸಮರ್ಪಿಸಿ ಕಳಿಹಿಸಿದ್ದಾರೆ.

ಧಾರವಾಡ ಚಿ। ಹೊಳೆಆಲೂರು ಗ್ರಾಮದಲ್ಲಿರುವ ಶ್ರೀ ವೀರಭದ್ರಪ್ಪ ಶಿಪ್ಪಕ್ಕಾ ಹೂಗಾರ ಇವರು ತಮ್ಮ ತಾಯಿಯವರು ತಾ। ೨೪.೩-೩೩ ನೇ ದಿವಸ ತಿವಾಧೀನ ರಾದ ಸಮಯದಲ್ಲಿ ಪ್ರಥಾಪೋಷಣೆಗಾಗಿ **2** ರೂ ಗಳಕ್ಕು ಸಮರ್ಪಿಸಿ ಕಳುಹಿಸಿದ್ದಾರೆ.

ಹೊಸಪೇಟೆ ತಾ।। ಜಾಯನೂರು ಶ್ರೀಮಾನ್ ಜಮಾದಾರ ಬಸವಪಗೌಡರ ಸುಪುತ್ರ ಚಿ। ಸಿದ್ಧಲಿಂಗನ ಗೌಡನ ವಿವಾಹ ಕಾರ್ಯದಲ್ಲಿ ಪ್ರಥಾಪೋಷಣೆಗಾಗಿ ಸಮರ್ಪಿಸಿದ **1** ರೂಪಾಯಿ ನೇ।। ಆಡವಯ್ಯನವರ ದ್ವಾರಾ ತಲ್ಪಿರುತ್ತದೆ

ಈ ಮೇಲ್ಕಂಡ ಮಹಾಶಯರುಗಳಿಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಳವನ್ನೀಯಲೆಂದು ಪ್ರಾರ್ಥಿಸುತ್ತೇನೆ.

ವರ್ತಮಾನಸಂಗ್ರಹ

ಹೈದ್ರಾಬಾದ್ ನುಂಡ್ರಿಗಳ ಸಂಬಳ ತಿಂಗಳಿಗೆ ೧೨೫೦ ರೂಪಾಯಿ

ಹೈದ್ರಾಬಾದಿನ ಮಂತ್ರಿಗಳಿಗೆ ತಿಂಗಳಿಗೆ ೧೨೫೦ ರೂ ಸಂಬಳ ಕೊಡಬಹುದೆಂದು ಶಾಸನಸಭಾ ಕಾಂಗ್ರೆಸ್ ಪಕ್ಷವು ತಾತ್ಕಾಲಿಕವಾಗಿ ನಿರ್ಧರಿಸಿದೆಯೆಂದು ತಿಳಿದು ಒಂದಿದೆ ಸಂಬಂಧದ ಜೊತೆಗೆ ಪ್ರತಿಯೊಬ್ಬ ಸಚಿವರಿಗೂ ಉಚಿತವಾಗಿ ವಸತಿಗೃಹ ಮತ್ತು ಕಾರನ್ನೂ ಒದಗಿಸ ಬೇಕೆಂದು ನಿರ್ಧರಿಸಲಾಗಿದೆಯೆಂದು ತಿಳಿದುಬಂದಿದೆ ಆಲ್ಲದೆ ಶಾಸನಸಭಾ ಪದಸ್ಯರಿಗೆ ಮಾಹೆಯಾನ ೧೫೦ ರೂ ಗಳು ಸಂಬಾವನೆ ಕೊಡಬೇಕೆಂದು ನಿರ್ಧರಿಸ ಲಾಯಿತು ಆಸೆಬ್ಲಿಯ ಸ್ಪೀಕರ್‌ರವರಿಗೆ ಮಂತ್ರಿಗಳಿಗೆ ಕೊಟ್ಟಷ್ಟೇ ಸಂಭಾವನೆ ಕೊಡಲಾಗುವುದು

ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಡಾ॥ ನಂದೀಮಠ ಅವರು ಅಧ್ಯಕ್ಷರು

ಒ ರಲಕ್ಕೀಟಿಯ ಒಪಸೇಶ್ವರ ಆರ್ಟ್ಸ್ ಕಾಲೇಜಿನ ಪ್ರಿನ್ಸಿಪಾಲರಾಂದ ಡಾ॥ ನಂದೀಮಠ ಎಂ ಎ ಪಿ ಎಚ್ ಡಿ ಯವರು ಒ ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರೆಂದು ಅವಿರೋಧವಾಗಿ ಚುನಾ ಯಿತರಾಗಿ ಸಮ್ಮೇಳನವು ಮೆ ಸೂರು ಸಂಸ್ಥಾನದ ಹಾರ್ ಡಿ ಬೇಲೂರಿನಲ್ಲಿ ನೇ ೧೯, ಮತ್ತು ೧೦ ನಯ ತಾರೀಖುಗಳಲ್ಲಿ ನಡೆಯುವುದು

ಜೊಸ ಬಗೆಯ ವಿಮಾನದ ಎಂಜಿನ್

ಒ ಗರಿನ ಾತಾ ವಿಜ್ಞಾನ ಸೆಂಸ್ಥೆಯವರು ವಿಮಾನಗಳಿಗೆ ಬೇಕಾದ ಹೊಸ ಬಗೆಯ ಎಂಜಿನ್ ಒಂದನ್ನು ಿದ್ಧ ಗೊಸಿಸುವ ಕಾರ್ಯದಲ್ಲಿ ತೊಡಗಿದ್ದಾರೆ ಸೆಪ ೀದಲ್ಲಿ ದೊಯುವ ವಸ್ತುಗಳಿಂದಲೇ ಆದನ್ನು ರಚಿಸಲಾಯಿತಂತೆ ಈ ಬಗ್ಗೆ ಈಗಾಲೇ ಡಿಸಿನ್ ಸಿದ್ಧವಾಗಿದೆಯೆಂದು ಗೊತ್ತಾಗಿದೆ

೧೭ ಲಕ್ಷ ರೂ ಗಳ ಉದಾರ ದಾನ

ಸುಮಾರು ೧೫ ಲಕ್ಷ ರೂ ಗಳ ಬೆಲೆ ಬಾಳ ವ ಸ್ತ ಚರಸ್ಥಿರ ಆಸ್ತಿಗಳನ್ನೆಲ್ಲಾ ಜಬ್ಬಲ್‌ಪುರದ ನಿವಾಸಿ ಶ್ರೀ ಜಗನ್ನಾಥದಾಸ್ ಮಾಲ್ಲಾನಿ ಎಂಬುವರು ಪಾಧರ್ಮಿಗಳ ಕಾರ್ಯಕ್ಕಾಗಿ ಉದಾರದಾನ ಮಾಡಿದ್ದಾರೆಂದು ವರದಿಯಾಗಿದೆ ಈ ಆಸ್ತಿ ಪಾಸ್ತಿಗಳಿಂದ ವರ್ಷಾದಕ್ಕೆ ಒಂದು ಲಕ್ಷ ರೂ ಗಳ ಆದಾಯವಿದೆಯೆಂದು ಹೇಳ ಲಾಗಿದೆ ಇವರಿಶ್ರೀಯವ ಹೆಣ್ಣಾದಿಂದ ಪಸ್ಥಿತ್ತಿ ಮೊಲಾಲವು ಗ ು ಕಟ್ಟಿಸಲಾಗುವುದೆಂದೂ ಇವರು ಜೀವಂತರಾಗಿರು ವವ ರ್ಷ ಇವರಿಗೆ ತಿಂಗಳೊಂದಕ್ಕೆ ೩೫೦ ರೂ ಗಳನ್ನ ಕೊಡಕ್ಕಚ್ಚಿಂದೂ ಹೇಳಲಾಗಿದೆ

ಶ್ರೀ ಹೆಚ್.ಎನ್. ಪಾಳೇಗಾರ್‌ರವರಿಗೆ ಸಿಕ್ಕವಿಯೋಗ

ಶ್ರೀಮನ್ ಎಂಜರ ಹುಜೂರ್ ಸೆಕ್ರೆಟರಿಗಳಾದ ಶ್ರೀ ಹೆಚ್ ಎನ್ ಪಾಳೇಗಾರ್‌ರವರಿಗೆ ಸಿಕ್ಕವಿಯೋಗದ ಮಾಯಿ ಕೆಂದು ತಿಳಿಸಲು ಅತ್ಯಂತ ವಿಷಾದವಾಗುತ್ತದೆ ಮತರಿಗ ಾಮ ದಿಗಂಡ ಮಕ್ಕಳಿದ್ದರೆಂದೂ ಶ್ರೀ ಪಾಳೇ ರ್‌ರವರೆ - ಸೇಯವರೆಂದೂ ಗೊತ್ತಾಗಿದೆ ಜಗ ದೀಶ್ವರನು ಮೃತರ ಆತ್ಮಕ್ಕೆ ಶಾಂತಿಯನ್ನಿ ೀಯಲೆಂದು ಪ್ರಾರ್ಥಿಸುತ್ತೇವೆ

ಡಾ॥ ಎಂ. ಸಿ ಮೋದಿಯವರು

ಸಾಕ್ಷಚಿಕಿತ್ಸೆ ಸ್ರವಿಣಾದಾದ ಡಾ॥ ಎಂ ಸಿ ಮೋದಿ ಯವರು ಬೆಳ ಾಂದಲ್ಲಿ ಉಚಿತ ನೇತ್ರಚಿಕಿತ್ಸೆಯನ್ನು ಪ್ರಾರಂಭಿಸಿರುವರು ಅವರು ಈ ತಿಂಗಳು ಅಂತ್ಯದ ವರೆಗೂ ಅಲ್ಲಿಯೇ ಇರುವರು

ಶ್ರೀ ಗಿರಿರಾಜ ಸೂರ್ಯಸಿಂಹಾಸನಾಧೀಶ್ವರ ಶ್ರೀಜಗದ್ಗುರು ವಾಗೀಶ ಪಂಡಿತಾರಾಧ್ಯ ಮಹಾಸ್ವಾಮಿಗಳವರ ಹನ್ನೆರಡನೆಯ ವರ್ಧಂತ್ಯುತ್ಸವ

ಧರ್ಮವಿದ್ಯಾಭಿಮಾನಿಗಳು ಸೇವೆಸಲ್ಲಿಸಲು ಅಪೂರ್ವ ಸಮಯ

ಸಾಹಿತ್ಯ ವೇದಾಂತಾಚಾರ್ಯರೂ, ಕಾವ್ಯಕೇಳ್ಗರೂ, ವರಕವಿಗಳೂ, ವ್ಯಾಖ್ಯಾನವಿಶಾರದರೂ, ಲೇಖಪ ಪಟುಗಳೂ, ಆಯುವೆ ದ ಪ್ರಯೋಗದಲ್ಲಿ ಅಪರ ಧನ್ವಂತರಿಗಳೂ, ಶಿವಯೋಗಕೋವಿದರೂ, ಶಿವಪೂಜಾ ಧುರೀಣರೂ ಶಿವಭಕ್ತಿ ಸಾಮ್ರಾಟರೂ ಸರ್ವಮತ ಸಮಶಾನವಾದಿಗಳೂ ಆಗಿ ಪೂರ್ವಶ್ರಮದಲ್ಲಿಯೇ ಪ್ರಸಿದ್ಧಿ ಹೊಂದಿ ಶ್ರೀಶೈಲ ಸೂರ್ಯಸಿಂಹಾಸನಕ್ಕೆ ತಾ॥ ೭-೭-೧೯೦೦ ರಲ್ಲಿ ಅಧಿಷ್ಠಿತರಾಗಿರುವ ಶ್ರೀಶೈಲ ಜಗದ್ಗುರು ವಾಗೀಶಪಂಡಿತಾರಾಧ್ಯ ಮಹಾಸ್ವಾಮಿಗಳವರ ಹನ್ನೆರಡನೆಯ ವರ್ಷದ ವರ್ಧಂತ್ಯುತ್ಸವವು ಇದೇ ಮುಂಬರುವ ನಂದನ ಸಂ॥ ರದ ಆಷಾಢ ಶು ಏಕಾದಿ ತಾ॥ ೨೪-೬-೮೭ ರಲ್ಲಿ ನಡೆಯಬೇಕಾಗಿದೆ

ಪೂಜ್ಯ ಜಗದ್ಗುರುಗಳವರು ತಮ್ಮ ಪೀಠಾರೋಹಣದ ಈ ಹನ್ನೆರಡು ವರ್ಷಗಳಲ್ಲಿ ಶ್ರೀಶೈಲ ಕ್ಷೇತ್ರದಲ್ಲಿ ಇಪ್ಪತ್ತೈರಡುಸಾವಿರ ರೂಪಾಯಿಗಳ ಖರ್ಚಿನಲ್ಲಿ ಮೂಲ ಪಂಡಿತಾರಾಧ್ಯ ಪೀಠವನ್ನು ಹಾಗೂ ಇತರ ಸ್ಥಳಗಳನ್ನು ಭವ್ಯಗೊಳಿಸಿ ಭವ್ಯವಾದ ಇವಾರಣಿಗಳನ್ನು ಮಾಡಿಸಿಯೂ, ಮಾಡಿಸುತ್ತಲೂ ಇರುವರು ಶ್ರೀಶೈಲಯಾತ್ರೆಗೆ ಹೋಗುವ ಯಾತ್ರಿಕರ ಹಿತಕ್ಕಾಗಿ ದಾರಿಯಲ್ಲಿ ಸಿಗುವ ಆತ್ಮಕೂರಿನಲ್ಲಿ ಏಳತ್ತು ಅರವತ್ತು ಸಾವಿರ ರೂಪಾಯಿಗಳ ಖರ್ಚಿನಲ್ಲಿ ಭವ್ಯವಾದ ಯಾತ್ರಿ ನಿವಾಸವನ್ನು ರಚಿಸಿಯೂ, ರಚಿಸುತ್ತಲೂ ಇದ್ದಾರೆ ಅಲ್ಲದೆ ಸಾರ್ವಜನಿಕರಿಂದ ಸೂರ್ಯಸಿಂಹಾಸನಕ್ಕೆ ಏಳತ್ತು ಅರವತ್ತು ಸಾವಿರ ರೂಪಾಯಿ ಬೆಲೆಬಾಳುವ ನೂತನ ಆಸ್ತಿಗಳನ್ನು ಸಂಪಾದಿಸಿ ಕೊಟ್ಟಿದ್ದಾರೆ

ಗುಂತಕಲ್ಲಿನಲ್ಲಿರುವ ತಮ್ಮ ಹಳೆ ಮಠದ ರಿನೇರಿಗೂ, ಗುರುಗಳ ಸಮಾಧಿ ಮಂದಿರ ಮುಂತಾದ ಹೊಸ ಕಟ್ಟಡಗಳಿಗೂ ಮೂವತ್ತು ಸಾವಿರ ರೂಪಾಯಿಗಳಿಗೆ ಮೇಲ್ಪಟ್ಟು ಖರ್ಚುಮಾಡಿದ್ದಾರೆ ಅದೇ ಗುಂತಕಲ್ಲಿನ ಭಾಗದವರ ವಿದ್ಯಾಭಿವೃದ್ಧಿಗಾಗಿ ಒಂದು ಹೈಸ್ಕೂಲನ್ನು ಸ್ಥಾಪಿಸಿ ಅದನ್ನು ಶ್ರೀಜಗದ್ಗುರು ಪಂಡಿತಾರಾಧ್ಯ ಹೈಸ್ಕೂಲ ಎಂಬ ಹೆಸರಿನಿಂದ ಸರ್ಕಾರದಲ್ಲಿ ರಜಿಸ್ಟರ ಮಾಡಿಸಿ ಸ್ಥಿರಪಡಿಸಿ ಈ ಕಾರ್ಯಕ್ಕೆ ಏಳತ್ತು ಸಾವಿರ ರೂಪಾಯಿಗಳನ್ನು ಆರ್ಪಿಸ ದಿಸಿದ್ದಾರೆ

ಇದೇ ರೀತಿ ಕನ್ನಡ ದೇಶವಾದ ಶಿವಮೊಗ್ಗಾ ಜಿಲ್ಲಾ ಚನ್ನಗಿರಿ ತಾಲೂಕ ಸಂತೇಬೆನ್ನೂರಲ್ಲಿರುವ ಜಿಲ್ಲಾ ಬೋಡ ಹೈಸ್ಕೂಲನ್ನು ಶ್ರೀಶೈಲ ಜಗದ್ಗುರು ವಾಗೀಶ ಬೋರ್ಡ ಹೈಸ್ಕೂಲ ಎಂಬ ಹೆಸರಿನಿಂದ ನಡೆಯುಸಬೇಕೆಂಬ ಕರಾರೊಳಪಟ್ಟು ಇಪ್ಪತ್ತು ಸಾವಿರ ರೂಪಾಯಿಗಳನ್ನು ಆರ್ಪಣೆಮಾಡಿದ್ದಾರೆ ಶಿವಮೊಗ್ಗ ಜಿಲ್ಲಾ ತಿರ್ಥಕೊಪ್ಪದಲ್ಲಿ ಬಡ ಪುಕ್ಕಳ ಉಚಿತ ಭೋಜನಾಲಯವನ್ನು ಮಾಡಿಸುವ ಬಗ್ಗೆ ಆಲ್ಲಿಯ ಹೈಸ್ಕೂಲು ಮುಂದಿರುವ ಆರು ಎಕರೆ ವಿಸ್ತೀರ್ಣವಾದ ಗದ್ದೆ ತೋಟವನ್ನು ತಮ್ಮ ಕಮಿಟಿಯವರ ಅಭಿಪ್ರಾಯವೊಂದಿಗೆ ಸೂಚಾಗಿಸುವವರಿಪ್ಪಿದ್ದಾರೆ

ಆಲ್ಲದ ಧರ್ಮಾಭಿವೃದ್ಧಿಗಾಗಿ ಅನಂತ ಮೊತ್ತದ ಗ್ರಂಥಗಳನ್ನು ರಚಿಸಿ ಅವುಗಳ ಮುದ್ರಣಕ್ಕೆ ಉದಾರವಾದ ಧನವನ್ನು ಸಹಾಯ ಮಾಡಿದ್ದಾರೆ ಈ ಹನ್ನೆರಡು ವರ್ಷದಲ್ಲಿ ಒಡ ವಿದ್ಯಾರ್ಥಿಗಳ ವಿದ್ಯಾರ್ಥಿವೇತನ ಕ್ಕೆಂದೂ ಎಣಾಡ ಹೊಸಾಧಿ ಕಾರ್ಯಗಳಿಗೆಂದೂ, ಕವಿ, ಪಂಡಿತರ ಸಂಭಾವನೆಗೆಂದೂ ಇಪ್ಪತ್ತು ಸಾವಿರಕ್ಕೆ ಮೇಲ್ಪಟ್ಟು ದಾನ ಮಾಡಿದ್ದಾರೆ

ಶ್ರೀಶೈಲ ಆತ್ಮಕೂರುಗಳಲ್ಲಿ ಯಾತ್ರಾ ಸಮಯದಲ್ಲಿ ನಡೆಯುವ ಸೂರ್ಯ ಸಿಂಹಾಸನ ಮಹಿಮೆ ಅಪ್ಪ ಸತ್ರ, ನೀರಿನ ಆರಿಟ್ಟಿಗೆಗಳಿಗಾಗಿ ಪ್ರತಿ ವರ್ಷವೂ ಅಪಾರವಾದ ಹಣವನ್ನು ಖರ್ಚುಮಾಡುತ್ತಿದ್ದಾರೆ ಇಂಥ ಮಹಾನ ಧಾರಿಗಳಾದ ಪೂರ್ವದಿಗಳ ವರ್ಷದ ವರ್ಧಂತಿ ಎಂದರೆ ಯಾರಿಗೆ ಆನಂದವಾಗಲಿರಿಕ್ಕಿಲ್ಲ ಈ ಮಹಾ ಕಾರ್ಯಕ್ಕಾಗಿ ಸುಮಾರು ಹನ್ನೆರಡು ಸಾವಿರ ರೂಪಾಯಿಗಳ ಖರ್ಚು ಒರಬಹುದೆಂದು ಊಹಿಸಲಾಗಿದೆ

ಈ ಸಂದರ್ಭದಲ್ಲಿ ಆಂಧ್ರ ಕರ್ನಾಟಕ ಸಮ್ಮೇಳನವನ್ನು ಜಗದ್ಗುರುಗಳ ನೇತೃತ್ವದಲ್ಲಿ ನೇರಿಸ ಲೆಕೆಂತಲೂ ಈ ವರ್ಷಂತೀ ಸ್ಮಾರಕಕ್ಕಾಗಿ ಒರಡು, ಮೂರು ಪುಸ್ತಕಗಳನ್ನು ಆಚ್ಚುಮಾಡಿಸಬೇಕೆಂತಲೂ ಇದು ರಿಗೆ ಹೀರಕ್ಕಿಗಿ ಸೇವೆ ಸಲ್ಲಿಸಿದವರ ಮತ್ತು ಕವಿ ಪಂಡಿತರ ಸನ್ಮಾನ ಸಭೆಯೊಂದನ್ನೇರ್ಪಡಿಸಬೇಕೆಂತಲೂ ಸಹ ನಿರ್ಣಯಿಸಿದೆ

ಶ್ರೀಜಗದ್ಗುರುಗಳವರ ಪೂರ್ವಾಶ್ರಮದ ಕಾರ್ಯಕಲಾಪಗಳ ಮತ್ತು ಪೀಠಾರೋಹಣಗಳಾದ ಮೇಲೆ ಇದು ವರೆಗೆ ನಡಾಡಿದ ಮುಖಾಕಾರ್ಯ, ದೇಶ ಭಾಷಾಸೇವೆ, ಧರ್ಮಪ್ರಚಾರಗಳ ಪರಿಚಯವಿರುವ ಸಮಾಜ ಧರ್ಮಾಭಿ ಮಾನಿಗಳು ತಮ್ಮ ಉತ್ಸವಸಮಿತಿಗಳನ್ನು ಚೈತ್ರ ಮಾಸದ ಕೊನೆಯೊಳಗಾಗಿ ಳಿಸಿಬಸಬೇಕು ಅವು ಗಳನ್ನು ವರ್ಧಂತಿ ಸ್ಮಾರಕ ಗ್ರಂಥದಲ್ಲಿ ಪ್ರಕಟಿಸಲಾಗುವದು

ಕವಿ ಪಂಡಿತರು ತಮ್ಮ ನೂತನವಾದ ಸಾಹಿತ್ಯ ಕೃತಿಗಳನ್ನು ವರ್ಧಂತಿಗಾಗಿ ರಚಿಸಿ ಳಿಸಿಬಿಸಲ್ಲಿ ಅವು ಪ್ರಕಟವಾಗುವವು

ಸಕಲ ಸನಾಜ ಬಾಂಧವರು ಮತ ಪಂಗಡಗಳ ಅಭಿಮಾನ ವಹಿಸದೆ ತಮ್ಮ ತಮ್ಮ ಶಕ್ತಿಭಕ್ತಿಗಳಿಗನು ಸರಿಸಿ ಸಹಾಯ ದ್ರವ್ಯವನ್ನಾಗಲಿ, ಚಿನ್ನ ಬೆಳ್ಳಿ ಮುಂತಾದ ಸಾಮಾಗ್ರಿಗಳನ್ನಾಗಲಿ, ಸಂಸ್ಥಾನದ ಪರವಾ ಬಂದಿರುವ ಪ್ರತಿನಿಧಿಗಳ ಕೈಯಲ್ಲಾಗಲಿ ಅಥವಾ ಪ್ರತಿನಿಧಿಗಳು ನಿಮ್ಮಲ್ಲಿ ಬಾರದಿದ್ದಲ್ಲಿ ಮಸಿಯಾರ್ಡರ ಮತ ರಜಿಸ್ಟರ ಪಾರ್ಸಲ್ ಮೂಲಕವಾಗಲಿ ಕಳುಹಿಸಿ ರಸೀದಿಯನ್ನು ಪಡೆಯಬೇಕು ಈ ವರ್ಧಂತೀ ಉತ್ಸವ ಫಂಡನ್ನು ವಸೂಲು ಮಾಡುವವರಲ್ಲಿ ಶ್ರೀಜಗದ್ಗುರುಗಳವರ ಪಾಸಾ ಸಹಿ ಮೊಹರುಳ್ಳ ಶ್ರೀಮುಖವೂ ರಸೀ ಪುಸ್ತಕವೂ ಇರುತ್ತವೆ ಅವುಗಳನ್ನು ನೋಡಿ ಸಹಾಯ ಮಾಡಿದ ಒಗ್ಗೆ ನೀವು ರಸೀದಿ ಪಡೆಯುವುದಲ್ಲದೆ ಆದರಲ್ಲಿಯೇ ಇರುವ ಮೊದಲನೆಯ ರಸೀದಿಗೆ ನೀವು ಸಹಿ ಮಾಡಬೇಕು, ಆಥವಾ ಹೆಬ್ಬರಳು ಗುರು ಹಾಕಬೇಕ

ಈ ವರ್ಧಂತೀ ಮಹಾಕಾರ್ಯವನ್ನು ಆಂಧ್ರ ಕರ್ನಾಟಕ ಮಹಾರಾಷ್ಟ್ರದೇಶೀಯರ ಅಮೂಲಾಲ್ಯಾ ಗುಂತಕಲ್ಲಿನ ಶ್ರೀಮಠದಲ್ಲಿಯೇ ನೆರವೇರಿಸಲಾಗುವದು ನಂದಿನ ಸಂವತ್ಸರದ ಆಷಾಢ ಹುಣ್ಣಿ ಬಿದಿಯಿಂ ಮಾಡಿ ದಿವಸಗಳು ಅಂದರೆ ಜೂತಿಯು ನೇರಿ (೩೪ ೬ ೫೨ ರಿಂದ ೩೬ ೬ ೫೨ ಪೂರ್ತಿ) ಈ ಮಹಾಕಾಯ ನಡೆಯಲು ನಿಶ್ಚಯಿಸಿದ್ದು ಧರ್ಮಾಭಿಮಾನಿಗಳಾದ ಸರ್ವರೂ ಉದಾರ ಹೃದಯದಿಂದ ಈ ಮಹಾಕಾರ್ಯ ಪಾನಮಾಡಬೇಕಾಗಿ ಆತಿಸಲಾಗಿದೆ

ಪೋಸ್ಟಿನಲ್ಲಿ ಮನಿಯಾರ್ಡರು ಮುಂತಾದವುಗಳನ್ನು ನೇರವಾಗಿ ಶ್ರೀಶೈಲ ಜಗದ್ಗುರು ವಾಗೀಶ ಪಂಡಿತಾರಾಧ್ಯ ಮಹಾಸ್ವಾಮಿಗಳವರು ಸೂರ್ಯಸಿಂಹಾಸನಮಠ, ಗುಂತಕಲ್ಲು, ಜಿಲ್ಲಾ ಅನಂತಪುರ ಎ ವಿಳಾಸಕ್ಕೆ ಕಳುಹಿಸಬೇಕು

ಇಂತು ತಮ್ಮ,

H B C. ಸ್ವಾಮಿಜಿ

ಶಾ॥ ೭೧೩ ೫೧ ವಿಜೆಯ, ಶ್ರೀಶೈಲ ಜಗದ್ಗುರು ಸೂರ್ಯಸಿಂಹಾಸನಮಠ

Edited Printed and Published by Brubanmath Mahadevaiah at Shri Panchacharya Electric Press, Sayaji Rao Road, Mysore

REGISTERED No M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಯ ನಮಃ ॥ REGISTERED No M 2266

ಪಂಚಾಚಾರ್ಯ ಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಸಂಜಾತಜನಿತರ್ ಪಂಡಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೇಶ್ವರರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾತ್ಮರೀಡೋಧಕರ್ । ಪಂಚಾಚಾರ್ಯಜಗದ್ಗುರೂತ್ತಮವರರ್ಪಾಲಿಪ್ಪ ದೀಲೋಕಮಂ ॥

ಸಂಸ್ಥಾಪಕರು—ಶಾಗನೂರು ಬೃಹನ್ಮಹಾಧ್ಯಕ್ಷರಾದ ವೇ॥ ಸಂ॥ ಶ್ರೀ ಶಾಂತೀನಾಥಶಾಸ್ತ್ರಿಗಳವರು.

ಕಾರ್ಯಿಕ ಚಂದಾ ಪರಸ್ಥಳದವರಿಗೆ ೩ ರೂ ಸಂಪಾದಕರು—ನಾಗನೂರು ಬೃ॥ ಮಹಾದೇವಯ್ಯಸ್ವಾಮಿ ವಿ ಪಿ ಖರ್ಚು ಸೇರಿ ೩ ರೂ ೬ ಆಣೆ

ಸಂಪುಟ ೩೫] ಸೋಮವಾರ ತಾ॥ ೧೪ ನೇ ಏಪ್ರಿಲ್ ೧೯೩೨ [ಸಂಚಿಕೆ ೪೮

ಪತ್ರವ್ಯವಹಾರ

[ಬಾಕ್ಕಿದಾರರು ಅಭಿಪ್ರಾಯ ಪಡುವ ಲೇಖನಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ ಎಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡಬೇಕೆಂದು —ಸಂ]

ನಾನು ಯಾರು? ಎಲ್ಲಿ? ಮುಂದೆ?

ಲೇ ಶ್ರೀ ಡಾಲಬ್ಯಾಹ್ಯತಿ ಗಂಗಾಧರಶಿವಾಚಾರ್ಯ ಮಹಾಸ್ವಾಮಿಗಳವರು ಇಡೆಯ ಬ್ಯಾಹ್ಯನ್ನರ ಮಂಬ ಶ್ರೀ ಜಗದ್ಗುರು ವಿಶ್ವಾರಾಧ್ಯ ಸೇವಾಶ್ರಮ ಬೈಲವದ್ದಿರಿ

ನಾನು ಈ ಕಾರ್ಯವನ್ನು ಮಾಡುತ್ತಿದ್ದೇನೆ, ನಾನು ಚಿತ್ರವನ್ನು ನೋಡುತ್ತಿದ್ದೇನೆ, ನಾನು ಆ ರಾಗವನ್ನು ಹೇಳುತ್ತೇನೆ ಮುಂತಾದ ವ್ಯವಹಾರದ ಮಾತಿನಲ್ಲಿ ನಾನು ಎಂಬ ಪದವನ್ನು ಜಗತ್ತಿನಲ್ಲಿ ಪ್ರತಿಯೊಬ್ಬನು ಪ್ರಯೋಗಿಸುವದು ಅನುಭವದ ಮಾತಾಗಿದೆಯಲ್ಲವೆ! ಇದರಲ್ಲಿ ಮಾತುವದು, ನೋಡುವದು, ಹಾಡುವದು, ಕೈ, ಕಣ್ಣು, ಬಾಯಿಗಳು ಆಗಿದ್ದರೂ ಇವುಗಳಿಗೆ ಸಂಬಂಧವಾಗಿ ನಾನು ಎಂಬ ಶಬ್ದವನ್ನು ಉಪಯೋಗಿಸುವವನು ಇವೆಯಿಂತ ಬೇರೆಯವನೆಂಬುದು ಸುಪ್ರಸ್ಪಷ್ಟವಾಗುತ್ತಿದೆ ಅಂದಮೇಲೆ ನಾನು ಯಾರು? ಎಂದು ವಿಚಾರಿಸಿ ತಿಳಿದುಕೊಳ್ಳುವದು ಮಾನವನ ಮೊದಲನೆಯ ಕರ್ತವ್ಯವಾಗಿರುವದು ಇದುವೆ ಸತ್ಯ ಸುಖ ಶಾಂತಿಗೆ ಸಹಜ ಸಾಧನವಾಗಿರುವದು

ತನ್ನನ್ನು ನೀನು ಯಾರು? ಎಂಬುದಾಗಿ ಯಾವ ನಾಡರೂ ಕೇಳಿದರೆ ಅವನು ತನ್ನ ತಾಯಿತಂದೆಗಳು ಕರೆದ ಹೆಸರಿನಿಂದ ಮಲ್ಲೇಶಾಚಾರಿಯೆಂದು, ರಾಮಿ ಚಂದ್ರ ಎಂದು ಉತ್ತರವನ್ನು ಕೊಡುತ್ತಾನೆ ತಿಳದು ನೋಡಿದರೆ ಆತನು ಶ್ರೀಲಿಲದ ಮಲ್ಲೇಶನೂ ಅಷ್ಟು ದಶರಥಮಹಾರಾಜನ ಮಗನಾದ ರಾಮಚಂದ್ರನೂ ಆಲ್ಲವಷ್ಟೆ!!! ಇದರಂತೆಯೆ ನಿನ್ನ ಬಣ್ಣವು ಎಂಥಾದ್ದು? ಎಂದು ಕೇಳಿದರೆ ಶರೀರವನ್ನು ನಿರ್ದೇಶಿಸಿ ಇದೇ ತನ್ನ ಬಣ್ಣವೆಂದು ಉತ್ತರಿಸುತ್ತಾನೆ ಅರ್ಥಾತ್ ಆ ಒಣ್ಣದಿಂದ ಮೊಡಗೂಡಿದ ಶರೀರವೂ ಅವನಲ್ಲಿ ಅಕ್ಷರವನ್ನು ಒರೆದನು ಯಾರೆಂದು ಕೇಳಿದರೆ ನಾನೆಂದು ಕೂಡಲೆ ಜೇಬಿನಲ್ಲಿ ನಿಜವಾಗಿ ಬರೆದುದು ಕೈಯಲ್ಲಿದೆ ಅವ ರ್ಲ್ಲ ಚಿತ್ರವನ್ನು ನೋಡಿದವರು ಯಾರೆಂದು ಕೇಳಿದರೆ ನಾನೆ ಎನ್ನುವನು ಚಿತ್ರವನ್ನು ನೋಡಿದವುಗಳು ಜವಾಗಿ ಕಣ್ಣುಗಳಲ್ಲಿ ಅವನಲ್ಲ ಹಾಡು ಪಾಡಿ ವರು ನಾನೆ ಎಂದರೂ ಹಾಡಿದುದು ಬಾಯಿ ಆಗಿರುತ್ತೆ. ಗೆಯೆ ಕೇಳಿದ್ದು ಕಿವಿ, ಹೋದದ್ದು ಕಾಲು, ಮೂಸಿದ್ದು ಮೂಗು ಅದೂ ಒಬ್ಬಾರೆ ತಪ್ಪಿಸ್ಥೆ ಕೇಳದ ಕೈಗಳಿಗೆ ನಾನೆ ಎಂದು ತಪ್ಪದೆ ಹೇಳುವದು ರೂಢಿ ಗಾಗಿದೆ

ವಿಚಾರಿಸಿದ್ದಾದರೆ ದೇಹೇಂದ್ರಿಯಗಳು ಮಾಡತಕ್ಕ ಗಳನ್ನೂ ಅವುಗಳ ಗುಣಧರ್ಮಗಳನ್ನು ತನ್ನಲ್ಲಿ ಆರೋಪಿಸಿಕೊಂಡು ಹೇಳುವ ವಸ್ತುವು ಶರೀರಾದಿಗಿಂತ ಭಿನ್ನವಾಗಿ ಬೇರೊಂದಿರುವದೆಂಬುದು ಪಟ್ಟನ ಹೊಳೆಯುವದು ಯಾವ ವಸ್ತುವಿನ ಸಂಸರ್ಕವಿಲ್ಲದೆ ಈ ದೇಹವು ಹುಟ್ಟುವದಿಲ್ಲವೋ, ಶರೀರಾದಿ ಇಂದ್ರಿಯಗಳು ತಮ್ಮ ತಮ್ಮ ಕೆಲಸಗಳನ್ನು ಮಾಡಲು ಆಗುವದಿಲ್ಲವೋ ಮನವು ತಿಳಿಯುವದಿಲ್ಲವೋ ಬುದ್ಧಿಯು ನಿಶ್ಚಯಿಸುವದಿಲ್ಲವೋ ಆ ಅರಿವೇ ನಾನು!!

ಆನಾದ್ಯವಿದ್ಯಾಸಂಬಂಧಾತ್ತದಂತೋ ಜೀವನಾನಾಃ।
(ಸಿ ಶಿ ಪರಿಚ್ಛೇದ ೫)

ಇಂತು ರೇಣುಳಕಭಗವತ್ಪಾದರು ಅಪ್ಪಣೆ ಕೊಡಿಸಿರುವಂತೆ ಆ ಅರಿವಿನ ಸ್ವರೂಪನಾದ ಜೀವನು ಶರೀರ ಸಂಪನ್ನನೂ ಸಚ್ಚಿದಾನಂದ ಪೂರ್ಣನೂ ಆದ ತಿನಲ್ಲ ಅಂತೆಭಿಭೂತನಾಗಿರುವನು ಇದೇ ಅಭಿಪ್ರಾಯವನ್ನು ಬ್ರಹ್ಮಸೂತ್ರವು 'ಅಂಶೋನಾನಾವ್ಯಪದೇಶಾತ್' ಎಂಬ ಸೂತ್ರದಿಂದ ಸಮರ್ಥಿಸುತ್ತಿದೆ ಮುಂಡಕ ಶ್ರುತಿಯು ಅಗ್ನಿಯಿಂದ ಅಗ್ನ್ಯಂಕುರಿಂತೆಳಗಳಾದ ಅನಂತಾ ನಂತಗಳಾದ ಅಗ್ನಿಕಣಗಳು ಹೇಗೆ ಅವಿಭಕ್ತವಿಸುವೋ ಹಾಗೆಯೆ ಪರಿಶುದ್ಧಬ್ರಹ್ಮದಿಂದ ತದಂಶಭೂತರಾದ ಅನಂತಾನಂತ ಜೀವರು ಹುಟ್ಟುವರೆಂದೂ ಪ್ರಳಿಯೆ ಲಯವಾಗುವರೆಂದೂ ಸಾರುತ್ತಿರುವದು ವೀರಶೈವ ಸಿದ್ಧಾಂತವಲ್ಲಿ ತ್ರಿಜೀವರಿಗೆ ಸಾರಮಾರ್ಥಿಕ ಭೇದವು ಅಂಗೀಕರಿಸಲ್ಪಟ್ಟಿದೆ

ಅವಿದ್ಯೆಯಿಂದ ನೋಹಿತನಾದ ಜೀವನು 'ಅಹಂ ಬ್ರಹ್ಮಾಸ್ಮಿ' ನಾನು ಬ್ರಹ್ಮನಿದ್ದೇನೆ' ಎಂಬ ತಾದಾತ್ಮ್ಯ ಭಾವದಿಂದ ದೂರನಾಗಿರುವನು ಅದುಕಾರಣ ಕೆಲಿ ಕ್ಯೆತ್ವವೂ ಕಿಂಚಿಜ್ಞತ್ವವೂ, ಕಿಂಚಿತ್ಕರ್ತೃತ್ವಂತವೂ, ಬ್ರಹ್ಮೈಕ್ಯಜ್ಞಾನಶೂನ್ಯನೂ, ತಾಪತ್ರಯಾಳಲದಂಡ್ಯ ಮಾನನೂ, ಜನನಮರಣಾನ್ವಿತನೂ, ಬದ್ಧನೂ ಆಗಿದ್ದಾನೆ ಇವನು ಕೂಡಲಿನ ತುದಿಯ ನಾಸಿಕದ ಒಂಬು ಪಾಲಿನಷ್ಟು ಸೂಕ್ಷ್ಮನಾಗಿದ್ದು ಸಕಲ ಪ್ರಾಣಿಗಳ ಹೃದಯದಲ್ಲಿ ದೀಪದೆಜಿಹಾಗೆ ಪ್ರಕಾಶಿಸುತ್ತಿರುವನು ದೀಪಗೆಯು ಮನೆಯ ಯಾವುದೇ ಭಾಗದಲ್ಲಿ ಇದ್ದರೂ ತನ್ನ ಬೆಳಕಿನಿಂದ ಮನೆಯನ್ನೆಲ್ಲಾ ಬೆಳಗುವಂತೆ ಜೀವನು ಹೃದಯಸ್ಥಾನದಲ್ಲಿದ್ದರೂ ತನ್ನ ಜ್ಞಾನ ಪ್ರಭೆಯಿಂದ ಶರೀರವನ್ನೆಲ್ಲಾ ವ್ಯಾಪಿಸಿ ಸರ್ವಾವಯವ ನರ್ತ ಸುಖಶೀಲಗಳನ್ನು ಅನುಭವಿಸತಕ್ಕವನಾಗು ತ್ತಾನೆ ತನ್ನಲ್ಲಿ ಒಂದು ಅಹಂಕಾರವನ್ನು ರಿಸಿಕೊಂಡು ಜೀವನು ನಾನೇ ಮಾಡಿದೆನೆಂದು, ತಾನು ನಾಸಿಸುವ ಸ್ಥಳವಾದ ಹೃದಯಕ್ಕೆ ಹೆಚ್ಚಚ್ಚಕೊಂಡು ಹೇಳುವಂತೆ ಉಳಿದ ಅವಯವಗಳಿಗೂ ಇಂದ್ರಿಯಗಳಿಗೂ ಕೈಹಚ್ಚಿ ಕೊಳ್ಳುವದಿಲ್ಲ! ಅಂಜಿಕೆಯ ಮೂಲಕವಾಗಿ ಹೃದಯವು ಜಾರುವುದು ಕಣ್ಣಾಗುವದು ಎದೆ ಉಬ್ಬುಸಿಕೊಂಡು ಸಂತೋಷದಲ್ಲಿ ಥಥೆಯುವದು ಸಂಕಟದಲ್ಲಿ ಎದೆಗೆ ನೋವು ಎನ್ನುವದು ಈ ಎಲ್ಲ ಕಾರಣಗಳಿಂದ ಭಯ ಸಂತೋಷ ಸಂಕಟಗಳಲ್ಲಿ ಜೀವನು ದೇಹದ ಒಂದು ಭಾಗವಾದ ಹೃದಯ (ಎದೆ) ದಲ್ಲಿಯೇ ಇರುವನೆಂಬುದು ಸಿದ್ಧವಾಗುತ್ತಿದೆ.

ಈ ಲೇಖನವು ಬಾಕ್ಕಿದಾರರ ಸ್ವಂತ ಅಭಿಪ್ರಾಯವಾಗಿರುವುದರಿಂದ ಪತ್ರಿಕಾಧಿಪತ್ಯಕ್ಕೂ ಇದಕ್ಕೂ ಸಂಬಂಧವಿಲ್ಲವೆಂಬುದನ್ನು ಸರ್ವರೂ ಗಮನಿಸಬೇಕೆಂದು ಪ್ರಾರ್ಥನೆ —ಸಂಪಾದಕರು

ಎಲೋ ಅಯ್ಯನಾ! ಎಲ್ಲ ಪುಣ್ಯಗಳಿಗೆ ಜೈದೆಯೆದ ಲ್ಲಿರುವನನ್ನಾಗಿ ಈಶ್ವರನು ಮಾಯೆಯಿಂದ ಜಂತ್ರದ ಬೊಂಬೆಯಂತೆ ಎಲ್ಲ ಜೀವಗಳನ್ನು ಆಟವಾಡಿಸು ತ್ತಿದ್ದಾನೆ ಎಂದು ಮೇಲ್ಕಂಡ ಅಭಿವ ತವನ್ನೆ ಕೃಷ್ಣನು ಎತ್ತಿಹಿಡಿದಿದ್ದಾನೆ, ಸಂದಾನೆ 'ಹೃದಯಂ ತವೈತಾ ನೀಯಾತ್ ವಿಶ್ವತ್ಯಾಯತನಂ ಮಹತ್' ಎಂದು ಈ ಒಗೆಗೆ ಭಾಷಿಸಿಹತ್ತ ಸಹ ದನಿಗೂಡಿಸುವನು

ಈ ಪ್ರಕಾರವಾಗಿ ಜೀವನು ಎದಿಯೊಳಗಿರುವಂತೆ ವನಾಗಿ ಹೊರಗಣ ಇಂದ್ರಿಯಗಳ ದ್ವಾರಾ ಕಾರ್ಯಗಳನ್ನು ಮಾಡಿಸುತ್ತ ಅವುಗಳಿಗೆ ಪ್ರೇರಕನಾಗಿರುವನೆನ್ನುವದು ಒಪ್ಪಕ್ಕಯ್ದಕ್ಕೆ!!! ಹಾಗಾದರೆ ಮೇಸನ್ನು ಮನೆಯಂತೆ ತನ್ನನ್ನು ಒಡೆಯನಂತೆ ಇಂದ್ರಿಯಗಳನ್ನು ಕೈಕೆಳಗಿನ ಆಳುಗಳೆಂದು ತಿಳಿಯುವದು ಬಹಳ ಸಮಂಜಸವಾಗು ವದು ದೇಹದೊಳಗೆ ಧರ್ಮಾಶಾಲೆ, ಚರ್ಮಶಾಲೆ ಎಂಬುದಾಗಿ ಎರಡು ಬಗೆಯ ಸಾಲೆಗಳು ಉಂಟು ಧರ್ಮಶಾಲೆ ಎಂದರೆ ನಾನು ಹೊರಗೆ ಇರಕ್ಕಾ ಮನೆ ಚರ್ಮಶಾಲೆ ಎಂದರೆ ತಾಪತ್ರಿತಕ್ಕ ದೇಹವು! ಧರ್ಮ ಶಾಲೆಯಲ್ಲಿ ಕೆಲಸಗಳನ್ನು ನಡೆಯಿಸತಕ್ಕ ಆಳುಗಳು ಬರೆಯತಕ್ಕ ಕಾರಕೂನರು ಇವರ ಮೇಲೆ ಕಾರ ಭಾರಿಯು ಇದಲ್ಲದೆ ತನಗೆ ಸಹಚಾರಿಣಿಯಾದ ಹೆಂಡತಿ ಇರುವ ಪ್ರಕಾರವಾಗಿ ಚರ್ಮಶಾಲೆಯ ಲ್ಲಿಯೂ ಸಕ ಪಂಚಕರ್ಮೇಂದ್ರಿಯಗಳೇ ಆಳುಗಳು ಪಂಚಜ್ಞಾನೇಂ ದ್ರಿಯಗಳೇ ಕಾರಕೂನರು ಮನಪೇ ಒಕ್ಕಾರಿ ಯಾಗಿ ಎಂಬಾನ ಹೆಂಡತಿ ಇದ್ದು ಇವೆಲ್ಲಕ್ಕೆ ತಾನು ಪ್ರೇರಕನಾಗಿ ಮೂಲಾಧಾರನಾಗಿ ಅಂಗೊಸಮಿತ್ತಿದ್ದಾನೆ ಧರ್ಮಶಾಲೆಯಲ್ಲಿ ಬೇರೆ ಬೇರೆ ಕೋಣೆಗಳು ಇರುವ ಹಾಗೆ ಇಲ್ಲಿಯ ಅನ್ನಮಯ, ಪ್ರಾಣಮಯ, ಮನೋಮಯ, ವಿಜ್ಞಾನಮಯ, ಆನಂದಮಯ ಎಂಬ ೫ ಕೋಣೆಗಳಿರುವವು ಅನ್ನಮಯವೆಂಬ ಕೋಣೆಯಲ್ಲಿ ಕರ್ಮೇಂದ್ರಿಯ ಜ್ಞಾನೇಂದ್ರಿಯಗಳು ವಾಸವಾಗಿವೆ ಪ್ರಾಣಮಯದಲ್ಲಿ ವ್ಯಾನ ಉದಾನ, ಸಮಾನ, ಪ್ರಾಣ, ಅಪಾನ ಎಂಬ ವಾಯುಸಂಚಕವಿದೆ ಮನೋಮಯ ಮೊಳಗೆ ಕಾರಧಾರಿಯಾಗಿರುವ ಮನಪೆ ನೆಲೆಸಿದ ವಿಜ್ಞಾನಮಯದಲ್ಲಿ ಸತಿಯಂತಿಹ ಬುದ್ಧಿಯು ವಸ ಗೊಂಡಿದೆ ತಾನು ಅನಂದಕೋಶದಲ್ಲಿ ಇರುವವನಾಗಿದ ವೆಯೆ ಈ ಕೋಣೆಗಳು ಕ್ರಮವಾಗಿ ಒಂದಕ್ಕಿಂತ ಒಂದು ಒಳಗೊಳಗಿನವಾಗಿವೆ ಅನಂದಮಯ ಕೋಶವು ಎಲ್ಲ ಕೋಶ (ಕೋಣೆ) ಗಳಿಗೆ ಸಂಬಂಧವಿರುವೆದಂತೆ ವಿಜ್ಞಾ ಕೋಶಗಳನ್ನು ತಿಳಿಯಬೇಕಾದಾಗಿದೆ ಈ ಮಗಿಳಿ ವಾಗಿ ಜೀವನು ಎಲ್ಲ ಕೋಶಗಳನ್ನು ಬಳಪಡಿಸುವನು. ಆದರೆ ಆ ಕೋಶಗಳು ಮಾತ್ರ ತಿಳಿಯು ಆವವು ಒಳಒಳಗಿನವು ಹೊರಹೊರಗಿನವುಗಳನ್ನು ತಿಳಿಯಬಹುದು ಆದರೆ ಹೊರಹೊರಗಿನವು ಮಾತ್ರ ಒಳಒಳಗಿನವುಗಳನ್ನು ಅರಿಯಲಾರದು ಇಷ್ಟೇ ಅಲ್ಲ

[೩ ನೆಯ ಪುಟಸ್ಸು ನೋಡಿ]

ಸಂಚಾರಾಚಾರ್ಯಪ್ರಭಾ

೧೯೫೩ ನಯ ಏಪ್ರಿಲ್ ತಾ॥ ೧೧ನೇ ಸೋಮವಾರ

ಶಕ್ತಿವಿಶಿಷ್ಟಾದ್ವೈತ

ಶತ್ಕ್ರತುವು ಮಹಾವಾಕ್ಯಾರ್ಥವೆನಿಸಿದ ಲಿಂಗಾಂಗಿ ಸಾಮರಸ್ಯವನ್ನು ಬೋಧಿಸುವ ಶಕ್ತಿವಿಶಿಷ್ಟಾದ್ವೈತ ಸಿದ್ಧಾಂತಕ್ಕೆ ಶಿವಾದ್ವೈತ ವೈತಾದ್ವೈತ, ವೀರಶೈವ ದ್ವೈತ ಎಂಬ ನಾಮಗಳು ಇರುತ್ತವೆ. ಇನ್ನೆಲ್ಲ ಹೆಸರುಗಳೂ ಭೇದ, ಕಲಹ, ಕೂಪ ಮಂಡೂಕ ಹರಿಯ ನಾಮವುಳ್ಳವುಗಳಾದುದರಿಂದ ವೀರರೆ ನವತಾದ ಪರಮ ಪ್ರಮೇಯವಾದ ಲಿಂಗಾಂಗಸಾಮರಸ್ಯವೆ ಸೂಕ್ಷ್ಮಚೆಚಿದಾತ್ಮಕ ಶಕ್ತಿವಿಶಿಷ್ಟವಾದ ಪರಶಿವಲಿಂಗದಲ್ಲಿ ಸ್ಥೂಲಚಿದಚಿತ್ಪ್ರಕೃತಿಕ ಶಕ್ತಿವಿಶಿಷ್ಟನಾದ ಜೀವಾತ್ಮನು ನೀರಿನಲ್ಲಿ ನೀರು ಬೆರೆತಂತೆ ಬೆರೆತು ಅಖಂಡಾನಂದನನ್ನು ಹುಡಾಡುವುದಕ್ಕೆ ಶಿವಾದ್ವೈತಕವೆಂದು ಕರೆಯುತ್ತಾರೆ ಶ್ರೀ ರೇಣುಕಭಗವತ್ಪಾದಾಚಾರ್ಯರು

ಶಿವಾದ್ವೈತವಿಜ್ಞಾನಪರಿಭಿನ್ನಾಸವಸ್ತುನಿ ।
ಕೇವಲಂ ಸಂಸಿದುಲ್ಲಾಸದಿಲ್ಲಾ ಸಿನ್ನಕೆ ಭವೆತ್ ॥

ಶಿವಾದ್ವೈತವಿಜ್ಞಾನದಿಂದ ಪ್ರಪಂಚಕೆಸಾದ ಭಿನ್ನತೆಯು ಸಮಸ್ತ ಭೇದಗಳುಡಗಿ ಕೇವಲ ಬ್ರಹ್ಮಾನಂದನು ತನು ಬಯಸುವ ಶಿವಯೋಗಿಯು ಚಕ್ಷುರಾದಿ ಜ್ಞಾನೇಂದ್ರಿಯ ಬಾಹ್ಯ ವಿಷಯಗಳಿಂದ ದೂರನಾಗಿ ತನು ಎಂದು ತಿಳಿದಾತ ಶವಸ್ವರೂಪನ್ನು ಆಗ್ರಹದಿಂ ನೋಡಿಸುತ್ತಾರೆ ಇಷ ವೀರಶೈವ ಎಂಬ ಶಬ್ದವು ಇದೇ ಅರ್ಥವನ್ನೇ ಬೋಧಿಸುತ್ತವೆ

ವಿಶಿಷ್ಟೋಽಸೌ ವಿಶ್ಲಿಷ್ಟಾಂಶೋ ವೈಶಾಂ ವೈ ಶೈವಕೋವಿದಾಃ ॥

ವೀರಶೈವ ಎಂಬ ಶಬ್ದವು 'ವಿ' ಎಂಬ ಶಬ್ದವು ಶತ್ಕ್ರತುವಿನ ಮಾಹಾವಾಕ್ಯದಿಂದ ಬೋಧ್ಯವಾಗಿ ಅಸಿಗೆರಗುವ ಪಾಪವು ಅದು ತಿಮಿರಪ್ರಕಾಶ ಜೀವ ಕಶಕ್ಕೆ ವಿಕ್ಯವನ್ನು ಬೋಧಿಸುವ ವಿದ್ಯೆಯೆಂದರ್ಥವು ಇಂಥ ಇಂಗಿರ್ಜಿಕಾಗಿ ರಸ್ಯಬೋಧಕವಾದ ವೇದಾಂತ ವಿದ್ಯೆಯಿಂದ ಯಾವ ಶಿವಾದ್ವೈತಾಸಕನು ನಿಶಕ್ತ ವಿಶಿಷ್ಟರು ವಿಶಿಷ್ಟರು ಎಂಬ ಸಿದ್ಧಾಂತವನ್ನು ಪ್ರತಿಪಾದಿಸುತ್ತಾರೋ ಅವರೇ ಸೀರಶೈವರೆಂದು ವಿವಾಗಮಗಳು ವೀರಶೈವರುಳ್ಳವ ನಿರ್ಮಾಣವನ್ನು ಮಾಡಿರುತ್ತವೆ ಅಂಗಲಿಂಗ ಸಮರಸ್ಯವಾದ ಜೀವಬ್ರಹ್ಮರೂ ಜೀವತ್ಪರಾತ್ಪರರೂ ಶಕ್ತಿವಿಶಿಷ್ಟರೂ ಆಗಿರುವರೆಂಬ ವಿಷಯವನ್ನು ಶ್ರೀ ಪಂಚಾಚಾರ್ಯರು ಸ್ಪಷ್ಟಪಡಿಸಿರುತ್ತಾರೆ

ಶಿವಾದ್ವೈತವಿಜ್ಞಾನಪರಿಭಿನ್ನಾಸವಸ್ತುನಿ ।
ಕೇವಲಂ ಸಂಸಿದುಲ್ಲಾಸದಿಲ್ಲಾ ಸಿನ್ನಕೆ ಭವೆತ್ ॥

ಶಿವಾದ್ವೈತವಿಜ್ಞಾನದಿಂದ ಪ್ರಪಂಚಕೆಸಾದ ಭಿನ್ನತೆಯು ಸಮಸ್ತ ಭೇದಗಳುಡಗಿ ಕೇವಲ ಬ್ರಹ್ಮಾನಂದನು ತನು ಬಯಸುವ ಶಿವಯೋಗಿಯು ಚಕ್ಷುರಾದಿ ಜ್ಞಾನೇಂದ್ರಿಯ ಬಾಹ್ಯ ವಿಷಯಗಳಿಂದ ದೂರನಾಗಿ ತನು ಎಂದು ತಿಳಿದಾತ ಶವಸ್ವರೂಪನ್ನು ಆಗ್ರಹದಿಂ ನೋಡಿಸುತ್ತಾರೆ ಇಷ ವೀರಶೈವ ಎಂಬ ಶಬ್ದವು ಇದೇ ಅರ್ಥವನ್ನೇ ಬೋಧಿಸುತ್ತವೆ

ವಿಶಿಷ್ಟೋಽಸೌ ವಿಶ್ಲಿಷ್ಟಾಂಶೋ ವೈಶಾಂ ವೈ ಶೈವಕೋವಿದಾಃ ॥

ವೀರಶೈವ ಎಂಬ ಶಬ್ದವು 'ವಿ' ಎಂಬ ಶಬ್ದವು ಶತ್ಕ್ರತುವಿನ ಮಾಹಾವಾಕ್ಯದಿಂದ ಬೋಧ್ಯವಾಗಿ ಅಸಿಗೆರಗುವ ಪಾಪವು ಅದು ತಿಮಿರಪ್ರಕಾಶ ಜೀವ ಕಶಕ್ಕೆ ವಿಕ್ಯವನ್ನು ಬೋಧಿಸುವ ವಿದ್ಯೆಯೆಂದರ್ಥವು ಇಂಥ ಇಂಗಿರ್ಜಿಕಾಗಿ ರಸ್ಯಬೋಧಕವಾದ ವೇದಾಂತ ವಿದ್ಯೆಯಿಂದ ಯಾವ ಶಿವಾದ್ವೈತಾಸಕನು ನಿಶಕ್ತ ವಿಶಿಷ್ಟರು ವಿಶಿಷ್ಟರು ಎಂಬ ಸಿದ್ಧಾಂತವನ್ನು ಪ್ರತಿಪಾದಿಸುತ್ತಾರೋ ಅವರೇ ಸೀರಶೈವರೆಂದು ವಿವಾಗಮಗಳು ವೀರಶೈವರುಳ್ಳವ ನಿರ್ಮಾಣವನ್ನು ಮಾಡಿರುತ್ತವೆ ಅಂಗಲಿಂಗ ಸಮರಸ್ಯವಾದ ಜೀವಬ್ರಹ್ಮರೂ ಜೀವತ್ಪರಾತ್ಪರರೂ ಶಕ್ತಿವಿಶಿಷ್ಟರೂ ಆಗಿರುವರೆಂಬ ವಿಷಯವನ್ನು ಶ್ರೀ ಪಂಚಾಚಾರ್ಯರು ಸ್ಪಷ್ಟಪಡಿಸಿರುತ್ತಾರೆ

ಶಕ್ತಿವಿಶಿಷ್ಟ ಪರಮಾತ್ಮನೆಂಬ ಕುಂದಾರನು ತನ್ನಲ್ಲಿ ಅವಿನಾಭಾವದಿಂದಿರುವ ರತ್ನಾಂಡವೆಂಬ ಮಣ್ಣನ್ನೇ ಉಪಾದಾನಕಾರಣವನ್ನಾಗಿ ಮಾಡಿಕೊಂಡು ಆ ಶಕ್ತಿಯ ವಿಲಕ್ಷಣ ಪರಿಣಾಮವೆನಿಸಿದ ಮಾಯಾಂಡನೆಂಬ ಕಿಸರಿ (ಚಕ್ಕ) ಯ ನೀಲಿ ಆ ಮಣ್ಣನ್ನಿಟ್ಟು ಅವೇ ಶಕ್ತಿಯ ಸರಿಣಾಮಭೂತವಾದ ಮೂಲಾಂಡನೆಂಬ ದಂಡದಿಂದ ಭಾರಿಧಾರಿಗಿ ಆ ಚಕ್ರವನ್ನು ತಿರುಗಿಸುತ್ತ ಈ ಅಖಂಡ ಬ್ರಹ್ಮಾಂಡವೆಂಬ ವಿಚಿತ್ರಕುಂಭಗಳನ್ನು ರಚಿಸುತ್ತ ಲಿರುವನೆಂದು ಒಬ್ಬ ಮಹಾಯೋಗಿಯು ಶಕ್ತಿವಿಶಿಷ್ಟ ದ್ವೈತ ಸಿದ್ಧಾಂತದ ಸಾರವನ್ನು ಒಂದು ಶ್ಲೋಕದಲ್ಲಿ ಕಂದಿರಿಟ್ಟಾನೆ ಇದರಿಂದ ಛಾಂದೋಗ್ಯಾಂತರ್ಗತವಾದ ತತ್ತ್ವಮಸಿವಾಕ್ಯದಲ್ಲಿರುವ 'ತತ್ ತ್ವಂ' ಎಂಬ ಎರಡು ಪದಗಳು ಶಕ್ತಿವಿಶಿಷ್ಟವಾದ ಅಂಗ ಲಿಂಗಗಳನ್ನೂ, ಅಸಿ ಪದವು ಇನೆರಡರ ಸಾಮರಸ್ಯ (ಐಕ್ಯ) ವನ್ನೂ ಬೋಧಿಸುತ್ತವೆಯೆಂದು ಸಿದ್ಧವಾಗುತ್ತದೆ ಇಂಥ ಅಂಗಲಿಂಗ ಸಾಮರಸ್ಯವು

ಸ್ಯಾತಾಂಗಾದಿಯೋಗೇನ ಸುಜಾತಿಕಯಮೀಯಾಸಾಸ್ ।

ಎಂಬ ರೇಣುಕಾಚಾರ್ಯರುಕ್ತಿಯಂತೆ ಗುರುಕರುಣ್ಯದಿಂದ ಲಬ್ಧವಾದ ತಿಲಲಿಂಗಾಣದಿಂದಲೇ ಸಿದ್ಧಿಸುತ್ತದೆಂದು ಸ್ಪುಟವಾಗುತ್ತದೆ.

ಧಾನ್ಯಗಳ ಮಾರಾಟದ ಬೆಲೆಯ ವಿರಿಕೆ

ಮೈಸೂರು ಸಂಸ್ಥಾನದಲ್ಲಿ ಸರ್ಕಾರದವರು ಆಕಾರ ಧಾನ್ಯಗಳ ಬೆಲೆಗಳನ್ನು ಈ ಕೆಳಗೆ ಕಂಡಂತೆ ಹೆಚ್ಚಿಸಿ ದ್ದಾರೆ ಅಕ್ಕಿ ಮೊದಲನೇ ರಖಂ (ಸನ್ನಕ್ಕಿ) ಒಂದು ಸೇರಿಗೆ ಹತ್ತು ಆಣೆ ಮತ್ತು ಎಂಟು ಕಾಸು ಎರಡನೇ ರಖಂ ಅಕ್ಕಿ (ದಪ್ಪಕ್ಕಿ) ಒಂಭತ್ತು ಆಣೆ ಮಿಶೆಲ್ಸ್ (ರಾಗಿ ತತ್ತಾಯಿ) ರೂಪಾಯಿಗೆ ಇಪ್ಪತ್ತು ಸೇರು ಗೋಧಿ ಒಂಭತ್ತು ಸೇರಿಗೆ ಹತ್ತಾಣೆ ಮತ್ತು ಎಂಟು ಕಾಸು.

ಶ್ರೀ ಕಾಶೀನಾಥಾಷ್ಟಕಂ

ವಿಶ್ವಧರ್ಮಸ ಗರ್ಭವಾಲ್ಲ ವಿ ।
ನಶ್ವರಾದೀದೇಹದಿಂದ ಮ ।
ನಸ್ಸಿಯೆನೆ ಸದ್ಭಕ್ತ ಸಂತತಿಗಿತ್ತು ಕಾಮ್ಯಗಳಂ ॥
ಶಾಶ್ವತಂ ತ್ವಲ್ಲಿಲೆ ಕಾಶೀನಾಥಸಚ್ಚರಿತ ॥೧॥

ಮುನಿಯೊಳಗೆ ಮಿಂಚುಹೂಗೆದು ಕೂಡಲೆ ।
ಗನನವನು ಝಗಝಗಿಸಿ ಬೆಳಗಿಸಿ ।
ಜಗದೊಳೆಲ್ಲೆಡೆಯಲ್ಲಿ ಮಳೆಯನು ಸುರಿಸುವಾತೆರದಿಂ ॥
ಒಗೆವು ಕರ್ಣಾಟಾಂಡೆ ವೆಳಗಿಸಿ ।
ಮಿಗಿಲು ಜ್ಞಾನಸ್ತ್ರಭೆಯ ಬೆಲ್ಸರಿ ।
ಜಗದ ಬೀರಿದೆಯೆಸ್ತೆ ? ಕಾಶೀನಾಥಸಚ್ಚರಿತ ॥೨॥

ವೀತರಾಗ ಪುನೀತ ಸಂಯಮಿ ।
ಪ್ರಾತಸಂವ್ಯತ ನಿಗಮ ಸಮ್ಯ ।
ಗ್ಗೀತ ವಿತತಾತ್ಮಿಯ ಸುಯಶಃ ಪೂರಿತಾದಿಕಸೀಃ ॥
ಪೂತ ಚರಿತಾಗೀತ ಸುಜನಾ ।
ಪೀತವಾರಿಧಿ ಭಕ್ತಿಗೊಲಿದಾ ।
ದೀತಮಾಯಿ ! ಸ್ವತ್ಯ ಕಾಶೀನಾಥಸಚ್ಚರಿತ ॥೩॥

ದಿಟ್ಟಮಾರನ ಸೇರೆ ನಿನತಾ ।
ಗಟ್ಟಿ ದಮ್ಮಿದ ಜಾಗದಾಸಿರಿ ।
ಪುಟ್ಟಿದಂದಿಂದೆನಗೆ ಮುಡಿಪಾಗಿಟ್ಟು ತನ್ನೊಡಲಂ ॥
ಬಿಟ್ಟು ನಿನ್ನೆನ್ನಿರ್ದೆಯಲ್ಲದ ।
ತೊಟ್ಟು ಕಾನವರಾದನುತ್ಕಲಿ ।
ಕಟ್ಟವರಲೆ ಪಳುಮಿಂದು ಕಾಶೀನಾಥಸಚ್ಚರಿತ ॥೪॥

ಭೂತ ಚಿತ್ಪುವಿಲಾಸ ಸದ್ಗುಣ ।
ಕೋತ ಯಮಿಸಂಕಾಶ ವಿಗತಾ ।
ಶ್ಯೋತ್ತ ಸುಯಶಃ ಪೂರಿತಾಶಾವಲಯ ವಾಗೀಶ ॥
ರೀತ ಭೂವನ ಜೋತ ಮದರೀ ।
ನಾಶ ಮನಸಿಜನಾಶ ಸಂಯುತ
ಪಾಶ ಛಿನ್ನಸಂದೇಶ ಕಾಶೀನಾಥಸಚ್ಚರಿತ ॥೫॥

ಸುರರ ಮೇಲಿರು ವಕ್ಕರಿಂದಲ ।
ಸುರರ ಸದಿಚ್ಛಕರಿ ಜಾವದ ।
ಸರಣಿಯನು ಸುಸ್ಪರ್ಧೆಯ ದೀವಟೆಯಿಂದೆ ತೋರಿಸುತಿ॥
ಉರುವ ಪಾಪಾಬ್ಧಿಯೊಳು ಬೆಯುವ ।
ನರರ ಕರುಣಿಸಿ ಕಾಯ್ದ ಪುಣ್ಯ ಭ ।
ಲರೆ ! ನಿನಗೆ ಸರಿಯಾಯ್ತು !! ಕಾಶೀನಾಥಸಚ್ಚರಿತ ॥೬॥

ಜ್ಞಾನಕಿರಣಮೆ ಗಾನಗಾಯಕ ।
ಪೂನ ಶಾಂತಿಯೆ ಯಜ್ಞ ಪೂರ್ತಿಯು ।
ಜಾತ ಗಣಪ ವಿನಾಶ ವಿರವೃತಿಮೆ ಧೈರವನು ॥
ತಾಣ ಕಾಶಿಯಡಾಗೆ ದೇಹವು ।
ಜಾಣ! ನಿನಗೀ ಗರ್ಭಯುಕ್ತಿವ ।
ವಾಣಿಯಾದುದು ಮಲ್ಲೆ ? ಕಾಶೀನಾಥಸಚ್ಚರಿತ ॥೭॥

ಪರಮ ಜಂಗಮರೊಸಿ ಮಂಗಲ ।
ಕರಮದಾಪಹಪಂಚ ಮಂಗಲ ।
ಮುರಿತ ಮೇಥಿಧ್ವಾಂತ ದಿವಕರರೂಪ ಮಂಗಲವು ॥
ಸಿರಿಯಧಿಪ ಸಂಪೂಜ್ಯ ಮಂಗಲ ।
ಮುರುಳ ರತ್ನಸವಿಗೆಗೆ ಮಂಗಲ ।
ಗುರುಮ ! ಮಂಗಲುಮಲ್ಲೆ ಕಾಶೀನಾಥಸಚ್ಚರಿತ ॥೮॥

ಮದನಹರ ಶ್ರೀಸಿದ್ಧಲಿಂಗ ವಿ ।
ಶದವರದ ಹಸ್ತಾಬ್ಜ ಸಂಭವ ।
ನುದಿತಸನ್ಮಜ್ಞಾನ್ಞಾನ ತಿತಿಕಂಕಳವಿಯಂ ಬರಿದೆ ॥
ಇದರು ಕಾಶೀನಾಥಸಚ್ಚರಿತ ।
ಹದುಳದಿಂದಲಿ ಯೋದಿದವನಿಗೆ ।
ವಿಧುಧರನು ಕಾಮ್ಯಗಳೆ ಸೀಯಲಿಯೆಯೆಂದು ದೇಹುನೆತ್ತು ॥

ಕಂ॥ ಬಿ. ಎಂ. ತಿಕ್ಕಂಕಮಾ

ಜೋರ್ಡ್ ಹೈಸ್ಕೂಲ್, ಹೊಸಪೇಟೆ.

[೦ ಪಿಯ ಶ್ರುತಿಂದ ಮುಂದುಕರಿದುದು]

ಒಂದು ಜ್ಞಾನೇಂದ್ರಿಯವು ತಿಳಿಯತಕ್ಕದ್ದನ್ನು ಇನ್ನೊಂದು ಜ್ಞಾನೇಂದ್ರಿಯವು ತಿಳಿಯಲಾರದು ಒಂದು ಕರ್ಮೇಂದ್ರಿಯವು ಮಾಡತಕ್ಕದ್ದನ್ನು ಮತ್ತೊಂದು ಕರ್ಮೇಂದ್ರಿಯವು ಮಾಡಲಾರದು. ಹೀಗೆ ಒಂದು ಇಂದ್ರಿಯವು ಮಾಡತಕ್ಕ ಕೆಲಸವನ್ನು ಮಗುದೊಂದು ಇಂದ್ರಿಯವು ಮಾಡಲಾರದು. ಆದರೆ ಬರಿಯ ಆರಿವೇ ಆದ ಜೀವನು ತಾನು ಮಾತ್ರ ಸಕಲ ವಿಷಯಗಳನ್ನು ಅರಿತು ಕೊಂಡು ಆಯಾ ವಿಷಯಗಳನ್ನು ಆಯಾ ಇಂದ್ರಿಯ ಗಳಿಂದ ತಿಳಿಯಲಿಕ್ಕೂ ಮಾಡಲಿಕ್ಕೂ ಸಮರ್ಥನಾಗಿ ಪ್ಪಾನೆ ಇದರಿಂದ ತಾನು ಅರುವಿನ ಸ್ವರೂಪನೆಂಬುದು ಸಿದ್ಧವಾದಂತಾಯಿತು ಈ ಆರಿವು ಅಚ್ಚ್ಯುತವಾದುದು. ಹಿಂದೆ ಹುಟ್ಟಿಲ್ಲ, ಮುಂದೆ ತೊಲಗಬೇಕ್ಕವ್ಯಕ್ಕ ಎಂದೊ ದಿಗೂ ಇರತಕ್ಕದ್ದಾಗಿದೆ ಇಂತಹ ಸಚ್ಚಿದಾನಂದನಾದ ಜೀವನು ಪರಮ ಸುಖಸ್ವರೂಪನೂ ಆಗಿದ್ದಾನೆ ಪ್ರಪಂಚ ದಲ್ಲಿ ತನ್ನ ಮೇಲೆ ಇರುವಷ್ಟು ಪ್ರೇಮವು ಬೇರಿಂದರೆ ಮೇಲೆ ಇಲ್ಲವೆಂಬುದು ಸೂರ್ಯಪ್ರಕಾಶದಷ್ಟು ಸ್ಪಷ್ಟ ವಾಗಿದೆ. ಗಂಡನು ಹೆಂಡತಿಯನ್ನು ಆಯಸುವದು ತನಗೋಸ್ಕರವಲ್ಲದೆ ಹೆಂಡತಿಗಾಗಿ ಅಲ್ಲ. ಹೆಂಡತಿ ಗಂಡನ್ನು ಕೋರುವದು ತನಗೋಸ್ಕರವಲ್ಲದೆ ಗಂಡನಿ ಗಾಗಿ ಅಲ್ಲ! ಹೀಗೆ ಕೊನೆಗೆ ಪರಪ್ರೀತಿಯು ತನಗಾಗಿ ಆಲ್ಲವೆ? ಒಟ್ಟಿರೆ ಇದರಿಂದ ಜೀವನು ಸಚ್ಚಿದಾನಂದ ಸ್ವರೂಪನೆಂದು ಹೇಳಿದಂತಾಯಿತು ಇಂತು ಸಾಕ್ಷಾತ್ ಜೀವನು ಪರಿಶುದ್ಧ ಸಚಿತ್ಸ್ವರೂಪನೇ ಆಗಿದ್ದರೂ ಸಕಲ ಪ್ರಾಣಿಗಳ ಅಂತಃಕರಣವನ್ನು ಆಶ್ರಯಿಸಿ ಅಣವಾದಿ ಮಲತ್ರಯಸಂಬಂಧದಿಂದ ಪ್ರಾಚೀನ ಕರ್ಮಪಾಶಬದ್ಧ ನಾಗಿದ್ದಾನೆ ಸ್ವಭಾವತಃ ಜೀವನು ಶರೀರ ರಹಿತನಾ ಗಿದ್ದರೂ ಮಾಯಾಮಯ ಶರೀರಸ್ವನಾಗಿ ಜನನಮರಣ ರೂಪ ಸಂಸಾರದಲ್ಲಿ ಚಕ್ರನೇಮಿಕ್ರಮದಿಂದ ಸದಾ ಸುತ್ತುತ್ತಿದ್ದಾನೆ ಕೆಂಪು ದಾನಮಾಳದೆ ಹೂಸಿನ ಸಂಬಂಧದಿಂದ ಸ್ಫಟಿಕಮಣಿಗೆ ಕೆಂಬಣ್ಣವು ಹೇಗೆ ಬರುವದೋ ಹಾಗೆ ಅಹಂಕಾರಸಂಬಂಧದಿಂದ ಜೀವನಿಗೆ ದೇಹಾತ್ಮಾಭಿಮಾನವು ಬರುತ್ತೆ ಅಜ್ಞಾನಕರ್ಮಫಲ ವಾಗಿ, ಕರ್ಮಫಲಾನುಭವಕ್ಕೋಸ್ಕರ ನಾನಾಶರೀರ ಧಾರಿಯಾಗುತ್ತಾನೆ ಆವ ಪ್ರಯುಕ್ತ ಆತ್ಮನು ದನವಲ್ಲ, ಗಂಧರ್ವನಲ್ಲ, ಯಕ್ಷನಲ್ಲ, ರಾಕ್ಷಸನಲ್ಲ, ನರನಲ್ಲ, ಸುರುಪಕ್ಷ್ಮಾದಿರೂಪತಿರ್ಯಕ್ಕ್ರಾಣಿಯಲ್ಲ! ಪರಂತು ಆರೂ ಶರೀರಸಂಗದಿಂದ ಆಯಾ ಪೆಸರಿನ ಮೂಲಕ ವ್ಯವಹರಿಸಲ್ಪಡುತ್ತಾನೆ ಕರ್ಮಯಂತ್ರ ಪ್ರಿಯಂತ್ರಿತ ಸಂಸಾರಚಕ್ರದಲ್ಲಿ ತಿರುಗುತ್ತಿರುವ ಜೀವನಿಗೆ ಪರಮೇಶ್ವರನು ಹಿತಮಾರ್ಗವನ್ನು ಪಡೆಸಿಸಿ ಮೋಕ್ಷ ಮಾರ್ಗವನ್ನು ತೋರಿಸುತ್ತಾನೆ. ತನ್ನ ಕರ್ಮಪರಿ ಪಾಕದಿಂದ ಆನಾದಿಮಲಬಾಸನೆ ಕಳೆದುಕೊಂಡು ಶಿವ ಪ್ರಸಾದದಿಂದ ಜೀವನು ಶಿವಸ್ವರೂಪನಾಗಿ ಶಿವಲೋಕ ಸಮರಸವಾಗುವನು !!! ಅದ್ದರಿಂದ ಮುಮುಕ್ಷುಗಳು ಸದ್ಗುರುಕಾರುಣ್ಯವನ್ನು ಪಡೆದು ಸದಾಚಾರಿಷ್ಠರಾಗಿ ಶಿವಯೋಗಾಮಸಂಧಾನದಿಂದ ಶಿವಸಮರಸವ ಸಾಧಿಸ ಬೇಕೆಂದು ಹೃತ್ಪೂರ್ವಕ ಕೋರುತ್ತೇನೆ

ಕೈಯ್ಯಾಕೆ ಕೊಡಲಿಲ್ಲ ! ಮೈಯಂಜಿಸಲಿಲ್ಲ ! ।
ಅಯ್ಯ ಬಾ ಎಂಬ ನುಡಿಯಿಲ್ಲ ! ಕೈಲಾಸ !
ಕೈಯಹಿಂಜಿಗೆಯ ಸರ್ವಸ್ವ ॥೧॥
ನುಡಿಯಲ್ಲಿ ಎಳ್ಳಷ್ಟು ನಡೆಯಲ್ಲಿ ಸಿಕ್ಕಿಬರೆ !
ಪಿಡಿದರಿಂಗಿಗ ಹೊಸಬರೆ !
ಕಣ್ಣಿನ ತೆರೆಹಾಗೊಣಾ ಸರ್ವಸ್ವ ॥

ಶಿವೋಭೂತ್ವಾ ಶಿವಂಯಜೇತ್—ಶಿವನಾಗಿ ಶಿವನನ್ನು ಪೂಜಿಸಬೇಕು.

ಶಿವಾರ್ಪಣವು ಸರ್ವರಿಗೆ ಸಮೃದ್ಧಿಯನ್ನು ದಯಪಾಲಿಸಲಿ!

ಇತಿ ಶಿವಮ್ ಶಾಂತಿ:

ಶೂನ್ಯಾಧಿಪತಿಮಹೋತ್ಸವ ಮಂಗಳೂರು

ರಾಯಚೂರು ಜಿಲ್ಲಾ ಯಲಬುರ್ಗಿ ತಾಲೂಕ ಸೈಕ ಮಂಗಳೂರ ಗ್ರಾಮದ ಅರೆಲೆ ಹಿರೇಮಠದ ಪರಮ ಪೂಜ್ಯಾಧಿ ಶ್ರೀಚಿದಯೋಗೀಶ್ವರ ಶೈ॥ ಶೂನ್ಯಪೀಠಾಧಿಪತಿಗಳ ವರ ಶೂನ್ಯಾಧಿಪತ್ಯದ ಶಿಖಿಮಹೋತ್ಸವ ಶೈ॥ ಶುದ್ಧ ೧೧ ಬುಧವಾರ ಪ್ರಾತಃಕಾಲ ಶ್ರೀಚಿನ್ಮಹಸ್ವಾಮಿಗಳು ಅರೆಲೆ ಹಿರೇಮಠ ಇವರ ವೇಷ್ಟಿತ್ವದಲ್ಲಿ ಗದ್ದಿಗೆಗೆ ಮಹಾರುದ್ರಾ ಭಿಷೇಕ ಆದವಂತರ ಗಣಾಧಿಪತಿಸ್ಥಾಪನೆ ಆಯಿತು. ಮಧ್ಯಾನ್ಹ ೩ ಘಂಟೆಗೆ ಶ್ರೀ॥ ಸ್ವಾಮಿಗಳ ಭಾವಚಿತ್ರವನ್ನು ಪಲ್ಲಕ್ಕಿ ಯಲ್ಲಿರಿಸಿ ಕಳಸಹೋರಡಗಳಿಂದ ಅಲಂಕೃತವಾದ ಬೀದಿಗಳಲ್ಲಿ ಉತ್ಸವವು ಸಾಗಿ ವೈಭವದಿಂದ ನೆರವೇರಿತು ಉತ್ಸವವು ಸ್ವಸ್ಥಾನಕ್ಕೆ ಬಂದಪ್ಪಂತರ ಸಂಡಿತರ ಉಪ ನ್ಯಾಸಗಳು ಜರುಗಿದವು. ಈ ಉತ್ಸವಕ್ಕೆ ಸುತ್ತಲಿನ ಹಳ್ಳಿಯ ಜನರೂ ಭಾಗವಹಿಸಿದ್ದರು ಇವರೆಲ್ಲರಿಗೂ ಶ್ರೀಪರಮಾತ್ಮನು ನಿತ್ಯಮಂಗಲವನ್ನೀಯಲೆಂದು ಬೇಡುವ,

ಪ್ರಂಚನಗೌಡ ಪೋಲೀಸ್ ಪಾಟೀಲ,
ಮಂಗಳೂರು.

ಶ್ರೀಶೈಲ ಸೂರ್ಯಸಿಂಹಾಸನಾಧೀಶ್ವರ ಶ್ರೀ ೧೦೦೮ ಜಗದ್ಗುರು ವಾಗೀಶ ಪಂಡಿತಾರಾಧ್ಯ ಶಿವಾಚಾರ್ಯರ ಮಹಾಶ್ವಾಮಿಗಳವರ ೧೨ನೇ ವರ್ಷದ ವರ್ಧಂತ್ಯುತ್ಸವದ ನಿಮಿತ್ತವಾಗಿ ಅಭಿನಂದನೆ ಗ್ರಂಥ ಸಮರ್ಪಣೆ

ಶ್ರೀ ಕಾಶೀ ವೀರಶೈವ ವಿದ್ವತ್ಸಂಘವು, ಶ್ರೀಶೈಲ ಜಗದ್ಗುರು ವಾಗೀಶ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳವರ ೧೨ನೇ ವರ್ಷದ ವರ್ಧಂತ್ಯುತ್ಸವದ ನಿಮಿತ್ತವಾಗಿ ವೀರಶೈವ ತತ್ತ್ವಗ್ರಂಥವೊಂದನ್ನು ಪ್ರಕಟಿಸಿ, ಅರ್ಪಿಸಬೇಕೆಂದು ನಿಶ್ಚಯಿಸಿದೆ ಈ ಗ್ರಂಥವು ಮಹಾರಾಷ್ಟ್ರ ಭಾಷೆಯಲ್ಲಿ ಪ್ರಕಟವಾಗುವುದು ಗ್ರಂಥದ ಮುದ್ರಣಕಾರ್ಯವು ಈಗಾಗಲೇ ಪ್ರಾರಂಭ ವಾಗಿದೆ

ಇದೇರೀತಿಯಾಗಿ ಉಳಿದ ವೀರಶೈವ ಧಾರ್ಮಿಕ ಸಂಘ, ಸಂಸ್ಥೆಗಳು ಪ್ರತಿಯೊಮ್ಮು ಗ್ರಾಮದಲ್ಲಿಯೂ ಶ್ರದ್ಧಾಭಕ್ತಿಗುರುಗಳವರ ವರ್ಧಂತ್ಯುತ್ಸವವನ್ನು ವೈಭವ ದಿಂದ ಆಚರಿಸಿ, ಆ ಶುಭಪ್ರಸಂಗದಲ್ಲಿ ಅಭಿನಂದನ ಗ್ರಂಥಾದಿಗಳನ್ನು ಸಮರ್ಪಿಸಿ ಸೇವೆ ಸಲ್ಲಿಸಲು ಮರೆಯು ಬಾರದೆಂದು ಸವಿನಯ ನಿವೇದನೆ

ಕಾರ್ಯದರ್ಶಿ
ಕಾಶೀ ವೀರಶೈವ ವಿದ್ವತ್ಸಂಘ

ವರ್ತಮಾನ ಸಂಗ್ರಹ

ನುದ್ರಾಸ್ಪಿನ ನೂತನ ಮಂತ್ರಿಮಂಡಲ ಅಧಿಕಾರ ವಹಿಸಿಕೊಂಡಿತು

ಶ್ರೀ ಸಿ ರಾಜಗೋಪಾಲಾಚಾರ್ಯರ ನೂತನ ಮಂತ್ರಿ ಮಂಡಲವು ೧೦ನೇ ತಾರೀಕಿನ ದಿನ ಫೋರ್ಟ್‌ಸೆಯಿಂಟ್ ಜಾರ್ಜ್‌ನಲ್ಲಿ ಗವರ್ನರ್ ಶ್ರೀ ಪ್ರಕಾಶರವರ ಸಮ್ಮುಖದಲ್ಲಿ ಪ್ರಮಾಣವಚನ ಸ್ವೀಕಾರಮಾಡಿ ಅಧಿಕಾರ ವಹಿಸಿ ಕೊಂಡಿತು.

ಫೋರ್ಡ್ ಫೋರಿಯೋ

ಶ್ರೀ ರಾಜಾಜಿಯವರು ಹೋಂ ಸೆಕ್ರೆಟರಿ ಫೋರಿಯೋ ವಹಿಸಿಕೊಂಡಿದ್ದಾರೆ. ಶ್ರೀ ಸಿ. ಸುಬ್ರಹ್ಮಣ್ಯಂ ರವರು ಜಸ್ಟಿಸ್ ಸಚಿವರು. ಶ್ರೀ ಎ. ಏ ಶೆಟ್ಟಿಯವರು ಆರೋಗ್ಯಸಚಿವರು. ಶ್ರೀ ರಂಗಸ್ವಾಮಿಯವರು ಪಬ್ಲಿಕ್ ವರ್ಕ್ಸ್ ಮಂತ್ರಿ, ಡಾ॥ ಯಂ. ಕೃಷ್ಣರಾಯರು ಕೈಗಾರಿಕೆ ಮತ್ತು ಕಾರ್ಮಿಕ ಮಂತ್ರಿಗಳು.

೫೦ ಕೋಟಿ ರೂ. ಬಟ್ಟೆ ದಾಸ್ತಾನು

ಬಟ್ಟೆಗಳ ಬೆಲೆಯು ಇದ್ದಕ್ಕಿದ್ದಂತೆ ಇಳಿದುಹೋದು ದರಿಂದ ಅಹಮದಾಬಾದಿನ ಬಟ್ಟೆ ಗಿರಣಿಗಳಲ್ಲಿ ಒಟ್ಟು ಸುಮಾರು ೫೦ ಕೋಟಿ ರೂ ಗಳ ಬೆಲೆ ಬಾಳುವ ಪಕ್ಕಿ ಮತ್ತು ಬಟ್ಟೆ ದಾಸ್ತಾಪು ಕೊಳ್ಳುವವರೇ ಇಲ್ಲದೆ ದಟ್ಟಿದೆ ಯೆಂದು ವರದಿಯಾಗಿದೆ. ಇದ್ದಿಗೆ ೫೦ ಗಿರಣೀಯವರು ಕೆಲಸಗಾರರಿಗೆ ನೋಟೀಸ್ ಕೊಟ್ಟು ಮುಂದಿನ ವಾರ ಗಳಿಂದ ಕಾರ್ಯವು ಸಿಲ್ಲಸಿಲ್ಲಿಸಿರುವುದಾಗಿ ತಿಳಿಸಿ ದ್ದಾರೆ. ಇದರಿಂದ ಸುಮಾರು ೩೦ ಸಾವಿರ ಕೆಲಸಗಾರರಿಗೆ ಉದ್ಯೋಗವಿಲ್ಲದೆ ಹೋಗುವುದೆಂದು ವರದಿಯಾಗಿದೆ.

ಮೈಸೂರು ಮಂತ್ರಿಗಳ ಆಡಳಿತ ಶಾಖೆಗಳ ಹಂಚಿಕೆ

ಮುಖ್ಯಮಂತ್ರಿ ಶ್ರೀ ಕೆ ಹನುಮಂತಯ್ಯನವರು—
ಹಣಕಾಸು, ಅರಮನೆ ಮತ್ತು ಹೈಕೋರ್ಟು.
ಶ್ರೀ ಟಿ ಸಿದ್ಧಲಿಂಗಯ್ಯನವರು—
ಕೈಗಾರಿಕೆ, ವಿದ್ಯುಚ್ಛಕ್ತಿ ಮತ್ತು ವಾಣಿಜ್ಯ.
ಶ್ರೀ ಎ ಜ ರಾಮಚಂದ್ರರಾವ್—
ವಿದ್ಯಾಭ್ಯಾಸ, ನ್ಯಾಯಾಂಗ ಮತ್ತು ಸಾರ್ವ.
ಶ್ರೀ ಟಿ ಚನ್ನಯ್ಯನವರು —
ಆರೋಗ್ಯ, ಗ್ರಾಮಾಭಿವೃದ್ಧಿ ಮತ್ತು ಸ್ಥಳೀಯ ಸಂಸ್ಥೆಗಳು
ಶ್ರೀ ಕಡಿದಾಳ್ ಮಂಜಪ್ಪನವರು—
ದಿವಿನ್ಯೂ, ಪಬ್ಲಿಕ್ ವರ್ಕ್ಸ್ ಮತ್ತು ಮುಜರಾಯಿ.
ಶ್ರೀ ಎಚ್ ಸಿದ್ಧವೀರಪ್ಪನವರು—
ಒಳಾಡಳಿತ, ಆಕಾರ ಮತ್ತು ವೈನಿಸಾಯ.

ಬೆಲ್ಲದ ರಫ್ತು

೫೫,೦೦೦ ಟನ್ ಬೆಲ್ಲವನ್ನು ಭಾರತದಿಂದ ರಫ್ತು ಮಾಡಲು ಅಮಮತಿ ಕೊಡುವುದಾಗಿ ಭಾರತ ಸರ್ಕಾರ ದವರು ಪ್ರಕಟಿಸಿದ್ದಾರೆ ಜಿಲ್ಲಾಧಿಕಾರಿಯವರ ಸಕ್ಕರೆಯನ್ನು ಸರ್ಕಾರದ ಲೆಕ್ಕದಲ್ಲಿ ರಫ್ತು ಮಾಡುವ ಯೋಜನೆ ಸಹ ಇದೆಯೆಂದು ತಿಳಿಸಲಾಗಿದೆ ಈಗ ಬಜಿಸವಾಗಿ ಬಿದ್ದು ಹೋಗಿರುವ ಬೆಲ್ಲದ ಬೆಲೆ ಉತ್ತಮಗೊಳ್ಳಿದೇ ಇದ್ದರೆ ಮತ್ತಿಷ್ಟು ಬೆಲ್ಲವನ್ನು ರಫ್ತು ಮಾಡಲು ಅನಕಾಶ ಕೊಡಲಾಗುತ್ತದೆ

ಫೈದರಾಬಾದು ಕಲಾಪ್ರದರ್ಶನ

ನವದೆಹಲಿಗೆ ಫೈದರಾಬಾದಿನಿಂದ ಬಂದಿರುವ ೩೦೦ ಕ್ಕಿಂತ ಜೆಟ್ಟಿನ ಅಮೂರ್ವವಾದ ಎಸ್ತುಗೆಳನ್ನು ಫೈದರಾ ಬಾದು ಹೌಸ್‌ನಲ್ಲಿ ಪ್ರದರ್ಶಿಸುವ ಪ್ರಯತ್ನ ನಡೆಯು ತ್ತಿದೆ ಇದರ ಆರಂಭೋತ್ಸವನನ್ನು ರಾಷ್ಟ್ರಪತಿಗಳು ನೆರೆ ನೇರಿಸುವರು ವಜ್ರಗಳನ್ನು ಮೆತ್ತಿದ ಭರ್ಚಿಗಳು ಕಲಾ ಕೃತಿಗಳು, ನಾಣ್ಯಗಳ. ಚಿತ್ರಗಳು ಮುಂತಾದವುಗಳು ಬಂದಿವೆ ಹಲವು ವಸ್ತುಗಳು ೨೦೦೦ ವರ್ಷಕ್ಕಿಂತ ಹಿಂದಿನವು

ನಿಜಾಮರ ಸದಚ್ಛುತಿಗಾಗಿ ಒತ್ತಾಯ

ನಿಜಾಮರನ್ನು ಸದಚ್ಯುತರನ್ನಾಗಿ ಮಾಡಬೇಕೆಂದು ವಿರುದ್ಧ ಪಕ್ಷದವರು ಕೇಳುತ್ತಿರುವುದು ' ಸತ್ಯ ಕುಡುಬಿಗೆ ಲಾಟಿ ಪೆಟ್ಟು ' ಪಾಠದಂತಾಗಿದೆ. ಏಂಬುದಾಗಿ ಫೈದರಾ ಬಾದಿನ ಮುಖ್ಯ ಸಚಿವರಾದ ಶ್ರೀ ಬಿ ರಾಮಕೃಷ್ಣ ರಾಯರು ಈ ದಿನ ಆಸೆಂಬ್ಲಿ ಸಭೆಯಲ್ಲಿ ಮಾತನಾಡುತ್ತ ತಿಳಿಸಿದರು.

ಯುದ್ಧದ ಭಯ ಕಡಿಮೆಯಾಗಿದೆ

ಯುರೋಪಿನಲ್ಲಿ ಯುದ್ಧದ ಭಯ ಕಡಿಮೆಯಾಗಿದೆ. ಜರ್ಮನಿಯ ಬಗ್ಗೆ ರಷ್ಯದ ನೀತಿಯಷ್ಟು ನೋಡಿದರೆ ಪರಿಸ್ಥಿತಿಯು ಇನ್ನೂ ಸುಧಾರಿಸುವುದೆಂದು ಕಾಣುತ್ತದೆ ಎಂದು ಬ್ರಿಟಿಷ್ ವಿದೇಶಾಂಗ ಸಚಿವರಾದ ಮಿಸ್ಟರ್ ಅಂಥೋನಿ ಏಡನ್‌ರವರು ತಿಳಿಸಿದರು.

ಸ್ವೀಕಾರ

ಗದಗ-ಬೆಟಗೇರಿ ನಗರ ಸಭೆಯ ಉಪಾಧ್ಯಕ್ಷರೂ, ಪ್ರಸಿದ್ಧ ನರ್ತಕರೂ ಆದ ಶ್ರೀ ನಾಗಪ್ಪನವರು ತಿಪ್ಪಸ್ವಾ ಮಿಕ ಇವರ ಪಿಳ್ಳಗಳಾದ ಶ್ರೀ॥ ವೀರಭದ್ರಯ್ಯನವರು ಪಾ॥ ೨೩-೩-೩೨ ನೇ ದಿನವ ತಿಪಾಧೀನರಾದ ಸಮಯದಲ್ಲಿ ಪ್ರಭಾಪೋಷಣಾರ್ಥವಾಗಿ ಸಮರ್ಪಿಸಿದ ೫ ರೂಪಾಯಿಗಳು ಶ್ರೀ ಏ. ೨೮. ಕಿಂಡಿಪಾಳ ಪಂಚಾಚಾರ್ಯ ಸೇವಾಸಂಘದ ಸೆಕ್ರೆಟರಿ ಇವರ ಮ್ಯಾನಾ ಕಛೆರಿಯಲ್ಲಿದೆ.

ಈ ಮೇಲ್ಕಂಡ ಮಹಾಶಯರಿಗೆ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

ಸಿದ್ಧಾಂತಶಿಖಾಮಣಿ

ವೀರಶೈವಮತವಲ್ಲಿ ಅತ್ಯಪ್ರಾಮಾಣಿಕವಾದ ಪ್ರತಿಯೊಬ್ಬ ಶಾಸ್ತ್ರಾಂತಶಿವಾಮಚಾರ್ಯರಿಂದಲೂ ಸ್ವೀಕರಿಸಲ್ಪಟ್ಟಿರುವುದೂ ಈ ಮಹಾಗ್ರಂಥವಲ್ಲಿ ಶ್ರೀಜಗದ್ಗುರು ರೇಣುಕಾಚಾರ್ಯರು ಜಗದ್ಧಿತಾರ್ಥವಾಗಿ ಆತ್ಮಸಾಕ್ಷಾತ್ಕಾರಕ್ಕೆ ಬೇಕಾದ್ದೆಲ್ಲವನ್ನೂ ಅಲ್ಲಲ್ಲಿ ಸಂಗ್ರಹಿಸಿ ಸಮಸ್ತ ಶಿವಾಗಮಗಳ ಸಾರವನ್ನೂ ಸಮಸ್ತ ವೀರಶೈವಮತದ ಸಿದ್ಧಾಂತಗಳನ್ನೂ ಸಂಗ್ರಹಿಸಿ ಸಂಸ್ಕೃತದಲ್ಲಿ ಅನುಷ್ಟುಪ್ ಛಂದಸ್ಸಿನಲ್ಲಿ ಸುಮಾರು ೩೫೦೦ ಶ್ಲೋಕಗಳಲ್ಲಿ ಅತ್ಯಪೂರ್ವವಾಗಿ ರಚಿಸಿರುವ ಈ ಗ್ರಂಥವನ್ನು ಈಗ ಸುಮಾರು **೨೫ವರ್ಷ**ಗಳ ಹಿಂದೆ **ಶ್ರೀಶಿವಯೋಗಿಶಿವಾಚಾರ್ಯ**ರಂಬ ಆಚಾರ್ಯರಿಂದ ರಚಿಸಲ್ಪಟ್ಟಿರುವುದು. ಈ ಮಹಾಗ್ರಂಥವು ೨೦೦೪ಕ್ಕೆ ಸಮಸ್ತ ಹೂಡುಸ್ತಂಭಪರಿಚಯವನ್ನು ಹೊಂದಿರುವುದೆಂದೂ, ಇದಕ್ಕೆ ಇಂದಿನವರೆಗೆ ಅನೇಕರು ಅನೇಕ ವಿವರಣೆ ವ್ಯಾಖ್ಯಾನಗಳನ್ನು ಬರೆದಿರುತ್ತಾರೆ ಆದರೆ ಒಂದು ಸ್ವಾಮ್ಯಸಿದ್ಧಿಯಾಗಲಿ ಗೂಢಾರ್ಥಗರ್ಭಿತವಾದ ತಿರ್ಥಗಳಿಗೆ ಸರಿಯಾದ ಆಧಾರವು ಒದಿಯಲ್ಪಟ್ಟಿಲ್ಲ ಈ ಕೊರತೆಯನ್ನು ದೂರಮಾಡುವುದಕ್ಕಾಗಿ **ಪಂಡಿತ ಶ್ರೀಕಾಶೀನಾಥ ಶಾಸ್ತ್ರಿಗಳವರು** ಬಹಳ ಶ್ರಮವಹಿಸಿ ಈ ಗ್ರಂಥಕ್ಕೆ ಕನ್ನಡ ಭಾಷೆಯಲ್ಲಿ ಬಹು ಸರಳವಾದ ವ್ಯಾಖ್ಯಾನವನ್ನು ರಚಿಸಿ, ಸಮಸ್ತ ವೀರಶೈವರ ಕೃತಜ್ಞತೆಗೆ ಪಾತ್ರರಾಗಿರುತ್ತಾರೆ ಈ ಗ್ರಂಥವನ್ನು ಹಿನ್ನೋಟಾಪೇಕ್ಷೆ ಪಡಿಕರ ವ್ಯಾಖ್ಯಾನವು ಮಾತ್ರವಲ್ಲದೆ ಪ್ರತಿಯೊಬ್ಬ ವೀರಶೈವನೂ ಸಹ ಅವಶ್ಯವಾಗಿ ಇಟ್ಟುಕೊಳ್ಳಲೇಬೇಕಾದ ಸಂಗ್ರಹಗ್ರಂಥವೆಂದೂ ಹೇಳಲು ಸಂತೋಷಿಸುತ್ತೇವೆ. ಈ ಗ್ರಂಥವನ್ನು ಮುದ್ರಿಸಲ್ಪಟ್ಟಿದೆ ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಶ್ರೀಜಗದ್ಗುರು ರೇಣುಕಾಚಾರ್ಯರ ಜೀವನಚರಿತ್ರೆಯನ್ನೂ ಸಂಗ್ರಹಿಸಿ ಕೊಡಲಾಗಿದೆ. ಈ ಗ್ರಂಥವನ್ನು ಮುದ್ರಿಸಲ್ಪಟ್ಟಿರುವುದರಿಂದ ಗ್ರಂಥದ ಸೌಂದರ್ಯವೂ ಪ್ರಮಾಣೀಕರವಾಗಿದೆ. ಕೈವಲ್ಯಕಲ್ಪತರುವಿನಂತಿರುವ ಈ ಅಮೂಲ್ಯಗ್ರಂಥವನ್ನು ವೀರಶೈವರೆಲ್ಲರೂ ಆಪೇಕ್ಷಿಸಿ ಪಡೆಯಬೇಕು

ಬೆಲೆ ೩ ರೂಪಾಯಿ.

ಮನೋಹರವಾದ ಫೋಟೋಗಳು.

ಶ್ರೀಜಗದ್ಗುರು ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦×೧೫ ಬೆಲೆ ಒಂದಕ್ಕೆ	೦—೬—೦
ಶ್ರೀರೇಣುಕಾಚಾರ್ಯರ ಲಿಂಗಾವತಾರದ ಫೋಟೋ (ನಾನಾವಿಧಬಣ್ಣಗಳಿಂದ ಮುದ್ರಿತವಾದುದು) ಸೈಜು ೧೪×೧೦ ಬೆಲೆ	೦—೬—೦
ಶ್ರೀಜಗದ್ಗುರು ಪಂಡಿತಾರಾಧ್ಯರು ಪಂಚಮಪೀಠಾಧಿಪತಿಗಳಿಗೆ ಶಿವಾದ್ವೈತವನ್ನು ಉಪದೇಶಿಸುವ ಫೋಟೋ	೦—೩—೦
ಶ್ರೀ ಜಗದ್ಗುರು ಪಂಡಿತಾರಾಧ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ಒಂದಕ್ಕೆ	೦—೩—೦
" " " ಚಿಕ್ಕ ಸೈಜು ಬೆಲೆ	೦—೧—೬
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಶಟ್ಸ್ಥಲಜ್ಞಾನ ಮಾಡುವ ಫೋಟೋ	೦—೧—೬
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಶಟ್ಸ್ಥಲಜ್ಞಾನ ಮಾಡುವ ಫೋಟೋ	೦—೧—೬
ಶ್ರೀರೇಣುಕಾಚಾರ್ಯರು ಶ್ರೀಲಂಕೇಶ್ವರಾರ್ಯರಿಗೆ ಚಂದ್ರಮೌಳೀಶ್ವರಲಿಂಗವನ್ನು ಅನುಗ್ರಹಿಸುವ ಫೋಟೋ	೦—೧—೬
ಶ್ರೀರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನೆಯಂತೆ ೪ ಕೋಟಿ ಶಿವಲಿಂಗಗಳನ್ನು ಸ್ಥಾಪಿಸುವ ಫೋಟೋ	೦—೧—೬
ಶ್ರೀ ಜಗದ್ಗುರು ವೀರಭದ್ರಶಿವಾಚಾರ್ಯಮುಖ್ಯಸ್ಥಾಪಿಸುವ ಫೋಟೋ (ನಾನಾವರ್ಣಬಣ್ಣದ್ದು)	೦—೪—೦
ಶ್ರೀಕಾಶೀಜಗದ್ಗುರುಗಳಿಗೆ ಶ್ರೀರುದ್ರಭೂಪತಿಗೆ ಜಗದ್ಗುರುಗಳು ಕಿರೀಟಧಾರಣಮಾಡುವ ಫೋಟೋ	೦—೧—೬
ಸದ್ಯ: ವೀರಾರೋಹಣಮಾಡಿರುವ ಶ್ರೀಕಾಶೀಜಗದ್ಗುರು ವಿಶ್ವೇಶ್ವರಶಿವಾಚಾರ್ಯಪಟ್ಟಾಸ್ಥಾನಿಗಳವರ ಫೋಟೋ	೦—೪—೦
ಶ್ರೀಷಣ್ಮುಖಯೋಗೀಂದ್ರಸಂಸ್ಥಾಪಿತಶ್ರೀ ಶ್ರೀ ಜಗದ್ಗುರು ಸ್ವಾಮಿಲಿಂಗಶಿವ ಚಿಂದಗಿ ಫೋಟೋ	೦—೧—೬
ಶ್ರೀಮದ್ರಂಭಾಪುರೀ ವೀರಭದ್ರೇಶ್ವರ ಜಗದ್ಗುರು ಶಿವಾನಂದಶಿವಾ ಚಿಂಯ ಕುಮಾರಸ್ವಾಮಿ ಗಂಗಾಧರ ಫೋಟೋ	೦—೧—೬
ಶ್ರೀಮಜ್ಜಗದ್ಗುರುಯೋಗೀಂದ್ರ ರುಗಳವರ ಸಮಾಧಿಯಲ್ಲಿ ಶ್ರೀ ಶಿವಾಚಾರ್ಯ ಸ್ವಾಮಿಗಳವರು ಕುಳಿತುಕೊಂಡಿರುವ ಫೋಟೋ	೦—೧—೬
ಕಂಡಿಗೆ ಶ್ರೀಕಾಶೀಜಗದ್ಗುರುಗಳವರ ಫೋಟೋ (ನಾನಾವಿಧ ಒಬ್ಬಣಿಗಿಂದ ಮುದ್ರಿತವಾದುದು) ಚಿಕ್ಕಸೈಜು ಒಂದಕ್ಕೆ	೦—೨—೦
ಸಂಡಿಹ ಶ್ರೀಕಾಶೀಜಗದ್ಗುರುಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ದೊಡ್ಡಸೈಜು ಒಂದಕ್ಕೆ	೦—೪—೦
ಶ್ರೀ ಜಗದ್ಗುರು ಉಜ್ಜಯಿನೀ ಸಿರಿಯ ಮಹಾಮಂದಿರದ ಅತ್ಯಂ ಸುಂದರವಾದ ಫೋಟೋ ಒಂದಕ್ಕೆ	೦—೧—೬
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಶಕ್ತಿಪೀಠ ಸುಂದರ ಫೋಟೋ ಒಂದಕ್ಕೆ	೦—೧—೬
ಶ್ರೀ ಜಗದ್ಗುರು ಕೇದಾರೇಶ್ವರಾಸನದ ಅತ್ಯಂತ ಸುಂದರವಾದ ಗೋಡೆಗಾರ ಫೋಟೋ	೦—೧—೬
ಶ್ರೀರಂಭಾಪುರೀ ಜಗದ್ಗುರುಗಳವರ ಸ್ವಸ್ಥಿಯಲ್ಲಿ ಶ್ರೀವ ಶ್ರೀಚಾರ್ಯಾವರು ವಿರಾಜಿಸುತ್ತಿರುವ ಫೋಟೋ	೦—೧—೬
ಬೆಂಗಳೂರು ಕಂಟೋನ್ಮೆಂಟ್‌ನಲ್ಲಿ ಶ್ರೀ ವೀರಸಿಂಹಾಸನ ಜಗದ್ಗುರುಗಳ ಅಶ್ವಾರೂಢ ಸಲ್ಲಿಕೆ ಮಹೋತ್ಸವದ ಫೋಟೋ	೦—೧—೬
ಶ್ರೀಜಗದ್ಗುರುರಂಭಾಪುರೀ ವೀರಪೀಠದಲ್ಲಿ ಸ್ಥಾಪಿಸಲ್ಪಟ್ಟಿರುವ ವಿಶಾಲಾಕಸನಗಳು	೦—೪—೦

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಸಟ (೩ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೫ನೆಯ ಆವೃತ್ತಿ) ...	೧ ಆಣೆ
ಶ್ರೀಜಗದ್ಗುರು ರೇಣುಕಾಚಾರ್ಯ ಕೀರ್ತನ	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೯ನೆಯ ಆವೃತ್ತಿ)	೩ ಆಣೆ
ಶ್ರೀಷಣ್ಮುಖಾಚಾರ್ಯ ಪಂಗಲಸ್ತೋತ್ರಾವಳಿ (೧೧ನೆಯ ಆವೃತ್ತಿ)	೨ ಆಣೆ
ಅನುವಾದಿಸಿದಷಸ್ಥಲದರ್ಪಣ (೪ನೆಯ ಆವೃತ್ತಿ) ...	೨ ಆಣೆ
ಶ್ರೀರೇಣುಕಾಚಾರ್ಯಾಷ್ಟಕ (೩ನೆಯ ಆವೃತ್ತಿ) ...	೨ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ ...	೨ ಆಣೆ
ಶಿವಕಥೆ ವಿಲಾಪ	೨ ಆಣೆ
ವಿಜಯನಗರ ಸಾಮ್ರಾಜ್ಯವೂ ಶ್ರೀರೇಣುಕಾಚಾರ್ಯರೂ ...	೨ ಆಣೆ
ಬಲ್ವಮಾಚಾರ್ಯ (೨ನೆಯ ಆವೃತ್ತಿ) ...	೨ ಆಣೆ
ಸಂಪಾಕಾರ್ಯಪ್ರಕಾಶ	೩ ಆಣೆ
ಶ್ರೀ ಗಾಯತ್ರಿ ಪ್ರಕಾಶಿಕಾ	೩ ಆಣೆ
ಶ್ರೀಗುರುಶತಕ್ವಸ್ತವ (೩ನೆಯ ಆವೃತ್ತಿ) ...	೩ ಆಣೆ
ವೀರಶೈವಾಚಾರವಿಧಿ (೪ನೆಯ ಆವೃತ್ತಿ)	೪ ಆಣೆ
ಲಿಂಗಧಾರಣವಿಧಿ	೪ ಆಣೆ
ವಿವಾದವಿಧಿ (೪ನೆಯ ಆವೃತ್ತಿ)	೪ ಆಣೆ
ಶ್ರೀಸಂಪತಿಕಾರ್ಯಾರ್ಯರ ಕಾಲನಿರ್ಣಯ ...	೪ ಆಣೆ
ವೀರಶೈವ ಪ್ರಾರ್ಥನೆಪ್ರಕಾಶ	೪ ಆಣೆ
ವೈದಿಕವಾಙ್ಮಯರಹಸ್ಯ	೪ ಆಣೆ
ಶ್ರೀ ಜಗದ್ಗುರು ಗಂಜಿಚಾರ್ಯರ ನಾಮಾವಳಿ (೩ನೆಯ ಆವೃತ್ತಿ) ...	೪ ಆಣೆ
ಶೈವಸ್ತವನಿಷಕ್ಷಂಗ್ರಹ (ಸಂಸ್ಕೃತ) (೭ ನೆಯ ಆವೃತ್ತಿ)	೬ ಆಣೆ
ಸನ್ಯಾಸಾಶ್ರಮವಿವಿಮರ್ಶತತ್ವಸ್ಫಿರೀಕರಣ (೩ನೆಯ ಆವೃತ್ತಿ) ...	೬ ಆಣೆ
ವೀರಶೈವಾಂಶ್ಯೇಷ್ಟಿ-ಶಾಸ್ತ್ರದ್ವಿವಿಧಿ	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಶಾಸ್ತ್ರ ಚ್ಛಾಯೆ ೧೦) ...	೮ ಆಣೆ
ಶಿವಾದ್ವೈತಕಸರಭಾಷಾ (ಸಂಸ್ಕೃತ)	೮ ಆಣೆ
ವೀರಶೈವಮಹಾತ್ಮರು	೮ ಆಣೆ
ಬಸವಧ್ವಾಂತವಿವಾಕರ (೨ನೆಯ ಆವೃತ್ತಿ)	೮ ಆಣೆ
ಲಿಂಗಮಪರಿಜ್ಞಾನ	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ
ಶ್ರೀಜಗದ್ಗುರು ಶಿವಾನಂದವಿಜಯ	೮ ಆಣೆ
ಶ್ರೀಜಗದ್ಗುರು ವಿಶ್ವಕರ್ಣವಿಜಯ ನಕ್ಷತ್ರಮಾಲಿಕಾ	೮ ಆಣೆ
ಕನ್ನಡ ನ್ಯಾಯಶತಕಕಮ್	೮ ಆಣೆ
ಸಿದ್ಧಾಂತಸಾರಾವಳಿ (ಶ್ರೀಲೋಚನಶಿವಾಚಾರ್ಯಕೃತ)	೧೨ ಆಣೆ
ಶಿಖಾಸೂತ್ರಸಿದ್ಧಾಂತದರ್ಪಣ	೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ಪ್ರಾಚೀನತ್ವ	೧ ರೂ
ನೂಹೇಶ್ವರ ದೀಕ್ಷಾವಿಧಿ (೩ನೆಯ ಆವೃತ್ತಿ)	೧ ರೂ
ವಿವೇಕಮುಕ್ತಾವಳಿ	೧ ರೂ
ವಿಚಾರಸಾರಾವಳಿ	೧ ರೂ
ವೈದಿಕಶಿವಪೂಜಾವಿಧಿ (ವೈದಿಕಸ್ತವಯುಕ್ತಸಾಮಯ ೩ನೆಯ ಆವೃತ್ತಿ)	೧॥ ರೂ
ಶ್ರೀಜಗದ್ಗುರು ಪಂಜಾಚಾರ್ಯ ಸ್ತೋತ್ರರತ್ನಾಕರ	೧॥ ರೂ
ಸಚಿತ್ರ ರೇಣುಕವಿಜಯ (೩ ನೆಯ ಆವೃತ್ತಿ) ...	೨ ರೂ
ಶಿವಾಗಮಸಂಗ್ರಹ (ಚತುರ್ವಜ್ರ ಸ್ಥಾನಾಗಮ-ಕಾಮಿಕಾಗಮ-ಮಕುಟಾಗಮ ಸೂಕ್ಷ್ಮಾಗಮಗಳಿಂದ ಕೂಡಿರುವುದು)	೨ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ)	೨॥ ರೂ
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ) ...	೩ ರೂ
ವೀರಶೈವರತ್ನ (೩ನೆಯ ಆವೃತ್ತಿ, ೩೦ ಮಹತ್ವದ ಫೋಟೋಗಳಿರುವುದು)	೩ ರೂ
ಶಿವಾದ್ವೈತಮಂಜರಿ (ಕನ್ನಡಪತ್ರಿಕಾವತಾರ ೧೩೮೮ ಪುಟ) ...	೧೨ ರೂ
A brief life-sketch of Pandit Sri Kashinatha Shastriji (*English*)	**4 As**
The Philosophical Aspect of Viraasaivism (*English*)	**8 As**
Speeches by Pandit Shri Kashinatha Shastriji (*English*)	**12 As**
ಸಿದ್ಧಾಂತಶಿಖಾಮಣಿ (ಸಂಸ್ಕೃತ)	೩ ರೂ.
ವೀರಶೈವರತ್ನ (ಮರಾಠಿ)	೧ ರೂ
ಮಹಾನಾರಾಯಣೋಪನಿಷತ್ (ವೀರಶೈವಭಾಷ್ಯ-ಸಂಸ್ಕೃತ)	೧ ರೂ.
ನಂದಿಕೇಶ್ವರಕಾರಿಕಾ (ಸಂಸ್ಕೃತ) ...	೨ ಆಣೆ

ವ್ಯವಸ್ಥೇದರ್ಶಿ—ಶ್ರೀಪಂಚಾಚಾರ್ಯಾ ಎಲೆಕ್ಟ್ರಿಕ್, ಪ್ರೆಸ್, ಮೈಸೂರು.

Edited, Printed and Published by Brahmmath Mahadevaiah at Shri Panchacharya Electric Press, Sayaji Rao Road, Mysore.

REGISTERED No. M. 2266 ॥ ಶ್ರೀಜಗದ್ಗುರು ರಂಭಾಪುರೀ ಪಂಚಾಚಾರ್ಯಪ್ರಭಾ ಪ್ರಸೀದಂತು ॥ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು

ಪಂಚಾಸ್ಯಾನನಸಂಕಜಾತಜನಿತರ್ ಪಂಚಾಸ್ಯವೀಣಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಮೋದಕರ್ । ಪಂಚಾಚಾರ್ಯಜಗದ್ಗುರೂತ್ತಮವರ್ ಪಾಲಿಪ್ಪುದೀಲೋಕಮಂ ॥

ಸಂಸ್ಥಾಪಕರು— ನಾಗನೂರು ಬೃಹನ್ಮಹಾಧ್ಯಕ್ಷರಾದ ವೇ॥ ಪಂ॥ ಶ್ರೀ ಶಾಸ್ತ್ರೀಶಾಸ್ತ್ರಿಗಳವರು.

ಶಾಶ್ವತ ಚಂದಾ ಪರಮ್ಯಳವರಿಗೆ ೩ ರೂ ಸಂಪಾದಕರು— ನಾಗನೂರು ಬೃ॥ ಮಹಾದೇವಯ್ಯನವರು ವಿ ಪಿ ಖರ್ಚು ಸೇರಿ ೩ ರೂ ೬ ಆಣೆ

ಸಂಪುಟ ೩೫] ಸೋಮವಾರ ತಾ॥ ೨೧ ನೇ ಏಪ್ರಿಲ್ ೧೯೫೨ [ಸಂಚಿಕೆ ೪೪

ಪತ್ರವ್ಯವಹಾರ

[ಬಾತ್ಮೀದಾರರು ಅಭಿಪ್ರಾಯ ಪಡುವ ಲೇಖನಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ ಎಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡತಕ್ಕದ್ದು —ಸಂ]

ಸಮಸ್ತ ಧರ್ಮಾದವರಿಗೆ ಒತ್ತೋಪದೇಶ

ವೀರಾಪುರ

ಯಲಬುರಗಿ ತಾಲೂಕ ವೈಕಿ ವೀರಾಪುರ ಗ್ರಾಮವಕ್ಕೆ ಗಡಿಗೆ ಶ್ರೀಜಗದ್ಗುರು ರೇಣುಕಾಚಾರ್ಯ ಮಂದಿರ ಸಂಸ್ಥಾಪಕರೂ, ಧರ್ಮಮೋಧ ಕಿರೀಮಣಿ ಪದವೀ ಭೂಷಿತರೂ ಆದ ಶ್ರೀ॥ ಷ॥ ಬ್ರ॥ ಪಂಡಿತ ರೇವಣಸಿದ್ಧ ಶಿವಾಚಾರ್ಯ ಮಹಾಸ್ವಾಮಿಗಳು ದಯಮಾಡಿಸಿದರು ಪುರಪ್ರಮುಖರು ದರ್ಶನಮಾಡಿಕೊಂಡುಬಳಿಕ ತಾರೀಖು ೩-೪-೫೨ ನೇ ದಿವಸ ಶ್ರೀಮಂತರೂ ಗುರುಭಕ್ತಿಯಲ್ಲಿ ಧುರೀಣರೂ ಆದ ಘಕೀರಸೌಡರು ಪಾಟೀಲ ಇವರ ಭವನದಲ್ಲಿ ಮಹಾಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ಸಭೆಯು ನಡೆಯಿತು- ಪ್ರಥಮದಲ್ಲಿ ವೇ॥ ಶಾಂತಯ್ಯನವರು ಹಾರ್ಮೋನಿ ಇವರು ಶ್ರೀಜಗದ್ಗುರು ಪಂಚಾಚಾರ್ಯರ ಮಂಗಲಸ್ತೋತ್ರಗಳನ್ನು ಹಾಡಿದ ಬಳಿಕ ಮಹಾಸ್ವಾಮಿಗಳವರು ಸಂಗೀತಕಲೆಯ ಮಹತ್ವವನ್ನು ತೋರಿ ಮಾಡಿದ ವಿಷಯವೇನೆಂದರೆ ನೀವೆಲ್ಲರು ಹಿಂದೆ ಮಾಡಿದ ಪುಣ್ಯದ ಬೆಳಕಿನಿಂದಲೇ ಮಾನವರಾಗಿ ಜನಿಸಿರುವಿರಿ ಅಷಾಚಾರಿಗಳಾಗಿ ಜೀವನ ಪರಿಯಬಾರದು. ಸದಾಚಾರ ವೆಂಬುದು ಮೋಕ್ಷಮಾರ್ಗ ತೋರಿಸಲಿಕ್ಕೆ ಕೈದೀವಟಿಗೆಯಂತೆ ಇರುವದು. ಪ್ರತಿಯೊಬ್ಬ ಭಾರತೀಯರು ಗುರು ಭಕ್ತಿ, ಶಿವಭಕ್ತಿಯಲ್ಲಿ ಧುರೀಣರಾಗಬೇಕು. ಧರ್ಮ ಗ್ರಂಥಗಳಲ್ಲಿ ಸಂಬಿಕೆ ಇಡಬೇಕು ಕೆಲವರು ಧರ್ಮ ಗ್ರಂಥಗಳು ಹೇಳದಂತೆ ಪ್ರಥೆಯಲ್ಲಿ ಮೌಢ್ಯಬ್ಧಂಕೆ ವರ್ತನ ಮಾಡುತ್ತಾರೆ. ಇವರೀಗೂ ಗ್ರಂಥಗಳಿಗೂ ಯಾವ ಸಂಬಂಧವೇ ಇಲ್ಲದಂತೆ ಆಗಿದೆ ಇದರಿಂದ ಧರ್ಮದ ಕತ್ತು ಸಹಿತ ಸಿಲ್ಲದಂತೆ ಆಗಿರುವದು ರಾಜನೀತಿ ಯಲ್ಲಿಯೂ, ಧರ್ಮನೀತಿಯಲ್ಲಿಯೂ ಬಲವಾದ ಸಂಬಿಕೆ ಇರಬೇಕು ಅಂತೆಯೇ ಹಿಂದೆ ಆಗಿಹೋದ ಮಹಾತ್ಮರು ಕವಿಗಳು-ಪಂಡಿತರು ಪರತಿವನ ಕೃಪೆಯನ್ನು ಪಡೆದು ಚಿರಸ್ಮರಣೀಯರಾದ ಶ್ರೇಷ್ಠರೆಯನ್ನು ಪಡೆದಿರುವರು. ಅದಕಾಗಿ ಹರಗುರುದಯ ತಪ್ಪಿದ ಮೇಲೆ ಶೀತು ಯಾರೋ ಅವರ್ಯಾರೋ ಅನ್ನುವದಕ್ಕೆ ವಚನವನ್ನಾ ಪರೂ ಕೇಳಿರಿ

ಹರಗುರುದಯ ತಪ್ಪಿದ ಮೇಲೆ ಯಾರಿಗ್ಯಾರಿಲ್ಲವೋ। ಸಿರಸಂಪತ್ತು ನಾಳಿನ್ನು ದಿವಿಗಿಯಂತೆ ಪೋಗುವದು। ಶರೀರವಾದರೂ ಪೀರಮೇಲನೆ ಗುರುಳಿಯಂತೆ ಆಸ್ಥಿ ಉರ್ವೋ। ನಾಳಿಬ್ಬು ಕಾಲಕೆ ಕುರಿಯಾಸಮಾಳ್ಳಂತಿ। ಶಕ್ತಿ ಇರುವಾಗಲೇ ಧರ್ಮರಿತೀರ್ಗಳು ಪಡೆಮು। ಧನ್ಯಾಗನೆಂದ ಚಿಕ್ಕಮಣ್ಣಾರ ಗುರು ರೇಣುಕಪೀವ ॥

ಈ ವಚನದ ರಹಸ್ಯವನ್ನು ಮಹಪುರುಷರಾಗಿ ಅರಿತುತೋರ್ಪರಿ. ಭುರುಹರಂತೂ " ನೋರಿತಿಪ್ಪದಾಸೆ ಗೆಂಜಲತಿಂದ ಪರಿಯಂತೆ " ಕೆಲವರು ಕಂಡಕ್ಕ-ಡವರಲ್ಲಿ ಭೋಜನಮಾಡುತ್ತಾ ಧರ್ಮಶ್ರದ್ಧೆಗೆ ತಿಲಾಂಜಲಿ ಬಿಟ್ಟಿರುವರು ಇಂತಹ ಜನರಿಗೆ ಇಹಪರಗಳಲ್ಲಿ ಸುಖ ಎಂದಿಗೂ ಸಿಗಲಾರದು ಈಗಿನ ಕಾಲದಲ್ಲಿ ಧರ್ಮದಲ್ಲಿ ನಂಬಿಕೆ ಭಕ್ತಿ ವಿಶ್ವಾಸಗಳು ಕೇವಲ ಸ್ತ್ರೀಯರಲ್ಲಿ ಮಾತ್ರ ಉಳಿದಿರುವೆಂದು ಬಲವಾಗಿ ಹೇಳಬಹುದಾಗಿದೆ ಹಿಂದೆ ಆಗಿಹೋದ ಭಾರತಮಾತೆಯರಾದ ಮೇರು ತಾಯಿ, ಹೆಮ್ಮಂಪ್ತಿ, ಸೌದಾಮಿನಿ, ಅನಲಾಯಿ, ಪ್ರತಾಪಿ, ಲೋಪಾಮುದ್ರೆ, ಅರುಂಧತಿ, ರೇಣುಕಾದೇವಿ, ತಾಯಿ ಮಾಯಕ್ಕ, ನೈದೇವಿ, ಮೇಳಿಜ್ವಲಿ, ಮೈತ್ರಾವನಿ, ಕಡಿದೇವಿ, ಭುವನಸುಂದರಿ, ಕಾಂಡ್ಲಿಕಾ, ಪ್ರಾಪ್ತಿ, ಭೂಮಾತಿ, ಸತಿ ಸಾವಿತ್ರಿ, ಧರ್ಮದೇವಿ, ಅಶ್ವಿಮಹದೇವಿ, ಶಾಂತಕುಮಾರಿ, ತಾಯಿ, ಬ್ರೌಪದಿ, ನುಂಡೋದರಿ, ಹೆಮರಡ್ಡಿ ಮಲ್ಲಮಾಂಬೆ, ಕೆತ್ತೂರು ಚನ್ನಮ್ಮ ಮೊದಲಾದ ಸ್ತ್ರೀಯರು ಅನೋಘವಾದ ಗುರುಭಕ್ತಿ, ಶಿವಗಕ್ತಿಯಲ್ಲಿಯೇ ಮಗ್ನರಾಗಿ ಮಹಾ ಪತಿವ್ರತಾ ಕಿರೀಮಣಿಯರಾಗಿ ಕೇವಲ ಭಕ್ತಿಮಾರ್ಗವನ್ನೇ ಅನುಸರಿಸಿ ಹೆಸರುವಾಸಿಗಳಾಗಿರುವರು ಈಗಿನ ಸ್ತ್ರೀಯರು ಇವರ ಮಾರ್ಗವನ್ನೇ ಹಿಡಿದು ನಡೆದು ಧನ್ಯರಾಗಬೇಕು ಪ್ರಾತಃಕಾಲದಲ್ಲಿ ಎದ್ದು ಪತಿಗಳನು ಸ್ಮರಿಸಿ, ಗುರುಗಳಿಗೆ ವಂದಿಸಿ, ಅತ್ತೆಮಾವಂದಿರ ಹಿರಿಯರ ಸೇವೆಯನ್ನು ಮಾಡಬೇಕು ಪತಿಯಲ್ಲಿ ನಮ್ರತೆ ಉಳ್ಳವರಾಗಿರಬೇಕು ಮನೆಗೆ ಬಂದ ಅತಿಥಿಗಳಿಗೆ ಅನ್ನೋದಕ ಕೊಟ್ಟು ಪರೋಪಕಾರಿಗಳಾಗಬೇಕು. ಸತ್ಯವಾದ ವಾಕ್ಯವನ್ನೇ ನುಡಿಯಬೇಕು. ಸದಾ ಲಿಂಗಧಾರಣ ಶಿವಪೂಜಾವ್ರತಗಳನ್ನು ಮಾಡಬೇಕು ಜನರಲ್ಲಿ ದಯೆಯನ್ನೇ ತೋರಿಸಬೇಕು ಭಕ್ತಿಶಾಸ್ತ್ರವಾದ ವಾಕ್ಯಗಳನ್ನು ಮಿಡಿಯಲಾಗದು ಸದ್ಭರ್ತಪಗಳಲ್ಲೇ ಕಾಲ ಕಳೆಯಬೇಕು. ಯಾವಾಗಲೂ ಗೌರವದ ಕಡೆಗೆ ಲಕ್ಷವಾಗಿರಬೇಕು. ಕವಿಗಳು ಮಾಡಿದ ಮಂಗಲ ಸ್ತೋತ್ರಗಳನ್ನೇ ಹಾಡಬೇಕು. ಹೊಳ್ಳು ಹಾಡುಗಳನ್ನು ಹಾಡಬಾರದು. ಇದರಿಂದ ಯಾವ ಫಲವೂ ಸಿಗಲಾರದು ಇದ್ದ ಪುಣ್ಯಾ ಕೂಡ ಹೋಗುತ್ತದೆ. ಹಳ್ಳಿಯಮ್ಮ ಹುಳ್ಳಿಸಲಾಗದು. ಶ್ರೀಗೌರೀದೇವಿಯಂತೆ ಮೂರು ಬೆರಳುಗಳಿಂದಲೇ ವಿಭೂತಿಯನ್ನು ಧರಿಸಬೇಕಾ ಗುರುಪಟ್ಟಬರಾಧಿಕಾರಿಗಳಲ್ಲಿ ಶಿವಬೀಜ್ಞೆಳುಳ್ಳವರಾಗಬೇಕು. ಧರ್ಮಶಾಸ್ತ್ರಗಳಲ್ಲಿ ನಂಬಿಗೆ ಇರಬೇಕು " ವಿಶ್ವಾಸೋ ಫಲದಾಯಕಃ " ಎಂಬಂತೆ ಜನರಿಯಲ್ಲಿ ತುಂಬಾ ವಿಶ್ವಾಸವಿರಬೇಕು. ಈ ಪ್ರಕಾರ ಸದ್ಭೋಧೆಯನ್ನು ಮಾಡುತ್ತಿರುವ ಶ್ರೀಗಳು ಗದಗಿನಲ್ಲಿ ಶ್ರೀಜಗದ್ಗುರು ರೇಣುಕಾಚಾರ್ಯ ಮಂದಿರದ ಪ್ರಸಾದ ನಿಲಯ ಕಟ್ಟಡದ ಕಾರ್ಯವನ್ನು ಅರಂಭಿಸುವುದರಿಂದ ಸಕಲ ಧರ್ಮ ಪರರು ಪರಮಾವಧಿ ಧನಸಹಾಯಮಾಡಿ ಪುಣ್ಯಭಾಗಿಗಳಾಗಿಬೇಕು. ಮಹಾಸ್ವಾಮಿಗಳವರು ತಮ್ಮ ಶರೀರ ವನ್ನೇ ಸಮಾಜಕಲಿಸಕ್ಕೆ ಮೀಸಲಾಗಿ ತೆಗೆದು ೨೦ ವರ್ಷ ಪರ್ಯಂತರ ಸಭೆಗಳನ್ನು ಮಾಡುತ್ತ ಕರ್ನಾಟಕ ಕಂಧ್ರ ಪ್ರದೇಶದಲ್ಲಿ ಕೂಡ ಭೋಧಮಾಡಿರುವರು. ಇಂತಹ ಸುಧಾರನೆಯ ಮಹಾಸ್ವಾಮಿಗಳವರಿಗೆ ಸಹಾಯಸೀಡು ವದು ಯೋಗ್ಯವಾಗಿದೆ

ವೇ॥ ಶಿವನಯ್ಯಸ್ವಾಮಿ ಒಡಿಯರ್,
ವೀರಾಪುರ

ಶ್ರೀಜಗದ್ಗುರು ರಂಭಾಪುರಿ ಮಹಾಪೀಠದ ಸಂದರ್ಶನ

ಶ್ರೀ ಮಳಲಿ ಮಠದ ಸ್ಥಿರಪಟ್ಟಾಧ್ಯಕ್ಷರಾದ ಶ್ರೀ ಗುರುನಾಗಾರ್ಜುನ ಶಿವಾಚಾರ್ಯಮಹಾಸ್ವಾಮಿಗಳವರು ತಮ್ಮ 'ಮೂಲಗುರುಪೀಠವಾಗಿದ್ದ ರಂಭಾಪುರಿ (ಬಾಳೆಹೊನ್ನೂರಿ) ಮಠವನ್ನು ಸಂದರ್ಶಿಸುವುದಕ್ಕಾಗಿ ಕಡಲೆದುರ್ಗ ಸಂಸ್ಥಾನಮಠದ ಜರಪಟ್ಟಾಧ್ಯಕ್ಷರಾದ ಶ್ರೀ ಬಸವಲಿಂಗಶಿವಾಚಾರ್ಯಮಹಾಸ್ವಾಮಿಗಳು ಮಠದ ಶಿಷ್ಯರಾದ ಶ್ರೀ ಈಶ್ವರಪ್ಪನವರು, ಶ್ರೀ ಹಾಲ್ಕಳ್ಳಿ ಶೆಟ್ಟಪ್ಪನವರ ರುದ್ರಪ್ಪನವರು ಇವ್ಹಿಂತರ ಶಿಷ್ಯವುಂಡಳಿ ಸಮೇತ ತಾ॥ ೧೫-೪-೫೨ ನೇ ದಿವಸ ಭೀಮಕ್ಕೆ ದಯಮಾಡಿಸಿದರು ಶ್ರೀ ವೀರಭದ್ರದೇವಸ್ವಾಮದಲ್ಲಿ ಶ್ರೀಗಳವರಿಂದ ಮೌಢಾರುದ್ರಾಭಿಷೇಕ ಗಣಾರಾಧನೆ ಮೊದಲಾದ ಕಾರ್ಯಗಳು ಜರುಗಿದವ್ಹ ಹಾನೇರಿ ಮಠದ ವೇ॥ ಶಿವಕುಮಾರಶಾಸ್ತ್ರಿಗಳವರಿಂದ ವೈದಿಕವು ಪರಿಯಾಗಿ ನಡೆಯುಲ್ಪಟ್ಟಿತು. ಶ್ರೀಗಳವರು ವೀಕದ ವೈಭವವನ್ನು ನೋಡಿ ಸಂತೋಷಪಡಿಂದ ಶ್ರೀರೇಣುಕಾಚಾರ್ಯರನ್ನು ಸ್ತುತಿಸಿ ಮರಳಿ ಮಠಕ್ಕೆ ಆಗಮಿಸಿದರು

ಓರ್ವ ಗುರುಭಕ್ತ

ಶ್ರೀಗಳವರು ಕೈಕೊಂಡ ಮನಭೋಜನ, ಅಮ್ಮಲಾಪುರ

ತಾ॥ ೪-೪-೫೨ ನೆಯ ದಿವಸ ಅಮ್ಮಲಾಪುರದ ಶ್ರೀ॥ ಷ॥ಬ್ರ॥ ವಿಂಶತಿವೀರಮಹೇಂದ್ರಶಿವಾಚಾರ್ಯರು ಜೇವರ್ಗಿಗೆ ಆಗಮಿಸಿದ್ದ ನೊಲ್ಲಾಪುರದ ಗುರುಕುಲದ ಹಾಗೂ ವಾರದ ಪಾಠಶಾಲೆಯ ವಿದ್ಯಾರ್ಥಿಗಳನ್ನು ತಮ್ಮ ಗ್ರಾಮಕ್ಕೆ ಕರೆದುಕೊಂಡುಹೋಗಿ ವಪಭೋಜನವನ್ನು ಮಾಡಿಸಿ, ಅಂದು ರಾತ್ರಿ ೮ ಘಂಟೆಗೆ ಸಭೆ ಕೂಡಿಸಿದರು. ಶ್ರೀಗಳವರ ನೇತೃತ್ವದಲ್ಲಿಯೇ ವೀರಶೈವ ಧರ್ಮದ ಬಗ್ಗೆ ಶ್ರೀಮಹಾಂತವೀರಾಚಾರ್ಯರು ಹಾವಿನಾಳ, ಶ್ರೀನೀಲಕಂಠಶಾಸ್ತ್ರಿ ಸಾವೆಗಿ, ಶ್ರೀ ಮಹಾದೇವಶರ್ಮ ತಾರಳೆ, ಶ್ರೀ ಶಾಂತವೀರಾಚಾರ್ಯ ಮಠ ಮತ್ತ, ಶ್ರೀ ಪಿ ಆರ್ಯ. ಪಟೇಲ ದೇವುರಿಗಿ ಮುಂತಾದವರ ಭಾಷಣಗಳಾದ ಮೇಲೆ ಶ್ರೀಗಳವರು ತಮ್ಮ ಅಮೃತವಾಣಿಯಿಂದ ಉಪದೇಶವಿತ್ತನಂತರ ಪಂಚಾಚಾರ್ಯರ ಜಯಘೋಷಗಳೊಡನೆ ಸಭೆಯು ಮುಕ್ತಾಯವಾಯಿತು.

ಓರ್ವ ಪ್ರತ್ಯಕ್ಷದರ್ಶಿ

ಶ್ರೀಮಜ್ಜಗದ್ಗುರು ವಿಶ್ವೇಶ್ವರಾಮಾರಾಧ್ಯರ

ಹಾಗೂ

ಶ್ರೀಜಗದ್ಗುರು ದಾರುಕಾಚಾರ್ಯರ

ಜಯಂತೀಮಹೋತ್ಸವಗಳು

ವೈಶಾಖ ಶು॥ ೩ ಭಾನುವಾರ ವೈಶಾಖ ಶು॥ ೫ ಮಂಗಳವಾರ



ರಂಭಾಮಹಾನಗರ ಜಠರಖಂಡವಳಿಗೆ ಕೈಲಾಸವನ್ನು ವಿಸ್ತರಿಸಿದ ಮಹಾಪುರುಷರೂ ಮಹಾಕವಿಗಳೂ ಆದ ಶ್ರೀಮದ್ಭಕ್ಕರಾಜರು ಉಜ್ಜಯಿನಿ ವೈತ್ರಿಗಳನ್ನು ವಿರಾಜಿಸುತ್ತಿದ್ದ ಶ್ರೀಭೀಮನಾಥ ಶ್ರೀ ಸಿದ್ಧೇಶ್ವರ ಮುಂತಾದ ಅಗಸ್ತ್ಯಪರಂಪರೆಯ, ಪರಮಪವಿತ್ರವಾದ ವೀರಶೈವಸಿದ್ಧಾಂತವನ್ನು ಭೂಮಂಡಲದಲ್ಲಿ ನೆಲೆಗಾಣಿಸಿ, ವಿಸ್ತರಿಸಿ, ಪಲಿಸಿ ಮೊದಲಾದ ಅನಂತಜನ ಮಹರ್ಷಿಗಳನ್ನೂ, ಗೌತಮೇಂದ್ರ ದೇವನಂದಿನಮೊದಲಾದ ಚಕ್ರವರ್ತಿಗಳನ್ನೂ ಶಿವಸಿದ್ಧಾಂತೋದ್ಧಾರ ದೇಶದ್ವಾರಾ ಉದ್ಧರಿಸಿ ಲೋಕೈಕಪೂಜ್ಯರಾಗಿರುವರೂ, ಅಂತಹ ಶ್ರೀಜಗದ್ಗುರು ವಿಶ್ವೇಶ್ವರಾಮಾರಾಧ್ಯರ ಹಾಗೂ ಶ್ರೀಜಗದ್ಗುರು ದಾರುಕಾಚಾರ್ಯರ ಜಯಂತೀಮಹೋತ್ಸವಗಳು ಇದೇ ವೈಶಾಖ ಶುಕ್ಲಪಕ್ಷದಲ್ಲಿ ಪ್ರಾಪ್ತವಾಗುವುದರಿಂದ ಸರ್ವ ಗುರುಭಕ್ತರೂ ಈ ಜಯಂತೀಮಹೋತ್ಸವಗಳನ್ನು ಅತ್ಯಂತ ವೈಭವದಿಂದ ನೆರವೇರಿಸಬೇಕು. **ವೈಶಾಖ ಶು॥ ೩ ಭಾನುವಾರ** ತಾ॥ ೨೭—೪—೧೯೩೨ನೆಯ ದಿವಸ ಶ್ರೀಜಗದ್ಗುರು ವಿಶ್ವೇಶ್ವರಾಮಾರಾಧ್ಯರ ಜಯಂತೀಮಹೋತ್ಸವವನ್ನೂ, **ವೈಶಾಖ ಶು॥ ೫ ಮಂಗಳವಾರ** ತಾ॥ ೨೯—೪—೧೯೩೨ನೆಯ ದಿವಸ ಶ್ರೀಜಗದ್ಗುರು ದಾರುಕಾಚಾರ್ಯರ ಜಯಂತೀ ಮಹೋತ್ಸವವನ್ನೂ ನೆಂವೇರಿಸಬೇಕು. ಈ ಮೊದಲು ಈ ಪತ್ರಿಕೆಯಲ್ಲಿ ಪ್ರಸಿದ್ಧವಡಿಸಿದಂತೆ ಭರತಖಂಡದಲ್ಲಿರುವ ಲಕ್ಷೋಪಲಕ್ಷ ಜನ ಶುದ್ಧಸಂಪ್ರದಾಯದ ವೀರಶೈವರು ಶ್ರೀಜಗದ್ಗುರು ರೇಣುಕಾಚಾರ್ಯರ ಹಾಗೂ ಸಂಡಿತಾರಾಧ್ಯ, ವಿಶ್ವಾರಾಧ್ಯರ ಜಯಂತೀ ಮಹೋತ್ಸವಗಳನ್ನು ಆಯಾಯ ಪವಿತ್ರದಿನಗಳಲ್ಲಿ ಅತ್ಯಂತಭಕ್ತಿಯಿಂದಲೂ, ವೈಭವದಿಂದಲೂ ನೆರವೇರಿಸಿದ ವಿಷಯವು ಈ ಪತ್ರಿಕೆಯಿಂದ ಸರ್ವರಿಗೂ ವೇದ್ಯವೇ ಆಗಿದೆ. ಶುದ್ಧಸಂಪ್ರದಾಯದ ವೀರಶೈವರು ಸದ್ಯಃ ಪ್ರಾಪ್ತವಾಗಿರುವ ಆಚಾರ್ಯರ ಜಯಂತೀ ಮಹೋತ್ಸವಗಳನ್ನು ಅತ್ಯಂತ ಭಕ್ತಿಯಿಂದಲೂ, ಉತ್ಸಾಹದಿಂದಲೂ, ವೈಭವದಿಂದಲೂ ನೆರವೇರಿಸಿ, ಜಗದಾಚಾರ್ಯರ ಕೃಪೆಗೆ ಪಾತ್ರರಾಗಬೇಕೆಂದು ಹಾರೈಸುತ್ತೇವೆ.

—ಸಂ.

ಇಷ್ಟಲಿಂಗಾನುಷ್ಠಾನಸಮಾಪ್ತಿ, ಜೇವರ್ಗಿ

ಗುಲ್ಬರ್ಗಾ ಡಿ॥ ಜೇವರ್ಗಿ ಶ್ರೀ॥ ಷ॥ ಬ್ರ॥ ಗುರು ಶಾಂತವೀರಾಚಾರ್ಯ ಮಹಾಸ್ವಾಮಿಗಳವರ ಶಿಷ್ಯರಾದ ಶ್ರೀ ಗುರುಬಾಳಪ್ಪ ಮತ್ತೆ ಇವರು ಬಳಗಿ ಗುತ್ತಿದ ಶ್ರೀ ಮಲ್ಲಿಕಾರ್ಜುನದೇವಾಲಯದಲ್ಲಿ ಒಂದೂವರೆ ತಿಂಗಳುಗಳಿಂದ ಇಷ್ಟಲಿಂಗಾನುಷ್ಠಾನವನ್ನಾರಂಭಿಸಿದ್ದು ತಾ॥ ೭—೪—೩೨ ನೇ ಸೋಮವಾರ ದಿವಸ ಪೂರ್ತಿಗೊಳಿಸಿದ ಸಮಯದಲ್ಲಿ ಶ್ರೀ ಮಲ್ಲಿಕಾರ್ಜುನಮೂರ್ತಿಗೆ ರುದ್ರಾಭಿಷೇಕಾದಿಗಳಿಂದ ಪೂಜಿಸಿ ಗಣಾರಾಧನೆಯೊಂದಿಗೆ ಮುಕ್ತಾಯಗೊಳಿಸಿದರು. ಸಾಯಂಕಾಲ ಶ್ರೀಗಳವರ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು. ಗುರುವರ್ಗದವರ ಕರ್ತವ್ಯದ ಬಗ್ಗೆ ಶ್ರೀ ದುಂಡಲಿಂಗಪ್ಪ ಹಾಗಪ್ಪ ಮಾಸ್ತರ ಒಳಗಿ ಇವರು ವೀರಾವೇಶದಿಂದ ಉದ್ಗಾರವಾದ ಭಾಷಣಮಾಡಿದರು. ಅವರ ಭಾಷಣದಿಂದ ಸಕಲ ಗುರುವರ್ಗವು ಕಣ್ಣೆರೆಯುವಂತಾಯಿತು. ಬಳಿಕ ಅಧ್ಯಕ್ಷ ಶ್ರೀಗಳವರು ಅನುಷ್ಠಾನದ ಒಗ್ಗೆ ಧರ್ಮದ ಒಗ್ಗೆ ಹರ್ಷ ಪುರಿತವಾದ ಭಾಷಣಮಾಡಿದ ನಂತರ ಶ್ರೀ ಜಗದ್ಗುರು ಪಂಚಾಚಾರ್ಯರ ಜಯಘೋಷದೊಡನೆ ಸಭೆಯು ವಿಸರ್ಜನೆ ಸಲ್ಪಟ್ಟಿತು

ಓರ್ವ ಪ್ರತ್ಯಕ್ಷದರ್ಶಿ.

ಶ್ರೀ ಅಮರೇಶ್ವರಯಾತ್ರೆ

ಶಕೆ ೧೮೫೩ನೆ ಪರಿಧಾವಿ ಸಂ॥ ರಿದ ಫಾಲ್ಗುಣ ಶು॥ ೧೫ ಲಿಂಗಸೂಗೂರ ತಾಲೂಕು ಅಮರೇಶ್ವರ ಪವಿತ್ರ ಸ್ನಾನದ ಯಾತ್ರೆಯಲ್ಲಿ ಶ್ರೀ॥ ಷ॥ ಬ್ರ॥ ವಿರೂಪಾಕ್ಷ ಶಿವಾಚಾರ್ಯ ತಲೆಬಾನ ಕಂಠಲ್ಲಿ ವಾರಕಾಲಾಧ್ಯಕ್ಷ ಇವರು ಮೂರು ದಿವಸ ದಾಸೋಹಕಾರ್ಯ ಕೈಕೊಂಡು ನಿತ್ಯದಲ್ಲಿಯೂ ಬಂದ ಸಹಸ್ರಾರು ಯಾತ್ರಾರ್ಥಿಗಳಿಗೆ ಅನ್ನ ಸಂತರ್ಪಣೆ ಮಾಡಿಸಿ ಸೂರ್ಯೇಶ್ವರ ವಟುಗಳಿಗೆ ಧರ್ಮಾದರ ದೀಕ್ಷಾಸಂಸ್ಕಾರ ಮಾಡಿದರು ಈ ಮಹೋತ್ಸವಕ್ಕೆ ಶ್ರೀ ನೊಲಿ ನಕೇಲರೂ, ಶ್ರೀ ಅಳವಂಡಿ ಶಿವಮೂರ್ತಿಸ್ವಾಮಿಗಳೂ ತಮ್ಮ ಇಷ್ಟಮಿತ್ರರೊಡಗೂಡಿ ಆಗಮಿಸಿ ಶ್ರೀಗಳವರ ಕಾರ್ಯದಕ್ಷತೆಯನ್ನು ನೋಡಿ ಹರ್ಷಿತರಾದರೆಂದು ತಿಳಿಸುವ,

ಜೋಪುಡಿ ರಾಜಪ್ಪ. ಮುದಗಲ್ಲ

ಪುಣ್ಯತಿಥಿಮಹೋತ್ಸವ ಚೇಳೂರಗಿ

ಶಿವೈಕ್ಯ ಶ್ರೀ॥ ಷ॥ ಬ್ರ॥ ಸಿದ್ಧರಾಮಶಿವಾಚಾರ್ಯರ ೨ನೆಯ ಪುಣ್ಯತಿಥಿ ಮಹೋತ್ಸವವನ್ನು ಶ್ರೀ॥ ಷ॥ ಬ್ರ॥ ಬಾಲಕಸ್ವಾಮಿ ಗುರುಶಾಂತಶಿವಾಚಾರ್ಯರ ದಿವ್ಯ ನೇತೃತ್ವದಲ್ಲಿ ತಾ॥ ೭—೪—೩೨ನೆಯ ದಿವಸ ಒಳ್ಳೆಯ ವಿಜೃಂಭಣೆಯಿಂದ ಆಚರಿಸಲ್ಪಟ್ಟಿತು. ಅಂದು ಮುಂಜಾನೆ ಗುರುಗದ್ದಿಗೆಗೆ ಸೊಲ್ಲಾಪುರದಿಂದ ಆಗಮಿಸಿದ್ದ ಗುರುಕುಲದ ಹಾಗು ನಾರದ ಶಾಕಶಾಲೆಯ ವಿದ್ಯಾರ್ಥಿಗಳಿಂದ ಸಹಸ್ರವಿಲ್ವಾರ್ಚನೆ ನಂತರ ಶ್ರೀ ಹಾವಿನಾಳ ಕಪ್ಪಡ್ಡೀಗಳಿಂದ ಶ್ರೀ ಘೇನುಕರ್ಣಾಶ್ರಿಯವರ ವೈದಿಕಕ್ರಿಯೆಯಲ್ಲಿ ಉರ್ವ ವಟುಗಳ ಉಪನಯನವು ಮಾಡಲ್ಪಟ್ಟಿತು ಸಂಜೆ ಸರಿಯಾಗಿ ೬ ಘಂಟೆಗೆ ಲಿಲ್ಲಂಪುರ ಶ್ರೀ॥ ಷ॥ ಬ್ರ॥ ಶಾಂತವೀರಮಹೇಂದ್ರ ಶಿವಾಚಾರ್ಯರ ಅಧ್ಯಕ್ಷತೆಯಲ್ಲಿ ಸಭೆನೇರಿ ಶ್ರೀ ಮಹಾಂತಶಿವಾಚಾರ್ಯ ಹಾವನೆ ಹಾಳ ಶ್ರೀ ಸಾಂಬಶಿವಾಚಾರ್ಯ ನಸಮತ ಶ್ರೀ ಮಹಾದೇವಶಾಸ್ತ್ರಿಗಳ ತಾರಳೆ ಶ್ರೀ ನೀಲಕಂಠಶಾಸ್ತ್ರಿಗಳ ಸಾವಳಗಿ ಶ್ರೀ ಪಿ ಆರ್ಯ ಪಟೇಲ ಮುಂತಾದವರ ಭಾಷಣಗಳಾದಮೇಲೆ ಶ್ರೀ ಜೇವರ್ಗಿ ಸಪ್ತಾಧ್ಯಕ್ಷರು ಜನರಿಗೆಲ್ಲ ಬೋಧೆಯಾಶ್ಚರ್ಯ ಅಧ್ಯಕ್ಷರ ಭಾಷಣ ಮಾದಮೇಲೆ ಪಂಚಾಚಾರ್ಯರ ಜಯಘೋಷದೊಡನೆ ಸಭೆಯು ಮುಕ್ತಾಯವಾಯಿತು ಆದೇ ಸಭೆಯಲ್ಲಿ ಕೇದಾರ ವೀರಕ್ತ ಶ್ರೀಜಗದ್ಗುರು ವಿಶ್ವತಾಧಲೆಗಳ ಶಿವಾಚಾರ್ಯರನ್ನು ಮಾಡಿದ್ದ ಬಗ್ಗೆ ತಮ್ಮ ಮಂಡಿಸಲ್ಪಟ್ಟು ಆ ತೀರಾವಿಕ ಒಳೆಯನ್ನು ಅಧ್ಯಕ್ಷರ ಸಹಿಯೊಡನೆ ೧೦-೪-೩೨ ಕ್ಕೆ ಕೇದಾರ ವೀರಕ್ತೆ ಕಳಿಸಲಾಯಿತು.

ಓರ್ವ ಪ್ರತ್ಯಕ್ಷದರ್ಶಿ

ಶ್ರೀಜಗದ್ಗುರು ರೇಣುಕಾಚಾರ್ಯರ ಮಲ್ಲಿಕಾಮಾಲಾ ಸ್ತೋತ್ರ

೨. ಮಹಾಗುರು ರೇಣುಕಾರ್ಯ ಸುಸೋಮನಾಥ
ಸಮುದ್ಭವನ ! ಪ್ರೇಮದಿಂ ವರವೀರಕ್ಷೇವ ಸಮಸ್ತ
ತತ್ವಪರಿಪೂರಕಂ ॥ ಕಾಮದಿಂ ನೆರೆವೇಡ್ಕಭಕ್ತಗೆ ಮುಕ್ತಿ
ತತ್ವಸ-ಮೋಧಕಂ । ಸ್ವಾಮಿಸದ್ಗುರು ರೇಣುಕಾರ್ಯ
ನಮೋಸ್ತುತೇ ಭವಪಾದಕಂ ॥೧॥

ಲಿಂಗಧಾರಣಗೈವುದು ಭಕ್ತರ ಲಿಂಗವೆಂಬಿಗಳೆಮ್ಮ ತಾ।
ಆಂಗಲಿಂಗ ಸುಸಾಮರಸ್ಯದ ಭಾವವಿಲ್ಲವ ಬೋಧಿಸಿ ॥
ಕಂಗಳಂ ತಿವಲಿಂಗ ಮೀಕ್ಷಿಸೆ ಮಂಗಳಾತ್ಮರೆಂದಿಪಾ ।
ಲಿಂಗಜಂಗಮನುದೇವಪಾಹಿ ನಮೋಸ್ತುತೇ ಭವ
ಪಾದಕಂ ॥೩॥

ಮೂರುಕೋಟಿಯ ಲಿಂಗಪೂಜೆಯ ಏಕಕಾಲದೊ
ಳೋರ್ವನೇ । ಸೇರಿಲಿಂಕೆಯ ಗೈವುತೆಂದ ವಿಧಿಗಣ
ಸ್ತುತಗೊಳ್ಪುತಂ ॥ ವೀರ ಶೋಭೆಯ ರಂಭಿಸಿಂದಿದ
ರಂಭೆ ಗೈದ ಮಹಾತ್ಮನೀಂ । ವೀರ ರೇಣುಕ ದೇವ
ಪಾಹಿ ನಮೋಸ್ತುತೇ ಭವನಾಶಕಂ ॥೩॥

ಲಿಂಗಧಾರಣವಾದಿ ಪಕ್ಷ್ಯಯೆಯಿಂದ ಜಂಗಮನೆನಿ
ಸಿದೈ । ಲಿಂಗಧರಕರಂಗೆ ಪ್ರೀಗುರುಲಿಂಗಜಂಗಮ
ಸಂತತಂ ॥ ಲಿಂಗವಿಲ್ಲದೆ ತಾಪಪೋಕ್ತಮು ತಾನು
ಜಂಗುಮನಪ್ಪನೇ । ಜಂಗಮಾದಿ ಸುಸೇವ್ಯಪಾಹಿ ನಮೋ
ಸ್ತುತೇ ಭವನಾಶಕಂ ॥೪॥

ಏದು ಅಕ್ಷರ ಮೂಲಮಂತ್ರವ ಚಕ್ರಜಾಲಕೆ ಬೋ
ಧಿಸಿ । ಸಾದರಂಮಿಗೆ ಲಿಂಗವೀನ್ತೆಯಿಂದ ಜಾಪಿಸಲ
ಪ್ಪುದು ॥ ಸಿದ್ಧಿ ಕರ್ಪ್ಪತಕಾಮ್ಯಸಂಪದ ಮೋಕ್ಷಸಿದ್ಧಿಯು
ತಪ್ಪದೆಂ । ದಾದಿಸದ್ಗುರು ರೇಣುಕಾರ್ಯ ನಮೋಸ್ತುತೇ
ಭವನಾಶಕಂ ॥೫॥

ವೀರಶೈವ ಜಗದ್ಗುರುಂ ಪರಮಾರ್ಥ ತತ್ವವಿಭಾ
ಸಕಂ । ಸಾರಷಟ್ಸ್ಥಲಬೋಧಕಂ ಶಿವಜೀವ ಐಕ್ಯವಿಧಾ
ಪಕಂ ॥ ಘೋರದೋಷವಿನಾರಕಂ ನರನೋತ್ತಸಿದ್ಧಿವಿಧಾ
ಯಕಂ । ಧೀರಸದ್ಗುರು ರೇಣುಕಂ ಪ್ರಣನಾಮಿತಂ
ಭವನಾಶಕಂ ॥೬॥

ಶುಂಭನಿ- ಜವನಂದ್ಯವಾದ ಸರೋಜ ಭಕ್ತಕುಂ
ದ್ರುಮ । ಕುಂಭಸಂಭವಸಿಂಗೆ ವೈದರಹಸ್ಯ ಮಂ ಸಲೆ
ಬೋಧಿಸಿ ॥ ಶಂಭುಭಕ್ತರೊಳಾದ್ಯನಂ ನೆರೆಗೈವನೆಪ್ರತಿ
ಮೂಂಕಭೀಂ । ಸಾಂಬಸಚ್ಚಿದ ವೀವದೇವನವಿಮೋಸ್ತುತೇ
ಭವನಾಶಕಂ ॥೭॥

ಆಪ್ಯನವರಣಾಂಗಳಂ ವರಪಂಚಾಚಾರ್ಯ ಸುಮಾರ್ಗ
ಮಂ । ಸ್ವೀಕ್ಷಿಂಪಿಸುತ್ತ ಭಕ್ತರ ಕಲ್ಪತರುಂಗಳನಿಟ್ಟುವಾ ॥
ತಿಕ್ಷುರಂ ನೆರೆಗೈದು ಮೋಕ್ಷವನಿತ್ತಿನಪ್ರತಿಮಾಂಕಭೀಂ ।
ಶ್ರೀಸ್ಥ ಸದ್ಗುರು ರೇಣುಕಾರ್ಯ ನಮೋಸ್ತುತೇ ಭವ
ಪಾದಕಂ ॥೮॥

ರೇಣುಕಾಷ್ಟಕ ಮಿಂತಿದಂ ಸಿರುತಾವ ಭಕ್ತರು ಭಕ್ತಿ
ಯಿಂ । ಮಾಣದೇ ಸರಿಸಲ್ಕೆ ರೇಣುಕದೇವ ಕೃಪ್ತಿಯ
ಪಾಂಪುತಂ ॥ ಪೀಣಸುತ್ಪವರನ್ನು ದೋಷವಿಮುಕ್ತ
ಭಾಜನಗೈವುತಾ । ಸ್ವಾಣುಭಕ್ತಿಯನಿತ್ತು ಸಂಪದ
ಮಾಯುಭಾಗ್ಯದಿ ರಕ್ಷಿಪಂ ॥

ಕೃತಕರ್ತರು ಹುಲಿಯೂರುದುರ್ಗದ ಮಹೆದ
ವೇ॥ ಗುರುಸಿದ್ಧಶಾಸ್ತ್ರಿಗಳು.

ಪ್ರಕಾಶಕರು
ಜೆಜ್ ಜಿ ತ್ರಿಪುರಾಂತಕಶಾಸ್ತ್ರಿ, ಬಿ.ಎಸ್ಸಿ.,

ಲಂಡನ್ನಿನಲ್ಲಿ ೪ ಲಕ್ಷ ಮಂದಿ ನಿರುದ್ಯೋಗಿಗಳು

ಲಂಡನ್ ಹತ್ತಿಯ ಮಾರುಕಟ್ಟೆಯಲ್ಲಿ ಬೆಲೆಗಳು ಇಳಿಮುಖವಾಗಿರುವುದರಿಂದ ಅನೇಕ ಗಿರಣಿಗಳಿಂದ ತಾತ್ಕಾಲಿಕವಾಗಿ ಒಟ್ಟು ೪,೩೩,೦೦೦ ಮಂದಿ ಕಾರ್ಮಿಕರು ಇಂದು ನಿರುದ್ಯೋಗಿಗಳಾಗಿದ್ದಾರೆಂದು ವರದಿಯಾಗಿದೆ.

ವರ್ತಮಾನಸಂಗ್ರಹ

ಪಾಕಿಸ್ತಾನ್-ರಷ್ಯ ವಾಣಿಜ್ಯ ಒಪ್ಪಂದ

ರಷ್ಯದೊಡನೆ ವಾಣಿಜ್ಯ ಒಪ್ಪಂದವನ್ನು ಮಾತಿ ಕೊಳ್ಳುವ ವಿಷಯ ಪಾಕಿಸ್ತಾನ್ ಸರಕಾರದ ಕೇಂದ್ರ ಸರ್ಯಾಲೋಚನೆಯಲ್ಲಿದೆ ಯೆಂದೂ, ಆದರೆ ಈ ಬಗ್ಗೆ ಸಂಧಾನವು ಇನ್ನೂ ಆರಂಭವಾಗಿಲ್ಲವೆಂದೂ ತಿಳಿದು ಬಂದಿದೆ

ಬದ್ರಿನಾಥದಲ್ಲಿ ಮನೆಗಳ ನಾಶ

ಹಿಮರಾಶಿಯು ಮೂರು ನಾರಿ ಉರುಳಿದ್ದರ ಫಲ ವಾಗಿ ಬದ್ರಿನಾಥದಲ್ಲಿ ಸುಮಾರು ೧೦೦ ಮನೆಗಳು ಉರುಳಿದುವೆಂದು ತಿಳಿದುಬಂದಿದೆ. ಪ್ರಾಣಾಪಾಯ ವೇನೂ ನಡೆದಿಲ್ಲ ಬದ್ರಿನಾಥ ದೇವಾಲಯ ಮತ್ತು ಅದರ ಆಸ್ತಿಪಾಸ್ತಿಗಳು ಸುರಕ್ಷಿತವಾಗಿವೆಯೆಂದು ಗೊತ್ತಾ ಗಿದೆ

ಪೆಪ್ಸು ಹೊಸ ಕಾಂಗ್ರೆಸ್ ಮಂತ್ರಿ ಮಂಡಲದ ರಾಜೀನಾಮೆ

ಈಗ್ಗೆ ೨ ವಾರಗಳ ಕೆಳಗೆ ರಚಿತವಾದ ಪೆಪ್ಸು ಕಾಂಗ್ರೆಸ್ ಮಂತ್ರಿಮಂಡಲವು ರಾಜೀನಾಮೆ ಕೊಡುವು ದಾಗಿ ಮುಖ್ಯಮಂತ್ರಿಗಳಾದ ಕರ್ನಲ್ ರಘುವೀರಸಿಂಗ್ ರವರು ಶಾಸನಸಭೆಯಲ್ಲಿ ಘೋಷಿಸಿದರು

ರಾಜೀನಾಮೆಗೆ ಕಾರಣ

ಏಪ್ರಿಲ್ ೧೬ ನೇ ತಾರೀಕಿನಂದು ಪೆಪ್ಸು ನೂತನ ಶಾಸನಸಭೆಯ ಅಧಿವೇಶನ ಸನ್ನಾನೇಶಗೊಂಡು ಸ್ಪೀಕರ್ ಮತ್ತು ಪೆಪ್ಸು ಟೆ ಸ್ಪೀಕರ್‌ರವರ ಆಯ್ಕೆ ನಡೆದಾಗ ಕಾಂಗ್ರೆಸಿಗೆ ಬಂಬಾದ ಭಾರೀ ಸೋಲೇ ಇಂದು ಮಂತ್ರಿಮಂಡಲ ರಾಜೀನಾಮೆ ಕೊಡಲು ಕಾರಣ ವಾಯಿತು ಹೊಸ ಕಾಂಗ್ರೆಸ್ ಮಂತ್ರಿಮಂಡಲವಲ್ಲಿ ಉಪ ಸಚಿವರಾಗಿದ್ದ ಚೌಧರಿ ಪಾನ್‌ಸಿಂಗ್‌ರವರು ಅಂದು ಶಾಸನಸಭೆಯ ಅಧಿವೇಶನ ಆರಂಭವಾದೊಡನೆ ತಾವು ಕಾಂಗ್ರೆಸ್ಸಿಗೆ ರಾಜೀನಾಮೆ ಇತ್ತಿರುವುದಾಗಿ ಘೋಷಿಸಿ ಕಾಂಗ್ರೆಸ್ಸಿಗರೊಡನೆ ಕುಳಿತ್ತಿದ್ದವರು ಎದ್ದು ನಿಲ್ಲೋಧ ಪಕ್ಷದವರೊಡನೆ ಹೋಗಿ ಕುಳಿತರು ಅವರನ್ನು ಇನ್ನಿಬ್ಬರು ಕಾಂಗ್ರೆಸ್ ಸದಸ್ಯರು ಹಿಂಬಾಲಿಸಿದರು ಅದ ರಿಂದ ಹೊಸದಾಗಿ ರಚಿತವಾಗಿದ್ದ ಕಾಂಗ್ರೆಸ್ ಸಚಿವ ಸಂಪುಟ ೬೦ ಮಂದಿಯನ್ನೊಳಗೊಂಡ ಸಭೆಯಲ್ಲಿ ೨೬ ಕ್ಕೆ ಇಳಿದು ಮುಂತ್ರಿಮಂಡಲವು ರಾಜೀನಾಮೆ ಕೊಡಬೇಕಾಗಿ ಬಂದಿದ

ನಿಜಾನುರಿಗೆ ವಿಶೇಷ ಹಕ್ಕುಗಳಿಲ್ಲ
ಹೈದರಾಬಾದು ಹೈಕೋರ್ಟಿನ ತೀರ್ಮಾನ

ಭಾರತ ರಾಜ್ಯಾಂಗ ವ್ಯವಸ್ಥೆ ಜಾರಿಗೆ ಬಂದನಂತರ ನಿಜಾಮರಿಗೆ ಯಾವ ವಿಶೇಷ ಹಕ್ಕುಗಳೂ (ಪ್ರಿವಿ ಗಿಟೀಜ್ ರೈಟ್) ಉಳದಿಲ್ಲ-ಎಂಬುದಾಗಿ ಹೈದರಾಬಾದು ಹೈಕೋರ್ಟಿನ ಫುಲ್‌ಬೆಂಚ್ ಈ ದಿನ ತೀರ್ಮಾನಿಸಿತು ಕೇತೀತೇಶ ಫೆಬಾರ್ ಕಮಲ್‌ಯಾರ್ ಜಂಗುರ ಎಫ್ಬೇ ಟಿನ ಉತ್ತರಾಧಿಕಾರಿಗಳು ಯಾರೆಂಬ ಬಗ್ಗೆ ಎದ್ದಿವಿ ವಾದದ ಸಂಬಂಧದಲ್ಲಿ ಹೈಕೋರ್ಟು ನೀಲ್ಯಂಡಿಂತೆ ತೀರ್ಮಾನಿಸಿತು

ಪಾಕಿಸ್ತಾನಕ್ಕೆ ಸಿರಿಯಾನೇರೆ

ಕಾಶ್ಮೀರ ವಿವಾದದಲ್ಲಿ ಭಾರತ-ಪಾಕಿಸ್ತಾನಗಳಲ್ಲಿ ಬೆಳ್ಳುಬ್ಬಿ ಬಗೆ ಹರಿಯದಿದ್ದಲ್ಲಿ ಭಾರತದ ವಿರುದ್ಧ ಹೋರಾಡಲು ಸಿರಿಯಾವು ತನ್ನ ಸೇನೆಗಳನ್ನು ಪಾಕೀ ಸ್ತಾನಕ್ಕೆ ಕಳುಹಿಸುವುದಾಗಿ ತಿಳಿಸಲಾಗಿದೆಯೆಂದು ಗೊತ್ತಾಗಿದೆ. ರಾವಲ್ಪಿಂಡಿಯಲ್ಲಿರುವ ಪಾಕಿಸ್ತಾನದಲ್ಲಿನ ಸಿರಿಯಾ ರಾಯಭಾರಿಗಳಾದ ಸೈಯ್ ಉಮ್ಮರ್-ಬಿಡಾ ಅಲ್ ಉಮೀರಮಟು ಘೋಷಣೆಯ ಮೂಲಕ ತಿಳಿಸಿ ದ್ದಾರೆ. ಈ ರಾಯಭಾರಿಗಳು ಕಾಶ್ಮೀರ ಗಡಿಯಲ್ಲಿ ಪ್ರವಾಸ ಕೈಗೊಂಡು ಪರಿಸ್ಥಿತಿಯನ್ನು ಪರಿಶೀಲಿಸಿ ಇತ್ತೀ ಚೆಗೆ ರಾವಲ್ಪಿಂಡಿಗೆ ಹಿಂದಿರುಗಿದರು. ಸಿರಿಯಾದಲ್ಲಿನ ಮುಸ್ಲಿಮರು ಕಾಶ್ಮೀರ ಸಮಸ್ಯೆಯನ್ನು ತಮ್ಮ ಸ್ವಂತ ಸಮಸ್ಯೆಯೆಂದು ಪರಿಗಣಿಸುವುದಾಗಿ ಅವರು ತಿಳಿಸಿ ದ್ದಾರೆ

ಬೇರೆಯವರ ಹೆಸರಿನಲ್ಲಿ ಓಟು ಮಾಡಿದ್ದಕ್ಕೆ ಶಿಕ್ಷೆ

ಕಳೆದ ಸಾರ್ವತ್ರಿಕ ಚುನಾವಣೆಗಳಲ್ಲಿ ಬೇರೆಯವರ ಹೆಸರಿನಲ್ಲಿ ಬಂದು ಮತ ಚಲಾಯಿಸಲು ಪ್ರಯತ್ನಪಟ್ಟ ನಾಲ್ಕುಮಂದಿಗೆ ಮದ್ರಾಸಿನ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇ ಟರು ತಲಾ ಅರುವಾರಗಳ ಕಠಿಣ ಶಿಕ್ಷೆ ವಿಧಿಸಿದರು.

ಹೈದರಾಬಾದಿನಲ್ಲಿ ಬಟ್ಟೆ ನೂರಾಟ

ಹೈದರಾಬಾದಿನಲ್ಲಿ ಒಂದು ಜಿಲ್ಲೆಯಿಂದ ಮತ್ತೊಂದು ಜಿಲ್ಲೆಗೆ ಬಟ್ಟೆ ಹೋಗಲು ಇದ್ದ ನಿರ್ಬಂಧವನ್ನು ತೆಗೆದು ಆಗಿದೆ ರಾತಿ ಬಿದ್ದಿರುವ ಬಟ್ಟೆಗಳು ಮೂರಾಪಟ್ಟಾಗು ವಂತೆ ಮಾಡಲು ಆರ್ಥಿಂಧವಾದ ವ್ಯಾಪಾರಕ್ಕೆ ಅವಕಾಶ ಕೊಡಲಾಗಿದೆ ಬಟ್ಟೆ ವ್ಯಾಪಾರ ನಡೆಸಲು ಇಷ್ಟವಿರು ವವರಿಗೆ ಈಗ ರತದಾರಿ ಕೊಡಲಾಗುತ್ತದೆ

ಬೆಂಕಿ ಅನಾಹುತದಿಂದ ಭಾರಿನಷ್ಟ

ರಾಜಮಂಧ್ರಿಯಲ್ಲಿ ಭಾರಿ ಬೆಂಕಿ ಅನಾಹುತ ನಡೆದು ೭ ಲಕ್ಷ ರೂ ಗಳ ಆಸ್ತಿ ನಷ್ಟವಾಗಿದೆಯೆಂದು ತಿಳಿದು ಬಂದಿದೆ ಟೌರೆಸ್‌ಪಾಕೆಡ ೬ ಭವನಗಳೂ, ೨೨ ಹೆಂಚಿನ ಮನೆಗಳೂ, ಸುಮಾರು ೩೦೦ ಹುಲ್ಲಿನ ಮನೆಗಳೂ ಭಸ್ಮವಾವಷೆ ಇದರಿಂದ ನೂರಾರು ಜನರಿಗೆ ನೆಲ್ಲಲು ನೆಲೆಯಿಲ್ಲವಾಗಿದೆ

ವಿಶ್ವದ ಜನಸಂಖ್ಯೆ ೨೪೦ ಕೋಟಿ

ಪ್ರಸುಃಶದ ಜನಸಂಖ್ಯೆ ೧೯೫೧ ರ ಲೆಕ್ಕದ ಪ್ರಕಾರ ಸುಮಾರು ೨೪೦ ಕೋಟಿ ಇವೆ ಎಂದು ವಿಶ್ವಸಂಸ್ಥೆಯ ಸ್ಟಾಟಿಸ್ಟಿಕಲ್ ಕಚೇರಿಯ ಪ್ರಕಟಣೆಯಿಂದ ತಿಳಿದು ಬಂದಿದೆ ಇದರಲ್ಲಿ ಅರ್ಧ ಏಷ್ಯಾಖಂಡದಲ್ಲಿಯೇ ಇದೆ.

ಕಾಶ್ಮೀರಕ್ಕೆ ಶ್ರೀಮನ್ಮಹಾರಾಜರು

ಶ್ರೀಮನ್ಮಹಾರಾಜರವರಾದ ಶ್ರೀ ಜಯಚಾಮ ರಾಜೇಂದ್ರ ಒಡೆಯರ್‌ರವರು ಈ ಮಾಸ ೨೦ ನೇ ತಾರೀಕು ಕಾಶ್ಮೀರಕ್ಕೆ ಪ್ರಯಾಣಮಾಡಿದರು. ಅವರು ಅಲ್ಲಿ ಸುಮಾರು ೧೫ ದಿವಸಗಳಿರುವೆಂದು ತಿಳಿದು ಬಂದಿದೆ

ಕಾಶ್ಮೀರದ ಮುಖ್ಯಮಂತ್ರಿಗಳಾದ ಜನಾಬ್ ಷೇಕ್ ಮಹಮದ್ ಅಬ್ದುಲ್ಲಾರವರು ಇತ್ತ ಆಹ್ವಾನವನ್ನಂಗೀ ಕರಿಸಿ ಮೈಸೂರು ಶ್ರೀಮನ್ಮಹಾರಾಜರವರು ಕಾಶ್ಮೀರ ಪ್ರವಾಸ ಕೈಗೊಂಡಿರುತ್ತಾರೆ

ಸ್ವೀಕಾರ

ಧಾರವಾಡ ಡಿ॥ ಲಕ್ಷ್ಮೇಶ್ವರ ಗ್ರಾಮವಾಸಿಗಳಾದ ಶ್ರೀ ಸಂಗಪ್ಪನವಸ್ಸು ದೊಡ್ಡಬಸ್ಸು ಹೂವಿನ ಇವರು ತಾ ೩-೪-೫೨ ನೇ ದಿವಸ ತಿಪಾಧೀನರಾದ ಸಮಯ ದಲ್ಲಿ ಪ್ರಭಾಪೋಷಣೆಗಾಗಿ ಸಮರ್ಪಿಸಿದ ॥ ರೂ ಶ್ರೀ ಮುಂಡೆ ಲಿಂಗಪ್ಪ ತಾಲಾ ಮಾತ್ಸರ ಇವರ ದ್ವಾರಾ ತಲ್ಪಿರುತ್ತದೆ.

ಈ ಮೇಲ್ಕಂಡ ಮಹಾಶಯರಿಗೆ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಪ್ರಾರ್ಥಿಸುತ್ತೇವೆ

ಸಿದ್ಧಾಂತಶಿಖಾಮಣಿ

ನ್ಯಾಯಾಂಗ ಸಚಿವರು ವಿಶೇಷ ವಿವಾಹಗಳ ಮಸೂದೆಯನ್ನು ಮಂಡಿಸಿದಾಗ ಆವರಿಗೆ ಸದಸ್ಯ ರೊಬ್ಬರು ಸೇಲ್ಯೂಂಡ್ ಕರಾರನ್ನು ಕೊಟ್ಟರು.

ವೈಯಕ್ತಿಕ ಇನಾಂ ರದ್ದಿನ ಮಸೂದೆ

ವೈಯಕ್ತಿಕ ಇನಾಂದಾರಿಯನ್ನು ರದ್ದುಗೊಳಿಸುವ ಮಸೂದೆಗೆ ಜೊಂಬಾಯಿ ವಿಧಾನ ಸಭೆಯಲ್ಲಿ ಪೂರ್ಣ ಬೆಂಬಲ ದೊರೆಯಿತು

ನಾರ ಭವಿಷ್ಯ

ಲೇ ಯಡಗೋಡ ಬಾಸವಶಾಲಾಪ್ರಾಧಾನ ಜ್ಯೋತಿಷಾರ್ತಂಡ ವೆಂ॥ ಶೇದ್ಯಾರಾಧ್ಯಶಾಸ್ತ್ರಿಗಳು

(ತಾ॥ ೧೬ ೮ ೩೮ ರಿಂದಾ ತಾ॥ ೨೨-೮-೩೮ ರ ವರೆಗೆ)

ಮೇಷರಾಶಿಯವರಿಗೆ

ಈ ವಾರದಲ್ಲಿ ಸಂತೋಷವು ಸರ್ವರೀತಿಯಿಂದ ದೊರಕುವುದು

ವೃಷಭರಾಶಿಯವರಿಗೆ

ಪ್ರಸ್ತುತದಲ್ಲಿ ವಿಚಾರಿಸಿ ಕೈಹಾಕಿದಲ್ಲಿ ಅನಂದವು ಕೈಸೇರುವುದು

ಮಿಥುನರಾಶಿಯವರಿಗೆ

ನಿತ್ಯಸಾಯುಷ್ಯವು ಸತ್ಯದಿಂದ ಜಯಿಸುವುದು. ಹುಸಾರಾ ಜೀವನಬೆಟ್ಟಿರೆ ಶಾಂತಿಯು ನೆಲಸದು

ಕರ್ಕರಾಶಿಯವರಿಗೆ

ಸಾರಾಸಾರ ವಿಚಾರ ಶೀಲರಾಗಿ ನೀರಿನ ಪದಾರ್ಥದಲ್ಲಿ ಹುಸಾರಿಯಿದ್ದರೆ ಸುಖವುಂಟಾಗುವುದು

ಸಿಂಹರಾಶಿಯವರಿಗೆ

ಅಧಿಕಾರಿಮದದಿಂದ ನಡೆಯದೆ ವಿನಾಯದಿಂದ ನಡೆಕೊಂಡು ಸುಖಿಗಳಾಗಿರಿ

ಕನ್ಯಾರಾಶಿಯವರಿಗೆ

ಬುದ್ಧಿವಂತರಾಗಿ ಇದ್ದ ಕಂಟಕ ಬಯಲಾಗುವ ವಿದ್ಯ ಸಡೆಯುವನಂಬಾಗಿರಿ

ತುಲಾರಾಶಿಯವರಿಗೆ

ಇಷ್ಟರ ಅಗಮನ, ವಾರ್ತಾದಿಗಳಿಂದ ಮನಸ್ಸು ಶಾಂತಿಯಲ್ಲಿದ್ದು ಧಾನ್ಯಾಭಾವ, ದುಡ್ಡಿನ ದರ್ಶನವಿಲ್ಲದೆ ಕೊರಗುವಿರಿ ಆದರೂ ಸಮಾಧಾನ

ವೃಶ್ಚಿಕರಾಶಿಯವರಿಗೆ

ಕೆಂಪಿನಲ್ಲಿ ಇಂಪಾಗಿರದೆ ತಂಪಿನಂತೆ ತಣ್ಣಗಿದ್ದರೆ ಶಾಂತಿಯುಂಟಾಗುವುದು

ಧನುರಾಶಿಯವರಿಗೆ

ಹರಗುರುದರ್ಶನದಿಂದ ಆರುವ ದೊರೆತು ಕಾರ್ಯಗಳೆಲ್ಲಾ ದರೂ ನಿರಾತಂತರಾಗುವಿರಿ

ಮಕರರಾಶಿಯವರಿಗೆ

ಸರ್ವರಲ್ಲಿ ಮಾನವಿ ಘನವಾಗಿರಬೇಕು. ಅಂದರೆ ಸುಖಮುಖಗಳು ಸಮನಾಗಿ ಜರುಗುವವು

ಕುಂಭರಾಶಿಯವರಿಗೆ

ಹೋಗಾಗಿ ಪಡೆಯದೆ ಕೈತಿಗೆ ಅಹಾಗಿ ನಡೆಯದೆ ಮೂಢರಾಗದೆ ಒಂಟಿಗರಾಗಿ ಬಂಟಿತನದಿಂದ ಸಂತೋಷ ಹೊಂದಿರಿ.

ಮೀನರಾಶಿಯವರಿಗೆ

ವ್ಯಾಪಾರ ಸಾಮಾರಂಗಳಲ್ಲಿ ಹರಗುರು ಚೇವತೆಗಳಲ್ಲಿ ವಿಶ್ವಾಸವಿಟ್ಟು ಪಡೆದಲ್ಲಿ ಶಾಂತಿಯು ಕೈಸೇರುವುದು.

ಸಿದ್ಧಾಂತಶಿಖಾಮಣಿ

ವೀರಶೈವಮತದಲ್ಲಿ ಜನ್ಮಧಾರಣಮಾಡಿದ ಪ್ರತಿಯೊಬ್ಬ ಜಗಂ ಸಿದ್ಧಾಂತಶಿಖಾಮಣಿಗ್ರಂಥವು ಪ್ರಾಣದಂತಿರುವುದು ಈ ಮಹಾಗ್ರಂಥದಲ್ಲಿ ಶ್ರೀಜಗದ್ಗುರುರೇಣುಕಾಚಾರ್ಯರು ಜಗ ದ್ಧಿತ್ಯಾರ್ಥವಾಗಿ ಅಗಸ್ತ್ಯಮಹರ್ಷಿಗಳಿಗೆ ವೀರಶೈವಸಿದ್ಧಾಂತವನ್ನು ಉಪದೇಶಮಾಡಿದ ವಿಷಯವು ಪ್ರತಿಪಾದಿಸಲ್ಪಟ್ಟಿರುವುದು ವೀರ ಶೈವಮತದಲ್ಲಿ ಸದ್ಯ: ದೊರೆಯತಕ್ಕ ಗ್ರಂಥಗಳೆಲ್ಲಲ್ಲ ಇದೇ ಅಮ ಪುರಾತನಗ್ರಂಥವೆನಿಸಿಕೊಂಡು ಮೆರೆಯುತ್ತಿರುವುದು ಈ ಗ್ರಂಥವು ಈಗ್ಗೆ ಸುಮಾರು **೩೨೫೦ವರ್ಷ** ವರ್ಷಗಳ ಪೂರ್ವದಲ್ಲಿದ್ದ **ಶ್ರೀತಿವಯೋಗಿಪಾಚಾರ್ಯ**ರೆಂಬ ಆಚಾರ್ಯರಿಂದ ರಚಿಸಲ್ಪಟ್ಟಿರುವುದು ಈ ಮಹಾಗ್ರಂಥವು ವೀರಶೈವಮತಕ್ಕೆ ಮೂಲಸ್ತಂಭವಿರುವುದರಿಂದ, ಇದಕ್ಕೆ ಇಂದಿನವರಿಗೆ ಅನೇಕರು ಅನೇಕ ವಿಧವಾದ ವ್ಯಾಖ್ಯಾನಗಳನ್ನು ಬರೆದಿರುತ್ತಾರೆ ಆದರೆ ಒಂದು ವ್ಯಾಖ್ಯಾನದಲ್ಲಿಯಾದರೂ ಗೂಢಾರ್ಥಗರ್ಭಿತವಾದ ಪ್ರೌಢಾರ್ಥಗಳಿಗೆ ಸರಿಯಾದ ಅರ್ಥವು ಬರೆಯಲ್ಪಟ್ಟಿಲ್ಲ ಈ ಕೊರತೆ ಯನ್ನು ದೂರಮಾಡುವುದಕ್ಕಾಗಿ **ಪಂಡಿತ ಶ್ರೀಕಾಶೀನಾಥ ಶಾಸ್ತ್ರಿಗಳವರು** ಬಹುಶ್ರಮವಹಿಸಿ ಈ ಗ್ರಂಥಕ್ಕೆ ಕನ್ನಡ ಭಾಷೆಯಲ್ಲಿ ಬಹು ಸರಳವಾದ ವ್ಯಾಖ್ಯಾನವನ್ನು ರಚಿಸಿ, ಸಮಸ್ತ ವೀರಶೈವರ ಕೃತಜ್ಞತೆಗೆ ಪಾತ್ರರಾಗಿರುತ್ತಾರೆ ಈ ಗ್ರಂಥವನ್ನು ಓದಿದೋಡನೆಯೆ ಪಂಡಿತರ ವ್ಯಾಖ್ಯಾನದ ಮಹತ್ತ್ವವು ಜಾಜ್ವಲ್ಯಮಾನವಾಗಿ ವೇದ್ಯವಾಗುವುದ ಪಾಠಕರ ಅನುಕೂಲ್ಯಾರ್ಥಿ ಬಹು ಶ್ರಮವಹಿಸಿ ಸಿದ್ಧಪಡಿಸಿದ ವಿಷಯಾನುಕ್ರಮಣಿಕೆಯಿಂದ ಈ ಗ್ರಂಥಕ್ಕೆ ಇನ್ನೂ ಹೆಚ್ಚಿನ ಸೌಂದರ್ಯವು ಉಂಟಾಗಿರುವುದು ಈ ಗ್ರಂಥವನ್ನು ಮುದ್ರಿಸಲ್ಪಟ್ಟಿದೆ ಈ ಗ್ರಂಥವು ಸಂಪೂರ್ಣವಾಗಿ ಸುಂದರವಾಗಿ ಮುದ್ರಿಸಲ್ಪಟ್ಟಿದೆ ಈ ಗ್ರಂಥವನ್ನು ಸಂಪೂರ್ಣವಾಗಿ ಸಾರವಾಗಿ ಶ್ರೀಮದ್ ಜಗದ್ಗುರು ರೇಣುಕಾಚಾರ್ಯರ ಲೀಲಾತ್ಮಕವಾದ ಪುರೋಹರಭಾವಚಿತ್ರ ೬ ಬೋಧಿಸಲ್ಪಟ್ಟಿರುವುದರಿಂದ ಗ್ರಂಥದ ಸೌಂದರ್ಯವು ವರ್ಣಾತೀತವಾಗಿದೆ ಪ್ರತಿಯೊಬ್ಬ ವೀರಶೈವನೂ ತಪ್ಪದೆ ತನ್ನ ಮನೆಯಲ್ಲಿರುವ ಈ ಅಮೂಲ್ಯಗ್ರಂಥವನ್ನು ವೀರಶೈವರಲ್ಲದೇ ಅವಶ್ಯವಾಗಿ ಓದಬೇಕು

ಬೆಲೆ ೩ ರೂಪಾಯಿ

ಮನಸ್ಸೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಲಿಂಗಾವತಾರದ ಫೋಟೋ (ನಾನಾವಿಧಬಣ್ಣಗಳಿಂದ ಮುದ್ರಿತವಾದುದು) ಸೈಜು ೧೪ × ೧೦ ಬೆಲೆ	೦—೬—೦
ಶ್ರೀಜಗದ್ಗುರು ಪಂಚಾಚಾರ್ಯರು ಪಂಚಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ	೦—೩—೦
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪ × ೧೦ ಬೆಲೆ ೧೪	೦—೪—೦
,, ,, ,, ಚಿಕ್ಕ ಸೈಜು ಬೆಲೆ	೦—೧—೬
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸಿರುವ ಫೋಟೋ	೦—೧—೬
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಸಚ್ಚಿದಾನಂದ ಮಾಡುವ ಫೋಟೋ	೦—೧ ೬
ಶ್ರೀರೇಣುಕಾಚಾರ್ಯರು ವಿಧಿಗಣನ ಪ್ರಾರ್ಥನೆಯಂತೆ ೬ ಕೊಟಿ ಶಿವಲಿಂಗಗಳನ್ನು ಸ್ಥಾಪಿಸುವ ಫೋಟೋ	೦—೧ ೬
ಶ್ರೀ ಶಾಶೀ ಜಗದ್ಗುರು ವೀರಭದ್ರಶಿವಾಚಾರ್ಯಮಹಾಸ್ವಾಮಿಗಳವರ ಫೋಟೋ (ನಾನಾವಿಧಬಣ್ಣದ್ದು)	೦—೪—೦
ಶ್ರೀರೇಶೀಜಗದ್ಗುರುಗಳಿಗೆ ಶ್ರೀರಂಭಾಪುರೀ ಜಗದ್ಗುರುಗಳು ಕರಿಟಿದ್ಧಾರಣೆಮಾಡುವ ಫೋಟೋ	೦—೧—೬
ಸದ್ಯ: ಪೀಠಾರೋಹಣಮಾಡಿರುವ ಶ್ರೀಕಾಶೀಜಗದ್ಗುರು ಶ್ರೀವೀರಭದ್ರಶಿವಾಚಾರ್ಯಮಹಾಸ್ವಾಮಿಗಳವರ ಫೋಟೋ	೦—೪—೦
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೧—೬
ಶ್ರೀಮದ್ರಂಭಾಪುರೀ ಸೀಕಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ	೦—೧—೬
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸ್ಮೃತಿಗಾಯ್ದ ಶ್ರೀ ಕಾಶೀನಾಥಶಾಸ್ತ್ರಿಗಳವರು ಉಳಿತುಕೊಂಡಿರುವ ಫೋಟೋ	೦—೧—೬
ಸಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಚಿಕ್ಕಸೈಜು ೧೪	೦—೨—೦
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ದೊಡ್ಡಸೈಜು ೧೪	೦—೪—೦
ಶ್ರೀ ಜಗದ್ಗುರು ಉಜ್ಜಯಿನೀ ಸೀಕಪೀಠ ಮಹಾಸ್ವಾಮಿಗಳ ಅತ್ಯಂತ ಸುಂದರವಾದ ಫೋಟೋ ೧೪	೦—೧—೬
ಶ್ರೀ ಜಗದ್ಗುರು ಉಜ್ಜಯಿನೀ ಸೀಕಪೀಠ ಅತ್ಯಂತ ಬ್ರಾಹ್ಮೀಸ ಕಟ್ಟಿದ ಸುಂದರ ಫೋಟೋ ೧೪	೦—೧—೬
ಶ್ರೀ ಜಗದ್ಗುರು ಕೇದಾರಸಿಂಹ ಸನದು ಅತ್ಯಂತ ಸುಂದರವಾದ ದೊಡ್ಡ ಫೋಟೋ	೦—೧—೬
ಶ್ರೀ ರಂಭಾಪುರೀ ಜಗದ್ಗುರುಗಳವರ ಸ್ಮೃತಿಗಾಯ್ದ ಶ್ರೀ ಹುಲ್ಲೂರು ಜಡವು ವೀರ ಹೊಸ್ಕೆರುವ ಫೋಟೋ	೦—೧—೬
ಶ್ರೀಜಗದ್ಗುರುರಂಭಾಪುರೀ ಸೀರವಲ್ಲಿ ಸ್ಥಾಪಿಸುವ ಶಿಲಾಶಾಸನಗಳು	೦—೩—೦

ಸರ್ವೋತ್ತಮವಾದ ಮತಗ್ರಂಥಗಳು

ಸೋತ್ರಸೂತ್ರಪಠ (೩ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೫ನೆಯ ಆವೃತ್ತಿ)	೧ ಆಣೆ
ಶ್ರೀಜಗದ್ಗುರು ರೇಣುಕಾಚಾರ್ಯ ಕೀರ್ತನ	೧ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೧೧ನೆಯ ಆವೃತ್ತಿ)	೨ ಆಣೆ
ಶ್ರೀರೇಣುಕಾಚಾರ್ಯಪಠಕ (೨ನೆಯ ಆವೃತ್ತಿ)	೨ ಆಣೆ
ಶ್ರೀರುದ್ರಮುನಿಶಿವಾಚಾರ್ಯ ಶತಕ	೨ ಆಣೆ
ಶಿವಶಕ್ತಿವಿಲಾಸ	೨ ಆಣೆ
ವಿಜಯನಗರ ಸಾಮ್ರಾಜ್ಯವೂ ಶ್ರೀರೇಣುಕಾಚಾರ್ಯರೂ	೨ ಆಣೆ
ಬೃಲ್ಲಮಾಹಾತ್ಮ್ಯ (೩ನೆಯ ಆವೃತ್ತಿ)	೨ ಆಣೆ
ಸಂಪ್ತಿಪ್ತ ಶಿವಪೂಜಾವಿಧಿ (೧೦ನೆಯ ಆವೃತ್ತಿ)	೩ ಆಣೆ
ಖಸವಾದಿಸಿಜಪಶ್ಚದರ್ಪಣ (೫ನೆಯ ಆವೃತ್ತಿ)	೩ ಆಣೆ
ಪಂಚಾಚಾರ್ಯಶ್ಲೋಕಾಶ	೩ ಆಣೆ
ಪಂಚಾಚಾರ ಪ್ರಕಾಶಿಕಾ	೩ ಆಣೆ
ಶ್ರೀಗುರುತತ್ತ್ವಪದಗಳು (೩ನೆಯ ಆವೃತ್ತಿ)	೪ ಆಣೆ
ವೀರಶೈವಾಂಜಾವಿಧಿ (೪ನೆಯ ಆವೃತ್ತಿ)	೪ ಆಣೆ
ಲಿಂಗಧಾರಣವಿಧಿ	೪ ಆಣೆ
ವಿವಾಹವಿಧಿ (೪ನೆಯ ಆವೃತ್ತಿ)	೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ	೪ ಆಣೆ
ವೀರಶೈವ ಸ್ಯಾಯಶಿತ್ತವಿಧಿ	೪ ಆಣೆ
ಶೈವಿದವಾಜ್ಯಯರಪದ್ಯ	೪ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೩ನೆಯ ಆವೃತ್ತಿ)	೪ ಆಣೆ
ಶೈವೋಪನಿಷತ್ಸಂಗ್ರಹ (ಸಂಸ್ಕೃತ) (೩ನೆಯ ಆವೃತ್ತಿ)	೬ ಆಣೆ
ಸನ್ಯಾಸಾಶ್ರಮವಿಮರ್ಶತತ್ತ್ವಶಿಂಶೀಕರಣ (೩ನೆಯ ಆವೃತ್ತಿ)	೬ ಆಣೆ
ವೀರಶೈವಾತ್ಯೇಷ್ಟಿ-ಶ್ರಾದ್ಧವಿಧಿ	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ ಚಿಕ್ಕಸೈಜು)	೮ ಆಣೆ
ಶಿವಾದ್ವೈತಸರಿಧಾನ (ಸಂಸ್ಕೃತ)	೮ ಆಣೆ
ವೀರಶೈವಮಹಾತ್ಮರು	೮ ಆಣೆ
ಬಸವೇಶ್ವಾಂತೆದಿವಂಕರ (೩ನೆಯ ಆವೃತ್ತಿ)	೮ ಆಣೆ
ಆಗಮಪರಿಜ್ಞಾನ	೮ ಆಣೆ
ಪಂಡಿತ ಶ್ರೀಕಾಶೀನಾಥಧರಶಾಸ್ತ್ರಿಲವಾರಿ ಭಾವಣಣಮು. (ತೆಲುಗು)	೮ ಆಣೆ
ಶ್ರೀಜಗದ್ಗುರು ಶಿವಾನಂದವಿಜಯ	೮ ಆಣೆ
ಶ್ರೀಜಗದ್ಗುರು ವಿಶ್ವಕರ್ಣವಿಜಯ ನವ್ಹತ್ಯಮಾಲಿಕಾ	೮ ಆಣೆ
ಕರ್ನ್ನಡ ನ್ಯಾಯಶಿತಕವರ್	೮ ಆಣೆ
ಸಿದ್ಧಾಂತಸಾರಾವಳಿ (ಶ್ರೀಮೋಚನಶಿವಾಚಾರ್ಯಕೃತ)	೧೩ ಆಣೆ
ಶಿಖಾಸೂತ್ರಸಿದ್ಧಾಂತವರ್ಪಣ	೧೩ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ಪ್ರಾಚೀನತ್ವ	೧ ರೂ
ಮಾಹೇಶ್ವರ ದೀಕ್ಷಾವಿಧಿ (೩ನೆಯ ಆವೃತ್ತಿ)	೧ ರೂ
ವಿವೇಕಮುಕ್ತಾವಳಿ	೧ ರೂ
ವಿಚಾರಸಾರಾವಳಿ	೧ ರೂ
ವೈವಿಧಿಕವಿವಾಹವಿಧಿ (ವೈದಿಕ್ಸರಯುಕ್ತವಾದುದು ೩ನೆಯ ಆವೃತ್ತಿ)	೧॥ ರೂ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧॥ ರೂ.
ಸಚಿತ್ರ ರೇಣುಕವಿಜಯ (೩ ನೆಯ ಆವೃತ್ತಿ)	೨ ರೂ
ಶಿವಾಗಮಸಂಗ್ರಹ: (ಖಂಡ್ರಿಷ್ಟಾನಾಗಮ-ಕಾರಣಾಗಮ-ಮಕುಟಾಗಮ ಸೂಕ್ಷ್ಮಾಗಮಗಳಂಥ ಕೂಡಿರುವುದು)	೨ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಷಾವಚನ)	೨॥ ರೂ
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	೩ ರೂ
ವೀರಶೈವರತ್ನ (೩ನೆಯ ಆವೃತ್ತಿ, ೩೦ ಪಾಕತ್ತದ ಫೋಟೋಗಳಿರುವುದು)	೩ ರೂ
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೪೪ ಪುಟ)	೧೨ ರೂ
A brief life-sketch of Pandit Sri Kashmatha Shastrya (*English*)	**4 As**
The Philosophical Aspect of Virasaivism (*English*)	**8 As**
Speeches by Panat Shri Kashmatha Shastrya (*English*)	**12 As**
ಸಿಂಹಾಧಾರಣಚಂದ್ರಿಕಾ (ಸಂಸ್ಕೃತ)	೩ ಆ
ವೀರಶೈವರತ್ನ (ಮರಾಠಿ)	೧ ರೂ
ಮಹಾನಾರಾಯಣೋಪನಿಷತ್ (ವೀರಶೈವಭಾಷ್ಯ-ಸಂಸ್ಕೃತ)	೧ ರೂ.
ನಂದಿಕೇಶ್ವರಕಾರಿಕಾ (ಸಂಸ್ಕೃತ)	೨ ಆಣೆ

ಮ್ಯಾನೇಜರ್—**ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್, ಪ್ರೆಸ್, ಮೈಸೂರು.**

Edited, Printed and Published by Bruhanmath Mahadevaiah at Shri Panchacharya Electric Press, Sayaji Rao Road, Mysore.

REGISTERED No M. 2266 ‖ ಶ್ರೀನಾಗಸ್ಥೂರು ಪಂಚಾಂಗಾಯರ್ಯಾಃ ಪ್ರಸೀದಂತು ‖ REGISTERED No. M. 2266

ಪಂಚಾಂಗ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಖ್ಯಾನನಪಂಕಜಾತಜನಿತರ್ ಪಂಚಾಸ್ಯವೀರಾಧಿಪರ್ ! ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಮಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಮೋಧಕರ್ ! ಪಂಚಾಚಾರ್ಯಜಗದ್ಗುರೂತ್ತಮವರರ್ ಪಾಲಿಪ್ಪು ವೀಲೋಕಮಂ ॥

ಸಂಸ್ಥಾಪಕರು—ನಾಗನೂರು ಬೃಹಸ್ಪತ್ಯಾಧ್ವರ್ಯುಕಾದ ವೇ॥ ಪಂ॥ ಶ್ರೀ ಕಾಶೀನಾಥಶಾಸ್ತ್ರಿಗಳವರು.

ಚಾರ್ಜಿಗೆ ಆಂದಾ ಪರಸ್ಥಳದವರಿಗೆ ೩ ರೂ ಸಂಪಾದಕರು—ನಾಗನೂರು ಬೃ॥ ಮಹಾದೇವಯ್ಯನವರು ವಿ ಪಿ ಖರ್ಚು ಸೇರಿ ೩ ರೂ ೬ ಆಣೆ

ಸಂಪುಟ ೩೬] ಸೋಮವಾರ ತಾ॥ ೧೮ ನೇ ಆಗಸ್ಟ್ ೧೯೫೨ [ಸಂಚಿಕೆ ೧೫

ಪತ್ರವ್ಯವಹಾರ

[ಚಾತ್ಮೀದಾರರು ಅಭಿಪ್ರಾಯ ಪಡುವ ಲೇಖನಗಳಿಗೆ ಪತ್ರಿಕಾಕರ್ತರು ಜವಾಬ್ದಾರರೆಲ್ಲ ಎಂಬ ವಿಷಯವನ್ನು ಸರ್ವರೂ ಲಕ್ಷ್ಯದಲ್ಲಿಡಿಕಳ್ಳಬೇಕು —ಸಂ]

ಮೈಸೂರು ಗವಿಮಠದ ಶ್ರೀ ಗೌರೀಶಂಕರ ಸ್ವಾಮಿಗಳ ನಿಧನದ ಬಗ್ಗೆ ಸಂತಾಪ ಸೂಚಕ ಸಭೆ

ತಾ॥ ೧೩ ೮ ೫೨ ರ ಸಾಯಂಕಾಲ ಮೈಸೂರು ನಗರದ ಶ್ರೀ ರೇಣುಕ ಸಂಘದಲ್ಲಿ ಸಾರ್ವಜನಿಕರು ಸಭೆ ಸೇರಿ ತೀರ್ಮಾನಿಸಿದ ಸಂತಾಪ ಸೂಚನೆ —

ಮೈಸೂರು ಅರಮನೆ ಗವಿಮಠದಲ್ಲಿದ್ದ ಶ್ರೀ ಗಾರೀ ಶಂಕರ ಸ್ವಾಮಿಗಳು ಎರಡು ವರ್ಷಗಳಾಗಾಯ್ತು "ಕ್ಯಾನ್ಸರ್" ವ್ಯಾಧಿಯಿಂದ ನರಳುತ್ತಿದ್ದು ಇದೇ ಆಗಸ್ಟ್ ೧೫ ನೇ ತಾರೀಖು ಸುಂಗಳವಾರ ಪೆಬ್ಬಾಡು ಅಪ್ರತ್ರೆಯಲ್ಲಿ ಶಿವೈಕ್ಯರಾದ ಮೂಲಕ ಅವರ ಕಳೇಬರವನ್ನು ಮೈಸೂರಿಗೆ ತಂದು ಗವಿಮಠದಲ್ಲಿ ಸಮಾಧಿ ಮಾಡಲಾಯಿತು ಶ್ರೀ ಸ್ವಾಮಿಗಳವರು ಉದ್ದಾಮ ಪಂಡಿತರಾಗಿದ್ದರು ಇವರು ಕಾಶಿ, ನೇಪಾಳ, ಕಾಶ್ಮೀರ ಮೊದಲಾದ ಕಡೆಗಳಲ್ಲಿ ಸಂಚಾರಮಾಡಿ ತ್ರೈವಿದ್ಯಾಂತ ದಲ್ಲಿ ಮಹಾವಿದ್ವತ್ತನ್ನು ಸಂಪಾದಿಸಿದ್ದರು ಇವರಿಂದ ತ್ರೈವಿದ್ಯಕ್ಕೆ ಹೆಚ್ಚಾಗಿ ಸಹಾಯವಾಗಬೇಕಾಗಿತ್ತು ಆದರೆ ಈಶ್ವರಾಜ್ಞೆಯಂತೆ ಇವರು ನಮ್ಮನ್ನೆ ಗಲಿದುದು ಬಹಳ ಸಂತಾಪದಾಯಕವಾಗಿದೆ ಭಗವಂತನು ಇವರ ಆತ್ಮಕ್ಕೆ ಶಾಂತಿಯನ್ನಿತ್ತೀಯಲೆಂದು ಶ್ರೀಮಾನ್ ನೋನು ಸುಂದರ ಶರ್ಮರವರು ಸೂಚನಾ ತಂದದ್ದಕ್ಕೆ ಸರ್ವರೂ ತಮ್ಮ ಸಂತಾಪವನ್ನು ವ್ಯಕ್ತಪಡಿಸಿ ಏದು ನಿಮಿಷಗಳ ಕಾಲ ಮೌನವನ್ನಾಚರಿಸಿ ಸಭೆ ಮುಕ್ತಾಯಗೊಳಿಸಲ್ಪಟ್ಟಿತ

ಸಂಘದ ಕಾರ್ಯದರ್ಶಿಗಳು
ಎಮ್ ಎಲ್ ಬಸವಣ್ಣಿ
ಬಿ ನಾಗಭೂಷಣಾರಾಧ್ಯೆ

ಮಹಾತ್ಮರ ಕಾರ್ಯಗಳು ಮಹಿಮಾಸ್ಪದಗಳೇ

(ಪದ್ಮರಾಜಪುರಾಣದಿಂದ ಆರಿಸಿರುವ ಭಾಗ)

ಹೊಯ್ಸಳ ರಾಜನಲ್ಲಿದ್ದ ಹರಿಕತೆ ಭಕ್ತಿವಿಶ್ವಾಸಗಳ ಪ್ರಭೆಯನ್ನು ನಾಚಿಕರು ಪ್ರಭೆಯಲ್ಲಿ ವಿಜಿರಬಹುದು ಪಂಪೆಯ ವಿರೂಪಾಕ್ಷನಲ್ಲಿ ಆತನ ಮನಸ್ಸು ಲೀನವಾಗುತ್ತ ಕೊನೆಗೆ ತನ್ನ ಮನೆಯಲ್ಲಿದ್ದ ಯಾವತ್ತೂ ಒಡವೆಗಳನ್ನು ಜಂಗಮರಿಗೆ ದಾನಮಾಡಿ, ಅವರ ಆತಿಥ್ಯದನ್ನು ಪಡೆದು ಪಂಪಾಕ್ಷರಂಭಮುಖರಾಗಿ ಪ್ರಯಾಣವಾಗಿ ಪಮ ಮಾರ್ಗಮಧ್ಯದಲ್ಲಿ ಗುಹಾರಣ್ಯದೊಳಗೆ ಬಾಗಿಲು ಮುಚ್ಚಲ್ಪಟ್ಟು ಒಂದು ಶಿವದೇವಾಲಯವನ್ನು ಕಂಡು ಹಗಲಿರುಳೆ ಬಾಗಿಲ ಮುಚ್ಚಲಿಕ್ಕೆ ಕಾರಣವೇನೆಂದು ಅಲ್ಲಿದ್ದ ಜನಗಳನ್ನು ಕೇಳಲು ಅವರು "ದೇಗುಲ ದೊಳಗೆ ಒಂದು ಭ್ರಹ್ಮರಾಕ್ಷಸ ವಾಸವಾಗಿರುವುದೆಂದೂ, ಅದು ಯಾರನ್ನೂ ಪ್ರವೇಶಿಸಂತೆ ತೋಂದರೆ ಮಾಡುವು ದೆಂದೂ ಹೇಳಿದರು ಅದನು ಕೇಳಿ ಶಿವಾಗಧಳ ನಾದ ಹರಿದೇವನು ಶಿವಲಿಂಗಪೂಜಾಭಂಗಕ್ಕೆ ಕಾರಣವಾಗಿ ಆ ಬ್ರಹ್ಮರಾಕ್ಷಸನನ್ನು ಕರೆಯಲು, ಶಿವಭಕ್ತರಿಗೆ ಭಯ ಪಟ್ಟು ನಡುಗುತ್ತಾ ಹರಿದೇವನ ಪಾದಗಳಿಗೆ ನಮಸ್ಕರಿಸಿ ನಿಂತುಕೊಂಡಿತು ಅದನ್ನು ನೋಡಿ ಮಂದಹಾಸವಿಂದ ಹರಿದನು —'ಎಲೆಲೆ' ನೀನು ಈ ಮಹಾದೇವನ ಪೂಜೆಗೆ ಅಡ್ಡಿಯನ್ನುಂಟುಮಾಡಬಹುದೇ' ಎಂದು ಕೇಳಲು ಆ ತೇಜೋಮಯನಾದ ಹರಿಕತ ದರ್ಶನ ಮಾತ್ರದಿಂದಲೇ ಅವನು ಬ್ರಹ್ಮರಾಕ್ಷಸತ್ವವನ್ನು ಕಳೆದು ಕೊಂಡು ದಿವ್ಯದೇಹವನ್ನು ಪಡೆದನು ಆನಂತರ ಅವನು ಇವನ ಹಿರಿಮೆಯನ್ನು ಹೊಗಳುತ್ತಾ ಸ್ವರ್ಗಕ್ಕೆ ತೆರಳಿ ದನು ಎಲ್ಲರೂ ಇದೇನು ಆಶ್ಚರ್ಯವೆಂದು ಹೊಗಳು ತ್ತಿರಲು, ನಿರ್ಮಲಚರಿತ್ರನಾದ ಹರಿದೇವನು ಈಶಾಲಯ ವನ್ನು ಪ್ರವೇಶಿಸಿ ಶಿವಲಿಂಗಪೂಜೆಯನ್ನು ಮಧ್ಯೆಸಿ ಜಂಗಮರ ಜತೆಯಲ್ಲಿ ಭೋಜನಾದಿಗಳನ್ನು ಮಾಡಿ ತುಂಗಾತೀರದ ಕಡೆಗೆ ಪ್ರಯಾಣಮಾಡಿದನು

ಈ ಕಡೆ ತುಂಗಾನದೀತಟದ ವಿರೂಪಾಕ್ಷನು ತನ್ನ ಆಸ್ಥಾನವಿದ್ವಿರುವರಿಗಿಲ್ಲಾ 'ನನ್ನ ಕುಮಾರನಾದ ಹರಿದೇವನು ಪಂಪಾಕ್ಷೇತ್ರಕ್ಕೆ ಬರುತ್ತಿರುವನು ಅವನನ್ನು ಮರ್ಯಾದೆಯಿಂದ ಇದ್ದಿರ್ಗೊಂಡು ಕರೆತರಬೇಕೆಂದು ಕನಸ್ಸಿನಲ್ಲಿ ಹೇಳಲು ಆ ಮಹಾದೇವನ ಆಜ್ಞಾನುಸಾರ ವಾಗಿ ಅಲ್ಲನ ಭಕ್ತರುಗಳು ಸಕಲ ಮರ್ಯಾದೆಯಿಂದ ಕರೆದುಕೊಂಡು ಬಂದರು ಹರಿಕತನು ವಿರೂಪಾಕ್ಷಾ ಲಯವನ್ನು ಪ್ರವೇಶಿಸಿ ಶಿವಲಿಂಗದರ್ಶನದಿಂದ ಭಕ್ತಿ ಪರವಶನಾಗಿ ನಿರ್ಮಾಂಜನಹೊಂದಿದ ದೇಹದಿಂದಲೂ ಅನಂದಭಾಷ್ಪಪೂರಿತ ನೇತ್ರದಿಂದಲೂ, ಕೂಡಿ ನಮ ಸ್ಕರಿಸಿ ಗದ್ಗದ ಧ್ವನಿಯಿಂದ ಸ್ತೋತ್ರಮಾಡಿ, ಭಕ್ತಿಪ್ರತಿ ಶಯದಿಂದ ತುಂಬಿದ ಹೃದಯವುಳ್ಳವನಾದನು

ಆನಂತರ ಪ್ರತಿದಿನವೂ ಶಿವಲಿಂಗಕ್ಕೆ ನಿರ್ಮಲ ತುಂಗಭದ್ರಾ ಜಲದಿಂದ ಅಭಿಷೇಕಮಾಡುತ್ತಲೂ, ಅಲ್ಲಿರುವ ಉದ್ಯಾನವನದ ಪುಷ್ಪಭರಿತವಾದ ದಿವ್ಯ ಕುಸುಮಗಳಿಂದ ತನ್ನ ಇಷ್ಟದೈವವನ್ನು ಅಲಂಕರಿ ಸುತ್ತಲೂ, ದಿವ್ಯ ಗಂಧವನ್ನು ಅನುಲೇಪಿಸುತ್ತಲೂ ಹೊಸೆವ ದೀಪವನ್ನು ಬೆಳಗುತ್ತಲೂ ಫಲಪುಷ್ಪಗಳ ಅರ್ಪಣೆಯಿಂದ ನೈವೇದ್ಯಮಾಡುತ್ತಲೂ, ನವರಸ ಪೂರ್ಣವಾದ ಸವಿತೆಗಳಿಂದ ಈಶ್ವರನನ್ನು ಸ್ತುತಿಸುತ್ತಲೂ, ಶಿವಕರಣರ ಕಥೆಗಳನ್ನು ಬರೆಯುತ್ತಲೂ ಆ ಪಂಪಾಪತಿಯ ಸಾನ್ನಿಧ್ಯದಲ್ಲಿ ಜಂಗಮಾರಾಧನೆ ಯನ್ನು ಮಾಡುತ್ತ ಕಾಲಕಳೆಯುತ್ತಿದ್ದನು

ಬಿ. ಗೌರಮ್ಮ.

ಪುರಾಣ ಪ್ರವಚನ ಹರಿಹರ

ಹರಿಹರ ಟೌನ್‌ನ ಹೊಸಪೇಟೆ ಓಣಿಯಲ್ಲಿರುವ ಶ್ರೀ ಸಣ್ಣಪ್ಪನವರ ಶಿವಲಿಂಗಪ್ಪನವರ ಮನೆಯಲ್ಲಿ ಇದೇ ನಂದನನಾಮ ಸಂವತ್ಸರದ ಶ್ರಾವಣ ಶು॥ ೬ ರಿಂದ ಮುಳಗುಂದ ಶ್ರೀ ಬಾಲಲೀಲ ಮಹಂತ ಶಿವಯೋಗಿಗಳ ಪುರಾಣ ಪ್ರವಚನವು ವೇ॥ ಶರೂರು ಮಠದ ಕೊಟ್ರಯ್ಯ ನವರಿಂದ ವ್ಯಾರಂಭವಾಗಿದ್ದು ಭಾದ್ರಪದ ಶು॥ ೬ ಗೆ ಪುರಾಣ ಸಮಾಪ್ತಿ ಕಾರ್ಯ ನೆರವೇರುವದು ಸಕಲಕ್ಕೆ ಸಕಲ ಭಕ್ತರು ಆಗಮಿಸಿ ಮಹಾಮಂಗಳ ಕಾರ್ಯದಲ್ಲಿ ಭಾಗಿಗಳಾಗಬೇಕೆಂದು ಕೋರುವ,

ಸಮಾಜ ಪ್ರಮುಖರು, ಹರಿಹರ ಟೌನ್

ಸ್ವೀಕಾರ

ಹರಿಹರ ಟೌನ್ ವಾಸಿಗಳಾದ ಶ್ರೀ ಮುರಿಗೆಪ್ಪನವರು ಗದ್ಗಿವರ ಇವರ ಧರ್ಮಪತ್ನಿ "ಗಮ್ಮನವರು ಶಿವೈಕ್ಯ ರಾದ ಸ್ಮರಣಾರ್ಥ ವಾಗಿ ಪ್ರಸ್ತಾವಪೂರ್ವಕವೆಂದು ತೆಗೆಯಿ ಸಿದ ೫ ರೂ ಶ್ರೀ ಜ ಗೂಳಪ್ಪನವರ ದ್ವಾರಾ ತಲ್ಲರು ತ್ತಿದ

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯ ರು ನಿತ್ಯಮಂಗಳವನ್ನೀಯಲೆಂದು ಪ್ರಾರ್ಥಿಸುತ್ತೇನೆ

ಕನ್ನಡ ಸಾಹಿತಿಗಳಿಗೆ ಸರ್ಕಾರದ ಬಹುಮಾನ

ಈ ವರ್ಷದಲ್ಲಿ ಅಚ್ಚಾದ ಕನ್ನಡ ಗ್ರಂಥಗಳ ಪೈಕಿ ಅತ್ಯುತ್ತಮವೆಂದೆನಿಸಿಕೊಂಡಿರುವ ಶ್ರೀ ಶಿವರಾಮ ಕಾರಂ ತರ "ಕುಡಿಯರಕೂಸು ಇಂದೂಬಿರಿಗೂ, ಶ್ರೀ ಮೊಳೆಯರ್ ಶಂಕರ ನಾರಾಯಣ ಭಟ್ಟರ "ಕಂಡ ಮಾಲಾ" ಎಂಬ ನಾಟಕಕ್ಕೂ, ಶ್ರೀ ಒಳ್ಳಾರಿ ಬೀಚಿ ಯವರ "ತಿಮ್ಮನತಲೆ' ಎಂಬ ಹರಟೆಗಳನ್ನೊಳ ಗೊಂಡ ಗ್ರಂಥಕ್ಕೂ ಮದರಾಸ್ ಸರ್ಕಾರದವರು ತಲಾ ೫೦೦ ರೂ ಗಳಷ್ಟು ಬೆಲೆಬಾಳುವ ಬಹುಮಾನಗಳನ್ನು ಕೊಡಿದ್ದಾರೆ

'ಜನಾಬ್' ಮತ್ತು 'ಜನಾಬಾ' ಬದಲು 'ಶ್ರೀ' ಮತ್ತು 'ಶ್ರೀಮತಿ'

ಇದುವರೆಗೆ ಸರಕಾರದ ವ್ಯವಹಾರದಲ್ಲಿ ಮುಸ್ಲಿಮರ ಹೆಸರುಗಳ ಹಿಂದೆ ಸಂಡುಸಾರಿಗೆ 'ಜನಾಬ್' ಹೆಂಗಸರಿಗೆ 'ಜನಾಬಾ' ಎಂಬ ಪದಗಳಷ್ಟು ಉಪ ಯೋಗಿಸಲಾಗುತ್ತಿತ್ತು. ಆದರೆ ಬದಲು ಇನ್ನು ಮುಂದೆ 'ಶ್ರೀ' ಮತ್ತು 'ಶ್ರೀಮತಿ' ಎಂಬ ಪದಗಳನ್ನು ಉಪ ಯೋಗಿಸಲಾಗುವುದು, ಎಂದು ಸರಕಾರದ ಒಂದು ಪ್ರಕಟಣೆ ತಿಳಿಸಿದೆ.

ಪಂಚಾಚಾರ್ಯಪ್ರಭಾ

೧೯೩೨ನೆಯ ಆಗಸ್ಟ್ ತಾ|| ೧೮ ನೇ ಸೋಮವಾರ

ಗುರುಸ್ವರೂಪ

(ಕಳೆದ ಸಂಚಿಕೆಯಿಂದ ಮುಂದುವರಿದುದು)

ಗುರುರೇವಪರಂತತ್ವಂ ಪ್ರಕಾಶಯತಿನೇಹಿನಾ ।
ಕೋಟಾಸೂರ್ಯಂ ವಿನಾ ಲೋಕೆ ತಮುಸೇವ ವಿವರ್ತತೆ ॥
ಅಂತರೇಣ ಗುರುಂ ಪಿಶ್ವಂ ಕಲಂ ನ ಸಾಮಾಶ್ನುತೇ ।
ಏವಾಸಚ್ಚಂ ವಿನಾ ವೈದ್ಯಂ ಕಂಪಾ ರೋಗೋದಿವರ್ತತೆ ॥

ಪ್ರಸಂಚವನ್ನು ಆವರಿಸಿದ ಗಾಢಾಂಧಕಾರವನ್ನು ತೊಲಗಿಸುವ ಶಕ್ತಿಯನ್ನು ಸೂರ್ಯನೆಲ್ಲಿದೆ ಇನ್ನಾರೂ ಪಡೆಯದೆ ಇರುವಂತೆ ಮಾನವರಿಗೆ ಸಂಭವಿಸಿದ ಅಜ್ಞಾನಾಂಧಕಾರವನ್ನು ತೊಲಗಿಸಿ ದಿವ್ಯಜ್ಞಾನ ವನ್ನುಂಟುಮಾಡಬೇಕಾದರೆ ಗುರುವಲ್ಲದ ಪ್ರಸಂಚದಲ್ಲಿ ರೋಗನಿದಾನವನ್ನು ತೀಡಿ ವೈದ್ಯನಿಲ್ಲದಿದ್ದಲ್ಲಿ ರೋಗವು ಹೇಗೆ ಹೋಗುವು ದಿಲ್ಲವೋ ಹಾಗೆ ಶ್ರೋತ್ರಿಯನೂ ಬ್ರಹ್ಮನಿಷ್ಠನೂ ಆದ ಗುರುವಿಲ್ಲದ ಈ ಭಯಾನಪಹವಾದ ಜನನಮರಣರೂಪ ವಾದ ಸಂಸಾರವು ತೊಲಗಲಾರದು ಎಂದು ಜಗದ್ಗುರು ರೇಣುಕಭಗವತ್ಪಾದರು ಗುರುಮಹಿಮೆಯ ನ್ನು ಹೇಳಿ ರಿರುತ್ತಾರೆ

ಇಂಥ ಗುರುತ್ವದ ಸಂಪೃಯು ಪೂರ್ವದಲ್ಲಿ ಊರು ಊರುಗಳಲ್ಲಿ ಬಹಳವಾಗಿ ಕಾಣಿಸಿಕೊಳ್ಳುತ್ತಿಲಿದ್ದು ಈ ಕಾಲದಲ್ಲಿ ಕ್ಷೇತ್ರಮಾತ್ರದಲ್ಲಿ ಪರವಸಾನವಾಗಿದೆ ಯಾರು ಹೊಟ್ಟೆಗಿಲ್ಲದ ಅಲೆಯುತ್ತಲಿರುವರೋ ಅಂಥ ವರು ಒಂದು ರುದ್ರಾಕ್ಷಿಯು ಸರವನ್ನು ಒಂದು ತಾಯಿವಸ್ತ್ರವನ್ನು ಮಾತ್ರ ದೊಡ್ಡಕಿಸಿಕೊಂಡರೆ ಸಾಕಾಗಿದೆ ತಾವೇ ಗುರುಗಳೆಂದು ಹೇಳಿಕೊಳ್ಳಲು ಪ್ರಾರಂಭಿಸು ತ್ತಾರೆ ಆದರ ನೋಲೆ ಒಂದೆರಡು ವಚನಗಳನ್ನು ಕಸ್ಸ ಪಟ್ಟು ಕಲಿತುಕೊಂಡರೆಂತೂ ಅವನು ಯಾವ ಜಾತಿ ಯವನಾದರೂ ಗುರುವಾಗಲು ಅವಕಾಶುಂಟಾಗಿದೆ ಇಂಥವ ನಿಗೆ ಯಾವ ವೇದವಾಗಲಿ, ವೇದಾಂಪಾಸಾರವಾಗಲಿ ಸಿದ್ಧಾಂತವಾಗಲಿ ಒಂದೂ ಬೇಕಾಗುವುದಿಲ್ಲ ಇದನ್ನು ತಿಳಿದ ಕ್ರಮವನ್ನೆಗಿತೆ ಸಂಸ್ಪಾರಾಸಿದ್ಧನಾದ ಯಾವ ನಾದರೂ ಒಬ್ಬ ಸದ್ಗುರುವು ಮುಂದ ಬಂದರೆ ಈ ದುರುಳನೇಪಾಂತಿಗಳು ರಾಷ್ಟ್ರಸರಂತೆ ತಿತನ ನೇಲೆ ಬೀಳುತ್ತಾರೆ ಇಂದ ಹಾವಳಗಳು ಈ ಕಲಿಯುಗದಲ್ಲಿ ಅಷ್ಟಿಲ್ಲ ಆನೇಕವಾಗಿ ನಡೆಯುತ್ತಲಿವೆ

ಕಲಿ ಪೆಷಾಚಿಕ ಸರ್ವ ಸಾಮರ್ಥೇ ವಾಲಾಬಾ ಇವ

ಎಂಬಂತೆ ಹೊಳೆಯುತ್ತಿರುವ ಮೈಯಲ್ಲಿ ಬಾಲಕರು ಬಾಯಿ ಬಡಿದುಕೊಂಡು ತಿರುಗುವ ಪಿ ಇಂಥ ದುರುಳ ವೇದಾಂತಿಗಳು ಈ ಕಲಿಯುಗದಲ್ಲಿ ಹಚ್ಚಿದ್ದಿರಿದಲೇ ಧರ್ಮಕರ್ಮಗಳ ಸಿಒಂದನೆಯೂ ಸದಾಚರಣೆಗಳು ಮಾನವಸಾಮಾನ್ಯವಾದಾಸಿರುಳು ಕ್ಲಯೋನ್ಮುಖಿ ಗಳಾಗುತ್ತಿ ಬಂದವು ಈ ಪ ವಲ್ಲ ಆರ್ಚಾರ್ಯಪರಂ ಪರಾಗತರಾದ ಗುರುವರ್ಯರು ತಮ್ಮ ಕರ್ತವ್ಯ ಗಳಿಂದ ಪರಾಙ್ಮುಖರಾಗಿ ಕೇವಲ ಜೋಳಿಗೆ ಚೆತ್ತಗಳನ್ನು ಮಾತ್ರ ಭದ್ರವಾಗಿ ಹಿಡಿದುಕೊಂಡಿದ್ದರಿಂದ ಉಪಾ ಧ್ಯಾಯರುನಿಲ್ಲದ ವಿದ್ಯಾರ್ಥಿಗಳಂತೆ ಇಂಪ ಅನಾಹುತ ಗಳು ನಡೆಯಲು ಶಕ್ತಿವೆವು ಆಚಾರ್ಯಮಂಜಾನುಗತ ವಾದ ಗುರುಗಳು ಇನ್ನಾದರೂ ಇಂಥ ಆಲಸ್ಯದ ನಿದ್ರೆ ಯಿಂದ ಎಚ್ಚತ್ತು ಗುರುಕುಲವಾಸವನ್ನು ಮಾಡಿ ಶಾಸ್ತ್ರಸಿದ್ಧಾಂತಗಳಲ್ಲಿ ಅಸಾಧಾರಣವಾದ ಪಾಂಡಿತ್ಯ ವನ್ನು ಆರ್ಜಿಸಿ ಬ್ರಹ್ಮಚರ್ಯವ್ರತವನ್ನು ಪಾಲಿಸುತ್ತ ಆಧ್ಯಾತ್ಮಸಿದ್ಧನುದಿಂದ ಶಮದಮೋಪರಾಗುಣಯುಕ್ತರಾಗಿ ವೈರಾಗ್ಯದುರಂಧರರಾಗಿ ಶ್ರೀ ರೇಣುಕಭಗವತ್ಪಾದರು ಹೇಳಿದಂತೆ ಪ್ರತಿಯೊಬ್ಬ ಗುರುಮನೆತನದವರು ಜ್ಞಾನ ವೆಂಬ ವಿಭೂತಿಯನ್ನಾರ್ಜಿಸಿ ಪೂರ್ವಕಾಲದಿಂದ ಬಂದ ತಮ್ಮ ತಮ್ಮ ಶಿಷ್ಯವೃಂದವನ್ನು ದೀಕ್ಷಾದಿ ಸಂಸ್ಕಾರ ಗಳಿಂದ ಪರಿಶುದ್ಧಗೊಳಿಸಿ ತಮ್ಮ ಉಪದೇಶವಾಣಿಯಿಂದ ಶಿಷ್ಯರ ಅಜ್ಞಾನವೆಂಬ ಮಾಲಿನ್ಯವನ್ನು ಹೋಗಲಾಡಿಸಿ ಪರಿಶುದ್ಧವಾದ ಹೃದಯ ದರ್ಪಣದಲ್ಲಿ ಲಿಂಗರೂಪ ನಾದ ಪರಮಾತ್ಮನು ಪ್ರತಿಬಿಂಬಿಸುವಂತೆ ಮಾಡಿ ಪರಿಶುದ್ಧವಾದ ವೀರಶೈವಮತಸಂರಕ್ಷಣೆಯಲ್ಲಿ ಮುಗ್ಗಿ ಬ್ಬಿಗ್ಗಡಮಾಡುತ್ತಿರುವ ಜಾತಿಳುಲಗೋತ್ರವಿಹೀನರಾದ ದುರುಳನೇಪಾಂತಿಗಳು ಪುನಃ ತಲೆತಾಕದಂತೆ ಮಾಡಿ ತಮ್ಮ ಗುರುತ್ವವನ್ನು ಶಿಕ್ಷಮಂಡಲಿಯು ಮೇಲೆ ಅವ್ಯಾ ಹತವಾಗಿ ಬೆಳಗುವಂತೆ ಮಹಾಗುರುಗಳಾದ ಶ್ರೀ ರೇಣು ಕಾದಿ ಪಂಚಾಚಾರ್ಯರು ಈ ಗುರುವರ್ಗವನ್ನು ಎಚ್ಚರ ಗೊಳಿಸಲೆಂದು ಪ್ರಾರ್ಥಿಸುವೆವು

ಆಚಾರವೂ ಆರೋಗ್ಯವೂ

ಲೇ — ಚಿಕ್ಕಮಂಗ್ಳೂರ ಬ್ರಹ್ಮಶ್ರೀ ಪಂ|| ಗುರುಸಿದ್ಧಸಿರಾಜಾಚಾರ್ಯರು ಅಯುರ್ವೇದಾಚಾರ್ಯ ಆಯುರ್ವೇದಿಕ್ ಫಾರ್ಮಸಿಸ್ಟ್ ಸಲಹಗಾರ

(ಕಳೆದ ಸಂಚಿಕೆಯಿಂದ ಮುಂದುವರಿದುದು)

ಬ್ರಾಹ್ಮೀ ಮುಹೂರ್ತ ಅಂದರೇನು ?

ಪೂರ್ವಕಾಲದಲ್ಲಿ ದೇವತೆಗಳಿಗೂ ರಾಕ್ಷಸರಿಗೂ ಒಡೆತನದ ಸಲುವಾಗಿ ಬಡಿದಾಟವುಂಟಾಯಿತು ಆಗ ಜಗದೀಶನು ರಾತ್ರಿಯನ್ನು ರಾಕ್ಷಸರಿಗೂ ಹಗಲನ್ನು ದೇವತೆಗಳಿಗೂ ಹಂಚಿಕೊಟ್ಟನು ಹಗಲು ದೇವತೆ ಗಳಾದ ಕಾರಣ ಅದಕ್ಕೆ ದಿವಾ ಎಂದು ಹೆಸರು ಬಂದಿತ್ತು ರಾತ್ರಿಯಲ್ಲಿ ರಾಕ್ಷಸರು ಸಂಚರಿಸುವರು ಆವರ ಕಾಲವು ಮುಗಿದ ನೇಲೆ ದಿವಾ (ಹಗಲು) ಪ್ರಾರಂಭವಾಗುತ್ತದೆ ಆ ಮುಹೂರ್ತಕ್ಕೆ ಬ್ರಹ್ಮನು ಒಡೆಯನಾದುದರಿಂದ ಬ್ರಾಹ್ಮೀ ಮುಹೂರ್ತವೆಂಬ ಹೆಸರು ಬಂದಿದೆ ಆ ಸಮಯದಲ್ಲಿ ನಿದ್ರೆಯ ಕಾರ್ಯವು ಪ್ರಾರಂಭವಾಗು ವುದು ಪದ್ಮಿಯಲ್ಲಿ ನಿಶಿಕ್ಷವಾದ ಹಸಿಯು ಉತ್ಪನ್ನ ವಾಗಿ ವಿಷ್ಣು ಜೀವಿಗಳಿಗೆ ಹೊಸ ಹುರುಪನ್ನು ತುಂಬು ಕೊಡುವುದು ಆಗ ಹಕ್ಕಿಪಕ್ಷಿಗಳು ಜಗದೀಶನ ಉಪ ಕಾರವನ್ನು ಸ್ಮರಿಸುವದಕ್ಕಾಗಿ ಚಿಂವ್ ಚಿಂವ್ ಎಂಬ ರಬ್ದವನ್ನು ಹರುಪದಿಂದ ಹಾಡುವವು ಎಲ್ಲ ಗಿಡ ಬಳ್ಳಿಗಳು ಹೊಸ ದಿನವನು ಒಂಪತೆಂದು ಉಬ್ಬಿ ಉಬ್ಬಿ ನಗುತ್ತಿರುವಂತೆ ಅರಳಿದ ಕುಸುಮಗಳಿಂದ ಪರಿಶೋಭಿಸು ತ್ತಿರುವವು ಈ ಮುಹೂರ್ತಕ್ಕೆ ಜಿಮರಸಿಂಹ ಕವಿಯು 'ಅಹರ್ಮುಖಂ' ಅಂದರೆ ದಿನಸಿನ ಮುಖವೆಂದು ಒಣ್ಣಿಸ್ಸಾನೆ ನಮ್ಮು ದೇಹದಲ್ಲಿ ಕೈ ಕಾಲು ಮೊದ ಲಾದ ಅವಯವಗಳಲ್ಲಿ ತತೆಯು ಪ್ರಧಾನವಾಗಿರುತ್ತದೆ ತಲೆಯಿಲ್ಲದಿದ್ದರೆ ಮನುಷ್ಯನು ಜೀವಿಸುವಂತಿಲ್ಲ ಅದೇ ಪ್ರಕಾರವಾಗಿ ಬ್ರಾಹ್ಮೀ ದಿವಸಕ್ಕೆ ಪ್ರಾತಃಕಾಲ, ಮಧ್ಯಾನ್ನ ಕಾಲ ಸಂಧ್ಯಾಕಾಲ ಮೊದಲಾದವುಗಳು ಬೇರೆ ಬೇರೆ ಅವಯವದಂತಿರುತ್ತವೆ ಈ ಎಲ್ಲ ಕಾಲಗಳಲ್ಲಿ ಬ್ರಾಹ್ಮೀ ಮುಹೂರ್ತವು ದಿವಸಕ್ಕೆ ತಲೆಯಂತಿದೆ ಈ ಮುಹೂರ್ತದಲ್ಲಿ ಮನುಷ್ಯನು ವಿಶಿಷ್ಟ ಮುಂಜಾನೆ ೪ ಗಂಟೆಗೆ ಎದ್ದರೆ ತಲೆಗೆ ಸ್ವಲ್ಪ ಕತ್ತರಿಸಿದ ದೇಹದಂತೆ ಮನುಷ್ಯ ನಿಗೆ ಆ ದಿವಸವೇ ವರ್ಧಮಾನಿ ಪರಿಣಾಮಸುವನು ಎಲ್ಲ ವಸ್ತುಸಿಗಳು ಬ್ರಾಹ್ಮೀ ಮುಹೂರ್ತದಲ್ಲಿ ಶುದ್ಧ ಹವೆಯನ್ನು ಬಿಡುತ್ತವೆ ಆ ಹವೆಯಲ್ಲಿ ಮನುಷ್ಯನು ತಿರುಗುವದರಿಂದ ಶರೀರದಲ್ಲಿದ್ದ ದುಷ್ಟ ಜಂತುಗಳು ನಾಶಸೊಂದಿ ಆರೋಗ್ಯವು ಬೆಳೆಯುತ್ತದೆ ಈ ಮುಹೂ ರ್ತದಲ್ಲಿ ಮನುಷ್ಯನು ವಿಳಿದ ಮುಂಜಾನೆ ೮ ಗಂಟೆಗೆ ಎದ್ದರೆ ತಲೆಗೆ ಸ್ವಲ್ಪ ಕತ್ತರಿಸಿದ ದೇಹದಂತೆ ಮನುಷ್ಯ ನಿಗೆ ಆ ದಿವಸದಲ್ಲಿ ಮಲಮೂತ್ರ ವಿಸರ್ಜನೆಯು ರೂಢಿಯನ್ನು ಡತಕ್ಕದ್ದು ಕೆಲವು ಸೋಮಾರಿಗಳು ಆ ಸಮಯದಲ್ಲಿ ಮಲಮೂತ್ರಗಳು ಬಂದಿದ್ದರೂ ಕೂಡ ಕಂಬಳಿಯು ಮುಸುಕನ್ನು ತೆಗೆಯದೆ ಅಪಾನ ವಾಯುವಿನ ಆಕರ್ಷಣದಲ್ಲಿಯೇ ನಿದ್ರಿಸುವರು. ಪಾಪ! ಇಂಥವರಿಗೆ ಆರೋಗ್ಯ ಶಾಸ್ತ್ರದ ಗಂಧವು ಸರಿಬಂದಿರಲೇ ?

ಮಲಬದ್ಧತೆಯ ರೋಗವಿದ್ದವರು ಬ್ರಾಹ್ಮೀ ಮುಹೂರ್ತದಲ್ಲಿ ಏಳುವ ರೂಢಿಯನ್ನು ಡಬೇಕು ಆಕಸ್ಮಿ ಕವಾದ ಹಾಸಿಗೆಯ ಹೆನೆಯನ್ನು ಬಿಟ್ಟು ಹೊರಗಿನ ಕುದ್ದ ಹವೆಗೆ ತಿರುಗತ್ತಿದರೆ ಮಲಬದ್ಧತೆಯು ರೋಗವು ದೂರಾಗುವದು. ಆ ಸಮಯದಲ್ಲಿ ಮಲಗುವದರಿಂದ ಆರೋಗ್ಯವೆಂಬ ಸಕ್ಕರೆಯಹಕ್ಕಿ ಸಹವಾಸವು ತಪ್ಪಿ ಮಲಬದ್ಧತೆ, ಅಂತ್ರವೃದ್ಧಿ, ಅಜೀರ್ಣ, ಧಾತುಕ್ಷೀಣತೆ ಈ ನೊದಲಾದ ದುಷ್ಟ ರೋಗಗಳಿಗೆ ಗೆಳೆಯರಾಗುವನು. ದುರ್ಜನರ ಸಹವಾಸ ಮಾಡಿದವನಿಗೆ ದುಡ್ಡು ದೊರಾಗು ವಂತೆ ರೋಗವಶನಾದವನಿಗೆ ಆಯುಃಹೃಯ ಕ್ಷೀಣವಾಗು ವದು ಕ್ಷೀಣವಾದ ಆಯುಃಹೃಯುಳ್ಳವನಿಗೆ ಧರ್ಮ ಸಂಗ್ರಹವೆಲ್ಲಿಯದು ? ಯಮಧರ್ಮನ ಶಾಸನ ಸಂಗ್ರ ಹವೇ ಸರಿ ಆದ್ದರಿಂದ ಧರ್ಮವನ್ನು ಗಳಸಬೇಕಾದರೆ ಆರೋಗ್ಯವನ್ನು ಆಶ್ರಯಿಸಿ ಆಯುಃಹೃವನ್ನು ಪಡೆಯು ಬೇಕು ಆರೋಗ್ಯವು ಬೇಕಾದರೆ ಬ್ರಾಹ್ಮೀ ಮುಹೂರ್ತ ದಲ್ಲಿ ಏಳಬೇಕು (ಸಶೇಷ)

ನಾರದ ಹಾಗು ಸುತನ ಸಂವಾದ

ಸಂ — ಶ್ರೀ ಬಾಲಬ್ರಹ್ಮಚಾರಿ 'ಶಿಖಿಶಿರೋಮಣಿ' ಗಂಗಾಧರಶಿವಾಚಾರ್ಯರುಮಹಾಸ್ವಾಮಿಗಳವರು ಮೂಡಬ ಶ್ರೀಜಗದ್ಗುರು ಸಿರಿಬ್ರಹ್ಮೇಶ್ವರ ಸೇವಾಶ್ರಮದ ಅಧ್ಯಕ್ಷರು ಬೈಲದ್ದಿರಿ

ನಾರದ—ಅಕ್ಷರ ಮಾಲೆಯನ್ನು ತಿಳಿದವರಾರು ? ಅಕ್ಷರ ಎಷ್ಟುವಿಧ ? ಎಂತಹ ಅಕ್ಷರಗಳಿಂದ ಆ ಮಾಲೆ ಕೂಡಿದೆ ?

ಸುತ- ಬ್ರಾಹ್ಮಣೋತ್ತಮಾ ! ಲಾಲಿಸು !! ಅಕ್ಷರ ಗಳು ೫೨ ಅವುಗಳಲ್ಲಿ ಓಂಕಾರವು ಮೊದಲನೆಯದು. ಅನಂತರ ೧೪ ಸ್ವರಗಳೂ, ೩೩ ವ್ಯಂಜನಗಳೂ ಅನು ಸ್ವಾರ, ವಿಸರ್ಗ, ಜಿಹ್ವಾಮೂಲೀಯ, ಉಪಧ್ಮಾನೀಯ ಗಳೂ ಉಂಟು ಇನೆ ೫೨ ಅಕ್ಷರ !! ಓಂಕಾರವು ಅಕಾರ ಉಕಾರ ಮ್ಕಾರಗಳಿಂದ ಯುಕ್ತವಾಗಿದೆ ಅಕಾ ರವೆ- ಬ್ರಹ್ಮ, ಉಕಾರವೆ ವಿಷ್ಣು, ಮ್ಕಾರವೆ-ರುದ್ರ. ಈ ಮೂರವೂ ಸತ್ವರಜಸ್ತಮೋಗುಣಗಳಿಗೆ ಒಳಪಟ್ಟಿ ನರು ಮೂರ್ಧಾವರಲ್ಲಿಯು ಅರ್ಧಮಾತ್ರೆಯು ಉತ್ಪ ತ್ತಿಸ್ಥಿತಿಲಯಕಾರಿ ಸದಾಶಿವನು ಪ್ರಣವದ ಮಹಿಮೆ ಅನಂತವಾದುದು ಇನ್ನು ಆಕಾರದಿಂದ ಆ ಕಾರದ ವರೆಗಿನ ೧೪ ಅಕ್ಷರಗಳಿಗೆ ಚತುರ್ದಶ (೧೪) ಮನಗಳು. ಸ್ವಾಯಂಭು, ಸ್ವಾರೋಚಿ, ಔತ್ತಮಿ, ಧೈವತ, ತಾಮಸ, ಚಾಕ್ಷುಸ, ವೈವಸ್ವತ, ಸಾವರ್ಣಿ, ಬ್ರಹ್ಮಸಾವರ್ಣಿ, ರುದ್ರಸಾವರ್ಣಿ, ದಕ್ಷಸಾವರ್ಣಿ, ಧರ್ಮಸಾವರ್ಣಿ, ರೌಚ್ಯ, ಭೌತ್ಯ ಎಂದಿವರು ವಿಖ್ಯಾತರು ಶ್ವೇತ, ಪಾಂಡು, ರಕ್ತ, ತಾಮ್ರ, ಸಿತ, ಕಪಿಲ, ಕೃಷ್ಣ, ಶ್ಯಾಮ, ಧೂಮ್ರ, ಸುವಿಶಂಗ, ಪಿಶಂಗ, ಶ್ರೀವರ್ಣ, ಶಬಲ, ಕರ್ಬುರಂದರ ಎಂಬ ಇವರಿಗೆ ಕ್ರಮವಾಗಿ ವರ್ಣಗಳು ಇರುತ್ತಿನೆ ಕೃಷ್ಣವರ್ಣನಾದ ವೈವಸ್ವತಮನುವು ಕಕಾರನಾಗಿದ್ದಾನೆ ಕಿಂದ ಹೆ ವರೆಗೆ ಇರುವ ೩೩ ಅಕ್ಷರಗಳಿಗೆ ೩೩ ದೇವತೆಗಳು ಇದ್ದಾರೆ ಕಕಾರದಿಂದ ಟಕಾರದ ವರೆಗೆ ಇರತಕ್ಕ ೧೨ ಅಕ್ಷರಗಳಿಗೆ ದ್ವಾದಶರಾದಿ ತ್ಯರು ಧಾತಾ, ಮಿತ್ರ, ಯಮ, ರಕ್ತ, ವರುಣ, ಅಂಶು, ಭಗ, ವಿವಸ್ವಂತ, ಪೂಷಾ, ಸವಿತಾ, ಕ್ಷತ್ರಾ, ವಿಷ್ಣು ಎಂಬ ವವರೇ ಇವರು ವಿಷ್ಣುವು ಈ ದ್ವಾದಶಾದಿತ್ಯರ ನಾಯಕ ಡ ದಿಂದ ಪ ವರೆಗಿನ ಅಕ್ಷರಗಳು ಏಕಾದಶ ರುದ್ರರು ಕಪಾಲೀ, ಪಿಂಗಳ, ಭೀಮ್ಮ, ವಿರೂಪಾಕ್ಷ, ವಿಲೋಹಿತ, ಅಜಕ, ಶಾಸನ, ಶಾಸ್ತ್ರ, ಶಂಭು, ಚಂಡ, ಭವ ಎಂಬುದಾಗಿ ಸ್ಪಷ್ಟಿಸಿಗೊಂಡಿರುವರು ಇನ್ನು ಭ ದಿಂದ ಹ ವರೆಗಿನ ಅಕ್ಷರಗಳು ಅಷ್ಟವಸುಗಳು. ಧ್ರುವ, ಧೋಲ, ಸೋಮ, ಅಪಸ್, ನಲ, ಪ್ರತ್ಯೂಹ, ಪ್ರಭಾಸ ನಾಮಾಂಕಿತರಿವರು ಸಹ ಅಕ್ಷರಗಳಿಗೆ ಅಕ್ಷಿಸಿದೇವತೆ ಗಳು ಇಲ್ಲಿಗೆ ೩೩ ದೇವತೆಗಳ ಅಂಕೆ ಮುಗಿದುದು. ಅನೆಲೇ ಉಳಿದ ಅನುಸ್ವಾರ, ವಿಸರ್ಗ, ಜಿಹ್ವಾ ಮೂಲೀಯ, ಉಪಧ್ಮಾನೀಯಗಳು ಅಂಡಜ, ಸ್ವೇದಜ, ಜರಾಯುಜ, ಉದ್ಭಿಜ ಎಂಬ ಚತುರ್ಭೂತಗಳು. ಇದು ಕೇವಲ ಭಾವಾರ್ಥ. ಯಾವ ಮನುಷ್ಯರು ಈ ೩೩ ದೇವತೆಗಳನ್ನು ಆಶ್ರಯಿಸುವೋ ಅವರು ಆರ್ಥ ಮಾತ್ರಾ ಸ್ವರೂಪನಾದ ಸದಾಶಿವಮೂರ್ತಿಯಲ್ಲಿ ವಿಲೀನ ವಾಗುವರು. ಚತುರ್ವಿಧ ಭೂತಯೋನಿಗಳಿಂದ ಅಂ ತರು ಬಿಡಲ್ಪಡುವರು. ಇದುವೆ ತತ್ವಾರ್ಥ !!

ನಾರದ—೩೩ ತತ್ವಗಳಿಂದ ಕೂಡಿದ ಗೃಹವನ್ನು ಬಲ್ಲ ಬ್ರಾಹ್ಮಣನಾರು ?

ಸುತ—ಪಂಚಭೂತಗಳು, ಪಂಚಕರ್ಮೇಂದ್ರಿಯ ಗಳು, ಪಂಚಜ್ಞಾನೇಂದ್ರಿಯಗಳು, ಪಂಚ ವಿಷಯಗಳು

ಮನಸ್ಸು, ಬುದ್ಧಿ, ಅಹಂಕಾರ, ಪ್ರಕೃತಿ, ಪುರುಷ ಎಂಬವೇ ೨೫ ತತ್ವಗಳು ಪಂಚವಿಂಶತಿ, ತತ್ವಸಮನ್ವಿತ, ನಾದ ವನೇ ಸದಾಶಿವನು ಈ ೨೫ ರಿಂದ ಹೊರತೊರತಿುದೆ ಗೃಹವೆನ್ನಿಸುವದು ಇದುವೆ ದೇಹವು ತತ್ವತಃ ದೇಹವೆ ಸದಾಶಿವನನ್ನು ಸೇರುತ್ತಿದೆ

ನಾರದ—ಅನೇಕ ರೂಪವಾಗಿರುವ ಸ್ತ್ರೀಯನ್ನು ಒಂದೆ ರೂಪವಾಗಿ ಮಾಡಬ್ಬುವನೇನು ?

ಸೂತ—ಬುದ್ಧಿಯನ್ನೆ ಬಹುರೂಪಳಾದ ಸ್ತ್ರೀ ಎಂದು ವೇದಾಂತವಾದಿಗಳು ಹೇಳುತ್ತಾರೆ. ಅನೇಕಾರ್ಥಗಳ ಮನಸದಿಂದ ಬುದ್ಧಿಯು ನಾನಾರೂಪವನ್ನು ಹೊಂದುವದು ಇದನ್ನು ಧರ್ಮದೊಡನೆ ಸೇರಿಸಿದರೆ ಬಹು ರೂಪಿಯಾಗಿದ್ದರು ಏಕರೂಪವನ್ನೆ ತಾಳುವದು. ಈ ರಹಸ್ಯವೇದಿಯು ನರಕಕ್ಕೆ ಭಾಜನನಾಗುವದಿಲ್ಲ !!

ನಾರದ—ವಿಚಿತ್ರವಾದ ಕಥೆಗಳಿಂದ ಕೂಡಿರುವ ಕಣ್ಣಿಗೆ ಕಾಣುವ ಸಂಸಾರವನ್ನು ತಿಳಿದನಾವನು ?

ಸೂತ—ಯಾವುದು ಮುನ್ಸಿಗಳಿಂದ ಹೇಳಲ್ಪಡದಿಲ್ಲವೊ ಯಾವುದನ್ನು ದೇವತೆಗಳು ಭಾವಿಸುವದಿಲ್ಲವೊ ಅದೆ ವಿಚಿತ್ರವಾದ ಕಥಾಕೀರ್ಣಭವಾರ್ಣವವು !!

ನಾರದ—ಕಡೆಯಿಲ್ಲದ ಕಡಲಿನ ದೊಡ್ಡತ್ತಾದ ಮೊಸಳೆಯನ್ನು ತಿಳಿದ ಪಂಡಿತನು ಯಾವನಿದ್ದಾನೆ ?

ಸೂತ—ಕಡೆಯಿಲ್ಲದ ಕಡಲು ಎಂದರೆ ಭವಸಾಗರ ಭವಸಾಗರದ ದೊಡ್ಡ ಮೊಸಳೆ ಎಂದರೆ ಲೋಭವು! ಇದೆ ಪಾಪಕ್ಕೆ ಮೂಲ! ಅಜ್ಞಾನವೂ ಪ್ರಜ್ಞೆಇಲ್ಲದಿರುವಿಕೆಯೂ ಲೋಭದ ಫಲಗಳಾಗಿವೆ ಪರವಿತ್ತಾಪಹರಣ, ಪರದಾರಾಭಿಗಮನ, ದುರಿತಕಾರ್ಯಗಳಿಗೆ ಕೈಹಾಕುವ ಸಾಹಸ, ಲೋಭಜನ್ಯವಾಗಿವೆ ನೀಚಲೋಭಿಗಳಿಗೆ ದಂಭ, ಪೈಶುನ್ಯ, ದ್ರೋಹ, ನಿಂದೆ, ಮತ್ಸರ ಹುಟ್ಟು ಗುಣವಾಗಿವೆ. ಅದ್ದರಿಂದ ಜ್ಞಾನಿಗಳು ಲೋಭವನ್ನು ಗೆಲ್ಲುವೀಕು ಜನಕ, ಯುವನಾಶ್ವ, ವೈಷಾದಿಕರ, ಪ್ರಸೇನಜಿತು ಮುಂತಾದವರು ಲೋಭಜೆತ್ಯಗಳಾಗಿ ಉನ್ನತಿ ಪಡೆದರು ಲೋಭದೂರಿರೆ ಸಂಸಾರ ಸಾಗರವನ್ನು ದಾಟುವದು ಸತ್ಯ !! (ಶತೇಷ)

ವರ್ತಮಾನ ಸಂಗ್ರಹ

ಲೈಸನ್ಸ್ ಪಡೆದ ವ್ಯಾಪಾರಿಗಳ ಮೂಲಕ ಧಾನ್ಯದ ಸಗಾಟು

ಮೈಸೂರು ಸಂಸ್ಥಾನದ ಪಡಿತರದ ಹೊಸನೀತಿಯ ಪ್ರಕಾರ ಲೈಸೆನ್ಸ್ ಪಡೆದ ವ್ಯಾಪಾರಿಗಳು ಮಾತ್ರ ಆಹಾರ ಧಾನ್ಯಗಳನ್ನು ಕಂಟ್ರೋಲ್ ಬೆಲೆಗಳಿಗೆ ಕೊಂಡುಕೊಂಡು, ಸರ್ಕಾರಿ ಅಂಗಡಿಗೆ ಸರಬರಾಯಿಸುವ ಬೆಲೆಗಳಿಗೆ ಸಾರ್ವಜನಿಕರಿಗೆ ಮಾರಲು ಅನುಮತಿ ಕೊಡಲಾಗುವುದು

ಧಾನ್ಯಸಗಟುವ್ಯಾಪಾರಿಕೆಯ ವಿಧಾನದಲ್ಲಿ ಈಗ ಅನುಸರಿಸಲಾಗುತ್ತಿರುವ ಲೇವಿಸಪ್ಪತಿಯನ್ನು ಸ್ವಲ್ಪ ಬದಲಾಯಿಸಿ ಮುಂದಿನ ಸುಗ್ಗಿಕಾಲದ ಹೊತ್ತಿಗೆ ಈ ಆಜ್ಞೆಯನ್ನು ಹೊರಡಿಸಲಾಗುವುದು

ಧಾನ್ಯ ರೂಪದಲ್ಲಿ ಭೂಕಂದಾಯ ಪಡೆಯುವ ಪ್ರಶ್ನೆಯನ್ನು ಕೈಬಿಡಲಾಗಿದೆ

ಮೈಸೂರು ಸಂಸ್ಥಾನದಲ್ಲಿ ಭೂಕಂದಾಯವನ್ನು ಧಾನ್ಯ ರೂಪದಲ್ಲಿ ವಸೂಲುಮಾಡಬೇಕೆಂಬ ಪಕ್ಷಿ ಸರ್ಕಾರದ ಪರ್ಯಾಲೋಚನೆಯಲ್ಲಿತ್ತು. ಈ ಬಗ್ಗೆ ತಲೆದೋರಬಹುದಾದ ಕೆಲವು ಎಡರುತೊಡರುಗಳ ದೃಷ್ಟಿಯಿಂದ ಈ ಸಮಸ್ಯೆಯನ್ನು ಕೈಬಿಡಲಾಗಿದೆ. ಎಂದು ಈಗ ಹೊರಬಿದ್ದಿರುವ ಸರ್ಕಾರೀ ಪ್ರಕಟಣೆಯಲ್ಲಿ ವಿವರಿಸಲಾಗಿದೆ.

ಶ್ರೀ ಗೋಮಟೇಶ್ವರಸ್ವಾಮಿಯ ಮಹಾಮಸ್ತಕಾಭಿಷೇಕ

೧೨ ವರ್ಷಕ್ಕೊಮ್ಮೆ ನಡೆಯುವ ಶ್ರವಣಬೆಳಗೊಳದ ಶ್ರೀ ಗೋಮಟೇಶ್ವರಸ್ವಾಮಿಯ ಮಹಾಮಸ್ತಕಾಭಿಷೇಕವು ಮುಂದಿನ ವರ್ಷ ಫೆಬ್ರವರಿ ಮಾಸದಲ್ಲಿ ನಡೆಯುವಂತೆ ವಿಜಾಪುರಗಳು ನಡೆಯುತ್ತಿವೆಯೆಂದು ಗೊತ್ತಾಗಿದೆ ಶ್ರವಣಬೆಳಗೊಳದ ಚಂದ್ರಗಿರಿ ಬೆಟ್ಟದ ಮೇಲಿರುವ ೬೦ ಅಡಿ ಎತ್ತರದ ಶ್ರೀ ಗೋಮಟೇಶ್ವರ ಸ್ವಾಮಿಗೆ ಮಹಾಮಸ್ತಕಾಭಿಷೇಕದ ದಿನದಂದು ೧೦೦೧ ಮಡಿಕೆಗಳ ತುಂಬ ತುಪ್ಪ, ೧೦೦೧ ಮಡಿಕೆಗಳ ತುಂಬ ಜೇನುತುಪ್ಪ, ಹಾಲು, ಹಣ್ಣು ಮೊದಲಾದುವುಗಳಿಂದ ಅಭಿಷೇಕ ಮಾಡಲಾಗುವುದು ಈ ಅಭಿಷೇಕ ನೋಡಲು ಲಕ್ಷಾಂತರ ಮಂದಿ ಯಾತ್ರಾರ್ಥಿಗಳು ಅಲ್ಲಿಗೆ ಬರುವರು

ಮೈಸೂರಿಗೆ ಜರ್ಮನಿಯ ಔಷಧಿ ಸಹಾಯ

ಜರ್ಮನಿಯಿಂದ ಭಾರತಕ್ಕೆ ಬಂದಿರುವ ಔಷಧಿ, ವೈದ್ಯಕೀಯ ಉಪಕರಣಗಳಲ್ಲಿ ಸಾಗರ್‌ನಲ್ ಟ್ಯಾಬ್ಲೆಟ್ಸ್ ಎಂಬ ಮಾತ್ರೆಗಳನ್ನು ದೆಹಲಿಯಿಂದ ಮೈಸೂರಿಗೆ ಕಳುಹಿಸಲಾಗುವುದು

ನೂತನ ಟೆಲಿಫೋನ್ ಎಕ್ಸ್‌ಚೇಂಜಿನ ಆರಂಭ

ಮೈಸೂರು ರಾಜಧಾನಿಯ ನೂತನ ಟೆಲಿಫೋನ್ ಎಕ್ಸ್‌ಚೇಂಜಿನ ಪ್ರಾರಂಭೋತ್ಸವವನ್ನು ಈ ತಿಂಗಳು ೨೧ ನೆಯ ಶಾರೀಕು ಕೇಂದ್ರದ ಸಚಿವರಾದ ಶ್ರೀ ಜಗಜೀವನರಾಂ ಅವರು ನೆರವೇರಿಸುವರು, ಎಂದು ಗೊತ್ತಾಗಿದೆ

'ಜನಗಣಮನ' ಹಾಡೇ ಮೈಸೂರಿನ ರಾಷ್ಟ್ರಗೀತೆ

'ಜನಗಣಮನ' ಎಂಬ ಭಾರತದ ರಾಷ್ಟ್ರಗೀತೆಯೇ ಮೈಸೂರಿನ ರಾಷ್ಟ್ರಗೀತೆಯಾಗಿರಬೇಕೆಂದು ಶ್ರೀಮನ್ಮಹಾರಾಜರವರು ಅಪ್ಪಣೆ ಕೊಡಿಸಿದ್ದಾರೆ, ಎಂಬ ವಿಷಯವನ್ನು ಸರಕಾರದ ಒಂದು ಪ್ರಕಟಣೆ ತಿಳಿಸಿದೆ ಇನ್ನು ಮುಂದೆ 'ಕಾಯೆ ಶ್ರೀಗೌರಿ' ಹಾಡನ್ನು ಮೈಸೂರಿನ ರಾಷ್ಟ್ರಗೀತೆಯಾಗಿ ಹಾಡಬೇಕಾಗಿಲ್ಲ

ಕಾಶ್ಮೀರದ ಅಧ್ಯಕ್ಷರು

ಕಾಶ್ಮೀರ ಸಂಸ್ಥಾನದ ಮುಖ್ಯಸ್ಥರಾಗಿರಲು ಯುವ ರಾಜ ಕರಣ್‌ಸಿಂಗ್‌ರವರು ತನ್ನು ಒಪ್ಪಿಗೆಯನ್ನಿತ್ತು ಭಾರತ ಸರ್ಕಾರಕ್ಕೆ ಪತ್ರ ಬರೆದಿರುವೆಂದು ಗೊತ್ತಾಗಿದೆ ಯುವರಾಜ ಕರಣಸಿಂಗ್‌ರವರಿಗೆನ್ನೂ ೨೨ ವರ್ಷ ವಯಸ್ಸು ತವರು ಕಾಶ್ಮೀರ ವಿಶ್ವವಿದ್ಯಾಲಯದ ಬಿ ಎ, ಪದವೀಧರರು ಇವರಿಗೆ ಏನೆಂದು ಕರೆಯಬೇಕೆಂಬ ಬಗ್ಗೆ ಜಿಜ್ಞಾಸೆಯುಂಟಾಗಿದೆ 'ರಾಜ್ಯಾಧ್ಯಕ್ಷ' ಎಂದು ಕರೆಯುವುದರಿಂದ ಭಾರತದ ರಾಷ್ಟ್ರಾಧ್ಯಕ್ಷರಿಗೂ, ಇದಕ್ಕೂ ತೊಡಕು ಉಂಟಾಗಬಹುದೆಂದೂ "ಸದರ್ ಇ ಅಲಿ" ಎಂದು ಕರೆಯಬೇಕೆಂದೂ ಹಲವು ಪ್ರಮುಖರು ಸೂಚಿಸಿದ್ದಾರೆ ಯುವರಾಜ ಕರಣಸಿಂಗ್‌ರವರಿಗೆ ಗೌರವರುಗಳಿಗೆ ದೊರೆಯುವಷ್ಟು ಸಂಖ್ಯ ಮಾತ್ರ ದೊರೆಯುವುದು

ಜೋರ್ಡಾನ್ ದೊರೆ ತಲಾಲ್‌ರವರಿಗೆ ರಾಜತ್ವ ರದ್ದು

ಜೋರ್ಡಾನಿನ ದೊರೆ ತಲಾಲ್‌ರವರಿಗೆ ಬುದ್ಧಿ ಭ್ರಮಣೆಯುಂಟಾಗಿ ರಾಜ್ಯಾಡಳಿತ ಅಸಮರ್ಥರಾಗಿ ದ್ದಾರೆಂದು ಅವರನ್ನು ರಾಜತ್ವದಿಂದ ಉಚ್ಚಾಟಿಸಿ ಅವರ ಸ್ಥಾನದಲ್ಲಿ ಈಗ ಸ್ವಿಟ್ಸರ್‌ಲೆಂಡ್‌ನಲ್ಲಿ ತನ್ನ ತಾಯಿಯ ಬಳಿ ಇರುವ ೧೭ ವರ್ಷ ವಯಸ್ಸಿನ ರಾಜಕುಮಾರ ಹುಸೇನ್‌ರವರನ್ನು ಜೋರ್ಡಾನ ದೊರೆಗಳಾಗಿ ಘೋಷಿಸಲಾಗಿದೆ

ರಾಜಕುಮಾರ ಹುಸೇನ್‌ರವರಿಗೆ ಇಷ್ಟು ೧೭ ವರ್ಷ ವಯಸ್ಸಾಗಿರುವುದರಿಂದ ಅವರು ಗದ್ದುಗೆ ಏರುವವರೆಗೆ ವಿಗೂ ಆಡಳಿತವನ್ನು ನಡೆಸಲು ಸಯದ್ ಇಬ್ರಾಹಿಂ ರವರ ಸಾಯಕತ್ವದಲ್ಲಿ ಮೂರುಮಂದಿಯನ್ನೊಳಗೊಂಡ ರೀಜೆನ್ಸಿ ಕೌನ್ಸಿಲ್‌ವೊಂದನ್ನು ನೇಮಿಸಲಾಗಿದೆ.

ನ್ಯಾಸಾರತೆರಿಗೆಯಿಂದ ಆದಾಯ

ಈ ಸಾಲಿನಲ್ಲಿ ಭಾರತಾದ್ಯಂತ ತೆರಿಗೆಯಲ್ಲಿ ೮೫ ಕೋಟಿ ರೂಪಾಯಿ ಆದಾಯ ಬಂದಿದೆ, ಎಂದು ಗೊತ್ತಾಗಿದೆ.

ವಿಚಿತ್ರ ಹಕ್ಕಿಗಳು

ನಾಗಪುರಕ್ಕೆ ಇತ್ತೀಚೆಗೆ ಒಂದು ಹೊಸರೀತಿಯ ಹಕ್ಕಿಗಳು ಬಂದಿವೆ. ಅವು ಪ್ರಾಣಿಗಳ ಮೇಲೆ ಕೂತರೆ ಆ ಭಾಗ ವಾಯು ಹಿಡಿದಂತಾಗಿ ಕೆಡುವುದು ದನಕರುಗಳಿಗೆ ಇವುಗಳಿಂದ ತುಂಬಾ ಸಮಸ್ಯವಾಗುತ್ತಿವೆ

ವಾರ ಭವಿಷ್ಯ

ಲೇ ಯಡಗೋಡೆ ಸಾರಕಾಪ್ಯಾಧ್ಯಾಕ ಜ್ಯೋತಿರ್ವಾರ್ತಾಂಡ ವೇ॥ ರುದ್ರಾಕ್ಷಪ್ಪಶಾಸ್ತ್ರಿಗಳು

(ತಾ॥ ೨೨-೮-೫೨ ರಿಂದ ತಾ॥ ೩೦-೮-೫೨ ರವರೆಗೆ)

ಮೇಷರಾಶಿಯವರಿಗೆ

ಈ ವಾರದಲ್ಲಿ ಸುಖದುಃಖಗಳು ಸಮನಾಗಿ ಜರುಗುವವು

ವೃಷಭರಾಶಿಯವರಿಗೆ

ಸುಖ ಅಧಿಕ, ಕಷ್ಟ ಅಲ್ಪವಾಗಿದ್ದರೂ, ಬುದ್ಧಿವಂತಿಕೆ ರನ್ನಾಶ್ರಯಿಸಬೇಕು.

ಮಿಥುನರಾಶಿಯವರಿಗೆ

ನಿತ್ಯದ ಆಚರಣೆಯಂ ಸತ್ಯದಿಂದ ಆಚರಿಸಿದರೆ ಪಥ್ಯವಿಲ್ಲದ ಔಷಧ ಸೇವಿಸಿ ರೋಗ ಗುಣಹೊಂದಿದಂತೆ ಸುಖಿಗಳಾಗುವಿರಿ

ಕರ್ಕರಾಶಿಯವರಿಗೆ

ಪರರ ತೊಂದರೆ ಅಧಿಕವಾಗಿ ದೊರದ ಯೋಜನೆ ಮಾಡಿದರಲ್ಲಿ ಪ್ರಯೋಜನಕ್ಕೆ ಕಾರಣೀಭೂತರಾಗಿ ವಾರಾಂತ್ಯಕ್ಕೆ ಸುಖವಂತರಾದೀರಿ.

ಸಿಂಹರಾಶಿಯವರಿಗೆ

ಸರಕಾರಗಳಲ್ಲಿ ಸರಕುಗಳಲ್ಲಿ ಮುರುಕತನದಿಂದ ನಡೆದರೆ ಹರಕಲಾಗುವಿರಿ ಎಚ್ಚರಿಕೆ

ಕನ್ಯಾರಾಶಿಯವರಿಗೆ

ಬುದ್ಧಿವಂತರಿರುವುದರಿಂದ, ಬುದ್ಧಿಗೆಡದೆ, ಬಂಧುಗಳಿಂದಲೂ ಸರ್ವವಿಷಯದಿಂದಲೂ ಉತ್ತಮಸುಖ ಹೊಂದುವಿರಿ

ತುಲಾರಾಶಿಯವರಿಗೆ

"ಧೈರ್ಯಂ ಸರ್ವತ್ರಸಾಧನಂ" ಎಂಬಂತೆ ಧೈರ್ಯವೆಂ ಮರಿಯದೆ ವರ್ತಿಸಿದರೆ, ಸರ್ವವೂ ಸಾವಧಾನದಿಂದ ಜಯಿಸುವುದು

ವೃಶ್ಚಿಕರಾಶಿಯವರಿಗೆ

ತೇರ್ತೀರಿಗೆ ಮೂರ್ತಿಯೇ ಮೂಲ" ಎಂಬುದನ್ನು ನೆನೆದು ಕೆಂಪು, ನೀಲಿ, ಬಿಳುಪು ವಸ್ತುಗಳಿಂದ ಸುಖ ಹೊಂದಿರಿ

ಧನುರಾಶಿಯವರಿಗೆ

"ಗುರುವೇ ಆರುವಿಗೆ ಮೂಲ" ಎಂಬುದನ್ನು ನೆನೆದು ಅರುವಿನಿಂದ ಕಾರ್ಯ ಸಾಧಿಸಿರಿ, ಸ್ವಯತ್ನಿಸಿರಿ, ಸಿದ್ಧಿ ಹೊಂದಿರಿ, ಬದ್ಧರಾಗುವಿರಿ

ಮಕರರಾಶಿಯವರಿಗೆ

"ಮಾನವೇ ಧನವು" ಎಂಬುದನ್ನು ಹೃದಯದಲ್ಲಿ ನೆನೆದು ಮರ್ಯಾದೆಗೆ ಬುದ್ಧಿ ಉಪಯೋಗಿಸಿ ಹೊರಗಣ ವ್ಯವಹಾರ ಸಾಗಿಸಿರಿ

ಕುಂಭರಾಶಿಯವರಿಗೆ

"ಶಕ್ತಿಗಿಂತ ಯುಕ್ತಿಮೇಲು" ಎಂಬ ನಾಣ್ನುಡಿಯನ್ನು ಪಾಲಿಸಿ ಈ ವಾರದಲ್ಲಿ ಪರಸ್ಥಳದ ಕಾರ್ಯವನ್ನು ಯತ್ನಿಸಿದಲ್ಲಿ ಸುಖವುಂಟು.

ಮೀನರಾಶಿಯವರಿಗೆ

"ಪರೋಪಕಾರಿಯೇ ಸಾಧು" ಸುಖವುಂಟೆಂದು ಅಹಂಕಾರ ಮಾಡಿ, ಪಾಪಗಳಿಸದೆ ಸರ್ವರನ್ನು ಸಮತ್ವದಲ್ಲಿ ಕಂಡಲ್ಲಿ ಪುಣ್ಯಪುರುಷರಿಗಳಿಗೆ ಪಾತ್ರರಾಗುವಿರಿಲ್ಲಾ.

ಸಿದ್ಧಾಂತಶಿಖಾಮಣಿ

ವೀರಶೈವಸಮಾಜದಲ್ಲಿ ಜನ್ಮಧಾರಣಮಾಡಿದ ಪ್ರತಿಯೊಬ್ಬ ನಿಗೂ ಸಿದ್ಧಾಂತಶಿಖಾಮಣಿಸ್ತೋತ್ರವು ಸ್ನಾನದಂತರಿಯವುದು ಈ ಮಹಾಗ್ರಂಥವಿದ್ದಲ್ಲಿ ಶ್ರೀಜಗದ್ಗುರುರೇಣುಕಾಚಾರ್ಯರು ಜಗ ದ್ಧಿತ್ಯಾರ್ಥವಾದ ಆಗಸ್ಟ್ಯಮಹರ್ಷಿಗಳಿಗೆ ವೀರಶೈವಸಿದ್ಧಾಂತವನ್ನು ಉಪದೇಶಮಾಡಿ ನಿಸ್ಸಂಶಯವು ಪ್ರಕಾಶಿಸಲ್ಪಟ್ಟಿರುವುದು ವೀರ ಶೈವಮತದಲ್ಲಿ ಸದೃಶ ದೊಡಿಯತಕ್ಕ ಗ್ರಂಥಗಳಲ್ಲಿಲ್ಲ ಇದೇ ಅದು ಪುರಾತನಗ್ರಂಥಪೆನಿಸಿಕೊಂಡು ಮೆರೆಯುತ್ತಿರುವುದು ಈ ಗ್ರಂಥವು ಈಗ್ಗೆ ಸುಮಾರು ೩೫೧೦ವಿ ವರ್ಷಗಳ ಪೂರ್ವದಲ್ಲಿದ್ದ **ಶ್ರೀಕವಿಯೋಗಿಶಿವಾಚಾರ್ಯ**ರಿಂದ ಆಚಾರ್ಯರಿಂದ ರಚಿಸಲ್ಪಟ್ಟಿರುವದು ಈ ಮಹಾಗ್ರಂಥವು ವೀರಶೈವಮತಕ್ಕೆ ಮೂಲಸ್ತಂಭವೆನಿಸಿರುವುದರಿಂದ, ಇದಕ್ಕೆ ಇಂದಿನವರೆಗೆ ಅನೇಕರು ಅನೇಕ ವಿಧವಾದ ವ್ಯಾಖ್ಯಾನಗಳನ್ನು ಬರೆದಿರುತ್ತಾರೆ ಆದರೆ ಒಂದು ವ್ಯಾಖ್ಯಾನವೆದ್ದಿಯಾದರೂ ಗೂಢಾರ್ಥಗರ್ಭಿತವಾದ ಹೊಲಗಳಿಗೆ ಸರಿಯಾದ ಅರ್ಥವು ಬರೆಯಲ್ಪಟ್ಟಿಲ್ಲ ಈ ಕೊರತೆ ಯನ್ನು ದೂರನಡಾಯುವುದಕ್ಕಾಗಿ **ಪಂಡಿತ ಶ್ರೀಕಾಶೀನಾಥ ಶಾಸ್ತ್ರಿಗಳವರು** ಖಾಯಪ್ರಮಿಸಿದ್ದಾರೆ ಈ ಗ್ರಂಥಕ್ಕೆ ಕನ್ನಡ ಭಾಷೆಯಲ್ಲಿ ಬಹು ಸರಳವಾದ ವ್ಯಾಖ್ಯಾನವನ್ನು ರಚಿಸಿ ಸಮಸ್ತ ವೀರಶೈವರ ಕೃತಜ್ಞತೆಗೆ ಪಾತ್ರರಾಗಿರುತ್ತಾರೆ ಈ ಗ್ರಂಥವನ್ನು ಓದಿದೋದಿದಮೇಲೆ ಪಂಡಿತರ ವ್ಯಾಖ್ಯಾನದ ಮಹತ್ತ್ವವು ಸಾಕ ಳಿಗೆ ವೇದ್ಯವಾಗುವುದು. ಪಾಠಕರ ಅನುಕೂಲ್ಯಾರ್ಥಿ ಬಹು ಶ್ರಮವಹಿಸಿ ನಿಷ್ಪಹಿಸಿದ ವಿಷಯಾನುಕ್ರಮಣಿಕೆಯೂ, ಪ್ರೂಫ್-ಸುತ್ತುಮಣಿಕೆಯೂ ಈ ಗ್ರಂಥದಲ್ಲಿ ಮುದ್ರಿಸಲ್ಪಟ್ಟಿವೆ ಈ ಗ್ರಂಥವು ಒಟ್ಟು ೪೩೨ ಪುಟಗಳಿಂದ ಕೂಡಿದ್ದು, ಸರ್ಕಾರಿ ಮುದ್ರಣವನಾಗಿ ಮುದ್ರಿಸಲ್ಪಟ್ಟಿದೆ ಈ ಗ್ರಂಥದಲ್ಲಿ ಸಂದರ್ಭಾನು ಸಾರವಾಗಿ ಶ್ರೀಕಾಗಮ ಜಗದ್ಗುರುರೇಣುಕಾಚಾರ್ಯರಿ ಲೀಲಾತ್ಮಕವಾದ ಹಲವಾರು ಚಿತ್ರಾಚಾರಗಳು ಚಿತ್ರಿಸಲ್ಪಟ್ಟಿರುವುದರಿಂದ ಗ್ರಂಥದ ಶೋಭೆಯೂ ವರ್ಣನಾತೀತವಾಗಿದೆ ಕೈಯಲ್ಲಿ ಕಲ್ಪಸಿರುವಿದಂತಿ ರುವ ಈ ಅಮೂಲ್ಯಗ್ರಂಥವನ್ನು ವೀರಶೈವರಲ್ಲರೂ ಅವಶ್ಯವಾಗಿ ಓದಬೇಕು

ಬೆಲೆ ೩ ರೂಪಾಯಿ

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಲಿಂಗಿಸಹ ರದ ಫೋಟೋ (೩ ನಾಗಲಿಂಗಗಳಿಗೆ ಮುದ್ರಿತವು.ದ) ಸೈಜು ೧೪ × ೧೦ ಬೆಲೆ ೦—೬—೦

ಶ್ರೀಜಗದ್ಗುರು ಪಂಚ ಪಿ ರ್ಯ ಸಂಚಿತಾಗಸಿಂಗಳಿಗೆ ಶಿಷಿದ್ಯಿಸಿಸಿಸ

REGISTERED No M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಗ್ರಣಿಭ್ಯಃ ॥ REGISTERED No M 2266

ಪಂಚಾಚಾರ್ಯ ಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಶೀಕ್ಷಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೇಶ್ವರರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಮೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್‌ಪಾಲಿಪ್ಪದೀಲೋಕಮಂ ॥

ಸಂಸ್ಥಾಪಕರು—ನಾಗನೂರು ಬೃಹನ್ಮಹಾಧ್ಯಕ್ಷರಾದ ವೇದ ಪಂ॥ ಶ್ರೀ ಶಾಸ್ತ್ರೀಸಾಹಿತ್ಯಶಾಸ್ತ್ರಿಗಳವರು.

ಚಂದಾ ಹಣ ಪರಸ್ಥಳದವರಿಗೆ ೩ ರೂ ಸಂಪಾದಕರು— ನಾಗನೂರು ಬೃ॥ ಮಹಾದೇವಯ್ಯನವರು ವಿ ಪಿ ಖರ್ಚು ಸೇರಿ ೩ ರೂ ೬ ಆಣೆ

ಸಂಪುಟ ೩೬] ಸೋಮವಾರ ತಾ॥ ೨೫ ನೇ ಆಗಸ್ಟ್ ೧೯೫೨ [ಸಂಚಿಕೆ ೧೬

ಪತ್ರವ್ಯವಹಾರ

[ಚಾತ್ಮೀದಾರರು ಆಫೀಸ್ಯಾಯ ಪಡುವ ಲೇಖನಗಳಿಗೆ ಸಂಪಾದಕರು ಜವಾಬ್ದಾರರಲ್ಲ ಎಂಬ ವಿಷಯವನ್ನು ಎಲ್ಲರೂ ಲಕ್ಷ್ಯದಲ್ಲಿಡತಕ್ಕದ್ದು —ಸಂ]

ವನಮಹೋತ್ಸವ, ಖಾಸಬಾಗ

ಖಾಸಬಾಗ (ಬೆಳಗಾಂವ) ದಲ್ಲಿ ವನಸಂರಕ್ಷಾಹವನ್ನು ತಾ॥ ೬ ರಿಂದ ೧೦ ರ ವರೆಗೆ ಆಚರಿಸಬೇಕೆಂದು ಸರ್ವಾನುಮತದಿಂದ ನಿರ್ಧರಿಸಲಾಗಿತ್ತು. ಆದರೆ ಅದರಂತೆ ನಡೆದುಬರದೆ ಇದ್ದುದಕ್ಕೆ ಕಾರಣವನ್ನು ಕೇಳಿದಾಗ ಅದರ ಸಂಚಾಲಕರು ಕೊಟ್ಟ ಉತ್ತರವು ಹೀಗಿದೆ. ಅವರು ಹೇಳಿದರು: ಆಗಸ್ಟ್ ೬ ರಿಂದ ೧೦ ರವರೆಗೆ ಆಚರಿಸಬೇಕೆಂದು ಸರ್ವಾನುಮತದಿಂದ ನಿರ್ಧರಿಸಲಾಗಿತ್ತು. ಆದರೆ ಅದರಂತೆ ನಡೆದುಬರಲಿಲ್ಲ. ಅದಕ್ಕೆ ಕಾರಣವನ್ನು ಕೇಳಿದಾಗ ಅದರ ಸಂಚಾಲಕರು ಕೊಟ್ಟ ಉತ್ತರವು ಹೀಗಿದೆ. ಅವರು ಹೇಳಿದರು: ಒಂದೇ ಮಾತಿನಲ್ಲಿ ಹೇಳಬೇಕೆಂದರೆ ಸಾರ್ವಜನಿಕರ ಸಹಕಾರದ ಕೊರತೆಯೇ ಕಾರಣವೆಂದು ಹೇಳಬಹುದು. ಸಾರ್ವಜನಿಕರ ಸಹಕಾರವಿಲ್ಲದೆ ಯಾವ ಕೆಲಸವನ್ನು ಮಾಡಲು ಸಾಧ್ಯವಿಲ್ಲ. ಆದ್ದರಿಂದ ಸಾರ್ವಜನಿಕರ ಸಹಕಾರವಿಲ್ಲದೆ ಈ ಕೆಲಸವನ್ನು ಮಾಡಲು ಸಾಧ್ಯವಿಲ್ಲವೆಂದು ಅವರು ಹೇಳಿದರು.

ಪಂಚಾಚಾರ್ಯಪ್ರಭಾ

೧೯೫೨ನೆಯ ಆಗಸ್ಟ್ ತಾ॥ ೨೫ ನೇ ಸೋಮವಾರ

ಶಿವಯೋಗ

ಶಿವಯೋಗವೆಂದರೆ ಮಾನವನು ತನ್ನ ಹೀನಸ್ಥಿತಿಯನ್ನು ಹೋಗಲಾಡಿಸಿ ಉತ್ತಮಸ್ಥಿತಿಯನ್ನು ಹೊಂದಿ ಶಿವನಲ್ಲಿ ಲೀನನಾಗುವದು ಅಂದರೆ ಸಮರಸನಾಗುವದು. ಇದು ಭೋಗ ಮೋಕ್ಷಗಳೆರಡನ್ನೂ ಕೊಡುವ ಸಾಮರ್ಥ್ಯವುಳ್ಳದ್ದು ಇಂಥ ಶಿವಯೋಗವು ನಮ್ಮ ಭಾರತಭೂಮಿಯಲ್ಲಿ ಮೊದಲು ವಿಶೇಷವಾಗಿತ್ತೆಂದು ಪ್ರಾಚೀನಗ್ರಂಥಗಳಿಂದ ತಿಳಿದುಬರುತ್ತದೆ ಬರಬರುತ್ತಾ ಇದು ಹ್ರಾಸವಾಗಿ ಇಕ್ಕಿಟ್ಟಿಗೆ ಸಾಮಾನವಶೇಷವಾಗಿರುವದು ವೀರಶೈವಮಂಥಗಳೇ, ಇದಕ್ಕಾಗಿ ಶ್ರೀಜಗದ್ಗುರು ಪಂಚಾಚಾರ್ಯರೂ ಅವರ ಶಿಷ್ಯಾದಿ ಪೀಠಗಳೂ ಗುರುವರ್ಗದ ಸಾಂಪ್ರದಾಯಸ್ಥರಾದ ಪಟ್ಟುಗಳವ್ವು ಅರಿಸಿ ಅವರಿಗೆ ಶಿವಯೋಗಪ್ರತಿಪಾದಕವಾದ ಶಿಪಾಗಮ ಗಳನ್ನೂ ತತ್ಪಾಧಕವಾದ ಸಂಸ್ಕೃತವನ್ನೂ ಕಲಿಸುವುದ ಕ್ಕಾಗಿ ಒಂದು ಗುರುಕುಲವನ್ನು ಏರ್ಪಡಿಸಿದರೆ ನಮ್ಮ ಮತಕ್ಕೆ ಮಹಶ್ಚ್ಯುದೀಪನವಾಗಬಹುದು ಎಷ್ಟೋ ಪಟ್ಟಣಕಾಧಿಕಾರಿಗಳು ಗುರುಕುಲಗಳನ್ನು ನಿರ್ಮಿಸಿದ್ದರೂ ಅದರಲ್ಲಿ ಪಾಶ್ಚಾತ್ಯರ ಅಭ್ಯಾಸವು ಪ್ರಾಮುಖ್ಯವಾಗಿ ನಡೆಯದೆ ಜೀವನೋಪಾಯಕ್ಕೆ ಸಾಧನವಾದ ಇಂಗ್ಲೀಷ ಅಭ್ಯಾಸವು ನಡೆಯುತ್ತಿರುವುದನ್ನು ನೋಡಿದರೆ ವ್ಯಾಕುಲವಾಗುತ್ತದೆ ಗುರುಕುಲವಾಸದಲ್ಲಿ ಗುರು ವರ್ಗದ ಬಾಲಕರು ಸಂಸ್ಕೃತವನ್ನು ಅಭ್ಯಾಸಮಾಡಿ ವೀರಶೈವಸಿದ್ಧಾಂತಶಾಸ್ತ್ರವನ್ನು ಕಲಿತು ರಹಸ್ಯವನ್ನೆಲ್ಲ ತಿಳಿದು ಆದರಂತೆ ಆಚರಿಸಿ ಸಚ್ಛಿಷ್ಯರಲ್ಲಿ ಹರಡುತ್ತ ಬಂದರೆ ಶಿಷ್ಯರೂ ಕೂಡ ಭೋಗ-ಮೋಕ್ಷವನ್ನು ಪಡೆಯುವರು. ನಮ್ಮಲ್ಲಿ ಎಲ್ಲಿಯವರೆಗೆ ಗುರುವರ್ಗದ ಪಟ್ಟುಗಳು ಶಿವಯೋಗಶಾಸ್ತ್ರದಲ್ಲಿ ನಿಷ್ಣಾತರಾಗುವದಿಲ್ಲವೋ ಅಲ್ಲಿಯವರೆವಿಗೂ ನಮ್ಮ ವೀರಶೈವಮತಕ್ಕೆ ಹೀನಾವಸ್ಥೆಯು ತಪ್ಪುವದಿಲ್ಲ

ಇತ್ತೀಚೆಗೆ ಶಿವಯೋಗಶಾಸ್ತ್ರಸಂಪ್ರದಾಯವು ಕಡಿಮೆ ಯಾಗುತ್ತ ನಡೆದ ಕಾಲದಲ್ಲಿ ತಪಸ್ವಿಯಾದ ವಸಗುತ್ತ ನೆಂಬ ಮಹಾ ಮಾಹೇಶ್ವರನಿಗೆ ಶಿವನು ಸ್ವಪ್ನದಲ್ಲಿ ಈ ಮಹಾ ದೇವಗಿರಿಯ ದೊಡ್ಡ ಶಿಲಾತಲದಲ್ಲಿ ಶಿವಯೋಗ ಶಾಸ್ತ್ರದ ಸಾರಹಸ್ಯವನ್ನು ಎಂದು ಹೇಳಿ ಶಿವಸೂತ್ರಗಳನ್ನು ಅಮಗ್ರಹಿಸಿದನು ಆ ದೊಡ್ಡ ಕಲ್ಲಿಗೆ ಈಗ್ಯೂ ಶಂಕರ ಪಲ್ಲ ಎಂದು ಕಾಶ್ಮೀರದಲ್ಲಿ ಹೇಳುವ ಸಾಂಪ್ರದಾಯ ವಿರುವುದು. ಈ ಇತಿಹಾಸವು ಈಗ ನಿರ್ಣಯಸಾಗರ ನಲ್ಲಿ ಅಚ್ಚಾಗಿರುವ ಶಿವಸೂತ್ರ ವಿಮರ್ಶನೀ ಎಂಬ ಗ್ರಂಥವನ್ನು ನೋಡಿದವರಿಗೆ ಗೊತ್ತಾಗುತ್ತದೆ. ಈ ಸೂತ್ರಗಳು ಪ್ರಾಯಃ ತಿಪಾಗಮದ ಸಾರವನ್ನೇ ಹೇಧಿಸುತ್ತವೆ.' ಚೈತನ್ಯಮಾತ್ಮಾ ' ' ಜ್ಞಾನಂಬಂಧಃ' ಎಂದೆರಡು ಮೊದಲಿನ ಸೂತ್ರಗಳಲ್ಲಿ ಶ್ರೀ ವ್ಯಾಸ ಮಹರ್ಷಿಗಳು ತಮ್ಮ ಶಿವಪುರಾಣದಲ್ಲಿ ಉದಾಹರಿಸಿರುವ ಕಾರಣ ಈ ಶಿವಸೂತ್ರಗಳ ಅವಿರ್ಭಾವಕಾಲವು ವ್ಯಾಸ ಮಹರ್ಷಿಗಳಿಂದ ರಚಿತಗಾದ ಬ್ರಹ್ಮಸೂತ್ರಗಳಿಗಿಂತ ಮೊದಲಿನದೆಯೆಂದು ಹೇಳುವಲ್ಲಿ ಯಾವ ಸಂಶಯವೂ ಇಲ್ಲ ಸಿದ್ಧಾಂತಶಿಖಾಮಣಿ ಮೊದಲಾದ ಅನೇಕ ಗ್ರಂಥಗಳು ಶಿವಯೋಗವನ್ನೇ ಹೇಳುವವು. ಅದ್ದರಿಂದಲೇ ಈಗಲೂ ಶಿವಯೋಗಿಗಳ ಮತವು ಅಲ್ಪ ಸ್ವಲ್ಪ ಉಳಿದಿರುವುದು ನಮ್ಮಲ್ಲಿ ಅನೇಕರು ಪೂರ್ವ ಕಾಲದಲ್ಲಿ ಶಿವಯೋಗ ರಹಸ್ಯವನ್ನು ತಿಳಿದಿದ್ದರೂ, ಲೋಭದಿಂದ ಅಪ್ಪರಿಗೆ ಹೇಳದೆ ಅತಿ ರಹಸ್ಯವಾಗಿಟ್ಟು ಕೊಳ್ಳುತ್ತ ಬಂದುದರಿಂದಲೇ ಈ ಶಿವಯೋಗವು ಲೋಪಾವಸ್ಥೆಯನ್ನು ಹೊಂದಿತೆಂದು ಹೇಳಲೆಳ್ಳೆ ಸಂಶಯವೇ ಇಲ್ಲ. ಅದ್ದರಿಂದ ನೊದಲು ಹೇಳಿದ ಪ್ರಕಾರ ಒಂದು ಗುರುಕುಲವಾಸವನ್ನು ಏರ್ಪಡಿಸಿ ಅಲ್ಲಿ ಗುರುವರ್ಗದ ವಿದ್ಯಾರ್ಥಿಗಳನ್ನು ಭಾಷಾಪರಿಣಯ ಮಾಡಿಸಿ ಯೋಗಶಾಸ್ತ್ರಸಂಪನ್ನರನ್ನಾಗಿ ಮಾಡಿಸ್ತ ಬಂದರೆ ನಮ್ಮ ವೀರಶೈವ ಮತವು ಉಜ್ಜೀವಿಸಿರವನ್ನು ಏರಬಹುದು.

ಆಚಾರವೂ ಆರೋಗ್ಯವೂ

ಲೇ —ಶಙ್ಕಮಣ್ಣೂರ ಬ್ರಹ್ಮಶ್ರೀ ಪಂ॥ ಗುರುದೇವಶಿವಾಚಾರ್ಯರು ಆಯುರ್ವೇದಾಚಾರ್ಯ ಆಯುರ್ವೇದಿಕ್ ಹಾಸ್ಪಿಟಲ್ ನವಲಗುಂದ

(ಕಳೆದ ಸಂಚಿಕೆಯಿಂದ ನಿಂುುದುವರೆದುದು)

ದಂತಧಾವನ

ಯಾವದಾದರೊಂದು ಧಾರ್ಮಿಕ ಕರ್ಮವನ್ನು ಮಾಡಬೇಕಾದರೆ ಮನಸ್ಸಿನ ಶುದ್ಧಿಯು ಮೂಲಕಾರಣ ವಾಗಿದೆ. ನಿತ್ಯದಲ್ಲಿಯೂ ಹಲ್ಲು ಮತ್ತು ಬಾಯಿ ಇವು ಗಳನ್ನು ಸ್ವಚ್ಛವಾಗಿಡುವುದರಿಂದ ಮನಸ್ಸು ನಿರ್ಮಲ ವಾಗುತ್ತದೆ ಅವುಗಳಲ್ಲಿ ಕೊಳೆಯು ಸೇರಿದರೆ ಅನೇಕ ತರದ ರೋಗಗಳಾಗುತ್ತವೆ ರೋಗದ ಬಾಧೆಯಿಂದ ಹಾಸಿಗೆಯಲ್ಲಿ ನರಳುತ್ತಿರುವಾಗ ಜಪ, ತಪ, ಮೊದಲಾದ ಧಾರ್ಮಿಕ ಕರ್ಮಗಳನ್ನು ಮುಸಲಿಗಿಡಬೇಕಾಗುವದು ಆದ್ದರಿಂದ ಸ್ವಚ್ಛತೆಯು ಮನಸ್ಸಿದ್ಧಿಗೆ ಕಾರಣವಾಗಿದೆ ಮನಶುದ್ಧಿಯು ಧರ್ಮಸಾಧನೆಗೆ ಕಾರಣವಾಗಿದೆ ಹೀಗೆ ಹಲ್ಲು ತಿಕ್ಕುವದು ಧರ್ಮಸಂಗ್ರಹಕ್ಕೆಂದೇ ಹೇಳ ಬಹುದು ಆರೋಗ್ಯಶಾಸ್ತ್ರಕಾರರಂದೂ ದಂತಧಾವನಕ್ಕೆ ಹೆಚ್ಚು ಮಹತ್ವವನ್ನು ಕೊಟ್ಟಿದ್ದಾರೆ ಕೆಲವರಿಗೆ ಹಲ್ಲು ತಿಕ್ಕುವದೆಂದರೆ ಮೈಗೆ ಮುಳ್ಳು ಹಚ್ಚಿದಂತಾಗುತ್ತದೆ ಅವರ ಹಲ್ಲುಗಳು ಭಾಖಿಯೊಳಗಿನ ಹಾಂಸೆಗೆಟ್ಟಿದ ಕಲ್ಲು ಗಳಂತಿದ್ದರೂ ಹಸಿರುಗಳಂತೆ ಹಾಗೇ ಇವ್ವನ್ನು ಮೆಲ್ಲುವ ದುಂಟು ಮತ್ತೆ ಕೆಲವರು ನಿತ್ಯದಲ್ಲಿ ಎಲೆ, ಅಡಿಕೆ, ತಂಬಾಕ ಇವುಗಳನ್ನು ಮಿತಿಮೀರಿ ಉಪಯೋಗಿಸುವರು ಇದರಿಂದ ಅವರ ಹಲ್ಲು ಹುಣುಸೀಕಳ್ಳದಂತಿದ್ದರೂ ಅವು ಗಳ ವಿಚಾರವೇ ಅವರಿಗಿರುವುದಿಲ್ಲ ಮತ್ತೆ ಕೆಲವರ ಹಲ್ಲುಗಳ ಸಂದು ಸಂದುಗಳಲ್ಲಿ ಗಬ್ಬಿನಂತೆ ಕೊಳೆಯು ತುಂಬಿರುತ್ತದೆ ಇದರಿಂದ ಕೆಲಗೊಂದು ನೋಲೊಂದು ಕುದುರೆ ಸಾಲಿನಂತಹ ಹಲ್ಲಿನ ಸೆಟ್‌ನ್ನು ನೋಡ ಬಹುದು ಇನ್ನು ಕೆಲವು ಕೊಳೆ ಕಲ್ಲಂಗಡಿ ಬೀಜ ದಂತಿರುವ ಹಲ್ಲುಗಳನ್ನು ಹಲವು ಹಲ್ಲಿಟ್ಟು ಹಚ್ಚುವ ಆವ್ಯವರಲ್ಲಿ ನೋಡಬಹುದು

ಮಹಾಶಯರೇ ದೇಶದ ಉನ್ನತಿಗೆ ಕಾರಣರಾದ ಪುರುಷರ ಹಲ್ಲುಗಳು ಕಪ್ಪಾದ ಕವಚಿಯಂತಿರುವಾಗ ಸ್ತ್ರೀಯರ ಹಲ್ಲುಗಳು ಕಲ್ಲಂಗಡಿಯ ಬೀಜದ ಹಾಗಿರುವ ದೇನೂ ಆಶ್ಚರ್ಯವಲ್ಲ ದೇವರು ನಮಗೆ ಶುಭ್ರವಾದ ಹಲ್ಲುಗಳನ್ನು ಕೊಡಬೇಕಾದರೆ ಹೊಲಸು ಮಾಡಿ ಕೊಳ್ಳುವದಕ್ಕಾಗಿ ಕೊಟ್ಟಿಲ್ಲ ಯಾವನ ಹಲ್ಲುಗಳು ಎಷ್ಟು ಸ್ವಚ್ಛವಾಗಿರುವವೋ ಅಷ್ಟು ದೇಹವು ಸ್ವಚ್ಛ ವಾಗಿರುವದು. ಹಲ್ಲು ಹಸಪಾಗಿದ್ದರೆ ಹಸಿವೆ ಚೆನ್ನಾಗಿ ಆಗುವದು ನಾವು ಉಣ್ಣುವಾಗ ಹಲ್ಲುಗಳ ಸಂದು ಸಂದುಗಳಲ್ಲಿ ಅನ್ನದ ಅಂಶವು ಸೇರಿಕೊಳ್ಳುತ್ತದೆ. ಅಡಮ್ಮೆ ನಾವು ತಿಕ್ಕಿ ಕೊಳೆಯದೆ ಇದ್ದರೆ ಅದು ಅಲ್ಲಿಯೇ ಕೊಳೆತು ದುರ್ಗಂಧವಾಗುತ್ತದೆ ನಾವು ಪುನಃ ಊಟಮಾಡುವಾಗ ಆ ಕೊಳೆಯು ಅನ್ನದಲ್ಲಿ ಸೇರಿ ನಮ್ಮ ಹೊಟ್ಟೆಯಲ್ಲಿ ಹೋಗುತ್ತದೆ ಅದರಿಂದ ಮಂದಾಗ್ನಿ, ಅಜೀರ್ಣ, ಹೊಟ್ಟೆಹೂಬಿ ಈ ಮೊದಲಾದ ರೋಗಗಳಾಗುತ್ತವೆ. ಮತ್ತು ಹಲ್ಲಿನಲ್ಲಿ ಯಾವಾಗಲೂ ಕೊಳೆಯಿರುವುದರಿಂದ ಅವುಗಳಲ್ಲಿ ಕ್ರಿಮಿಗಳಾಗುತ್ತವೆ. ಆದರಿಂದ ಕೀವು (ಕರ್ಮೋರಿಯಾ) ಹೊರಡುವುದು ಈ ಕೀವು ರಕ್ತವು ನಾವು ಉಣ್ಣುವಾಗ ಅನ್ನದೊಡನೆ ಸೇರಿ ಹೊಟ್ಟೆಯಲ್ಲಿ ಹೋಗುವದು. ಇದರಿಂದ ರಕ್ತ ವಿಕಾರ, ಹೃದಯವಿಕಾರ, ಕ್ಷಯರೋಗ, ತಲೆಕೂದಲು, ನೇತ್ರರೋಗ ಈ ಎಲ್ಲ ವ್ಯಾಧಿಗಳುಂಟಾಗುತ್ತವೆ ಒಂದು ಸಾರಿ ನಮ್ಮ ಹಲ್ಲುಗಳು ಕೆಟ್ಟರೆ ಪುನಃ ಅವುಗಳನ್ನು ಸುಧಾರಿಸುವದು ಬಹಳ ಕಷ್ಟವಷೆ. ಕೆಟ್ಟ ಹಲ್ಲುಗಳನ್ನು ತೆಗೆಯಿಸಿದರೆ ತಮ್ಮ ಆರೋಗ್ಯವೇ ಸುಧಾರಿಸುವುದಿಲ್ಲ. " ಹಲ್ಲು ಹೋದಮೇಲೆ ದೇಹವು ಹುಲ್ಲಿಂಥಲೂ ಕಷ " ಎಂಬ ಒತ್ತಿ ಹೇಳಬಹುದು.

ಹಲ್ಲುಗಳನ್ನು ಹೋಷಾಡ ಮಾಡುವ ಪದ್ಧತಿ

ಹಲ್ಲುಗಳನ್ನು ಮುಂಜಾನೆ ಬೇಗ ಮುಂಜಾದ ಮೈದುವಾದ ಕಡ್ಡಿಗಳಿಂದ ಸ್ವಚ್ಛವಾಗಿ ಒಂದೊಂದನ್ನೇ ತಿಕ್ಕಬೇಕು. ತಥಾ ತ್ರಿಫಲಾ ಚೂರ್ಣದಿಂದ ತಿಕ್ಕ ಬೇಕು. ನಂತರ ಜಾಲಿಗೆಯಲ್ಲಿ ಉಳಿತ ಹೊಲಸನ್ನು ಜಿಹ್ವಾನಿರ್ಲೇಖದ ಕಡ್ಡಿಯಿಂದ ತೆಗೆಯಬೇಕು. ನಂತರ ತಣ್ಣೀರಿನಿಂದ ಚೆನ್ನಾಗಿ ಬಾಯಿ ಮುಕ್ಕಳಿಸಬೇಕು. ಇದರಿಂದ ಹಲ್ಲು, ಗಂಟಲು, ಮೊದಲಾದ ಭಾಗಗಳಲ್ಲಿದ್ದ ಕೊಳೆಯು ನಾಶವಾಗುವುದು. ಊಟವಾದ ತಂಟರ ತಲ್ಲು ಗಳನ್ನು ಚೆನ್ನಾಗಿ ತೊಳೆಯುವದು ಒಳ್ಳೆಯದು. ಆಹಾ ಬಿಸಿಯಾದ ಆಹ್ಲ ಪಾನಗಳನ್ನು ಮಾಡುವದರಿಂದಲೂ ಮತ್ತು ಸಿಹಿ ಪದಾರ್ಥಗಳನ್ನು ಅತಿಯಾಗಿ ಸೇವಿಸುವದ ರಿಂದಲೂ ಹಲ್ಲುಗಳು ಶೀಘ್ರ ಕೆಟ್ಟುಹೋಗುತ್ತವೆ. ಮೊಸಾಸಾಹಾರವನ್ನು ಮಾಡುವವರ ಹಲ್ಲಿನಲ್ಲಿ ಮೊಸರಿನ ಅಂಶವು ಸೇರಿ ಆ ಕೊಳೆಯಿಂದ ಹಲ್ಲುಗಳು ಶೀಘ್ರ ಕೆಡುತ್ತವೆ ಶಾಕಾಹಾರಿಗಳಿಗಿಂತಲೂ, ಮೊಸಾಹಾರಿ ಗಳು ಹಲ್ಲಿನ ಮೇಲೆ ಹೆಚ್ಚು ಕಾಳಜಿಯನ್ನು ತೆಗೆದು ಕೊಳ್ಳಬೇಕ್ಕದ್ದು

ನಾರದ ಹಾಗೂ ಸುತನ ಸಂವಾದ

ಸಂ —ಶ್ರೀ ' ಬಾಲಬ್ರಹ್ಮಶ್ರೀ ' ಆಶುಕವಿರತ್ನಮಹ' ಗಂಗಾಧರಶಿವಾಚಾರ್ಯಮಹಾಸ್ವಾಮಿಗಳವರ ಮರಣ ಶ್ರೀಜಗದ್ಗುರು ವಿಶ್ವಾರಾಧ್ಯ ಶೇನಾಕ್ಷರಮಹ ಅಧ್ಯಕ್ಷರು ಬೈಲಹಂಗಲ

(ಕಳೆದ ಸಂಚಿಕೆಯಿಂದ ಮುಂದುನರೆದುದು)

ನಾರದ —ಯಾವ ಬ್ರಾಹ್ಮಣಶ್ರೇಷ್ಠನು ಎಂಟು ವಿಧವಾದ ಬ್ರಾಹ್ಮಣ್ಯವನ್ನು ಅರಿತಿರುವನು ?

ಸುತ —ಮಾತ್ರ, ಬ್ರಾಹ್ಮಣ, ಶ್ರೋತ್ರಿಯ, ಅವನ ಜಾನ, ಭೃಣ, ಋಷಿಕಲ್ಪ, ಋಷಿ, ಮುನಿ ಎಂಬಿವೆ ಅಷ್ಟವಿಧ ಬ್ರಾಹ್ಮಣ್ಯ !! ಇವರಲ್ಲಿ ಒಬ್ಬರಿಂತಿಹ ಮಹಿಮ ರ್ಬರು ವಿದ್ಯಾ, ವೈತ್ತಿ, ಆಚಾರ, ವೈದಶಾಧಾಧಿಗಳಿಂದ ಹೆಚ್ಚಿನವರಾಗುತ್ತಾರೆ ಬ್ರಾಹ್ಮಣ ವಂಶದಲ್ಲಿ ಹುಟ್ಟಿ ವಿದ್ಯಾಹೀನನೂ ಕ್ರಿಯಾಭ್ರಷ್ಟನೂ ಆದವನೆ ಮಾತ್ರನು! ಕಾಮ್ಯಕರ್ಮಗಳನ್ನು ಳಿದು ವೇದಾಧ್ಯಯನತತ್ಪರ ನಾದವನು ಬ್ರಾಹ್ಮಣನು. ನೇದದ ಒಂದು ಶಾಖೆಯನ್ನು ಕಲ್ಪದೊಡನೆ ಆರು ಅಂಗಗಳೊಂದಿಗೆ ಅಧ್ಯಯನ ಮಾಡಿ ಷಟ್ಕರ್ಮನಿರತನಾದ ಧರ್ಮಜ್ಞನು ಶ್ರೋತ್ರಿಯ ನು ವೇದವೇದ್ಯಾಂಗತತ್ತ್ವಜ್ಞನಾಗಿ, ಶುದ್ಧಚಿತ್ತ ನಾಗಿ, ಪಾಪಲೇಪವಿಲ್ಲದ ಶ್ರೋತ್ರಿಯನು ಅವನೂಜಾತ ನೆಂದು ಹೇಳಲ್ಪಡುವನು. ಅವೂಜಾತಗುಣಗಳುಳ್ಳವನೂ ಯಜ್ಞನಿರತನೂ, ಜಿತೇಂದ್ರಿಯನೂ ಎಲಿವನೂ ಭೃಣನು ವೈದಿಕ ಲೌಕಿಕಗಳನ್ನು ತಿಳಿದು ಸಕಲ ತತ್ವಗಳನ್ನು ತಿಳಿದ ಅತ್ರಮತ್ಸರನು ಋಷಿಕಲ್ಪನೆನ್ನಿಸಿ ಸ್ತಾನೆ. ಸಂದೇಹರಹಿತನೂ, ಊರ್ಧ್ವರೇತಸ್ಕನೂ, ತಾಪಾನುಗ್ರಹಸಮರ್ಥನೂ, ಸತ್ಯಸಂಧನೂ ಆದವನು ಋಷಿ. ಕಾಮಕ್ರೋಧಾದಿ ವಿವರ್ಜಿತನಾಗಿ ಧ್ಯಾತಾಶಕ್ತ ನಾಗಿ ಸಂಸಾರಧಿನಿವೃತ್ತನಾಗಿ, ಶಾಂತಿದಾಂತಿಸಮನ್ವಿತನಾದ ಮಹಾತ್ಮನು ಮುನಿ ಎಂದು ಮನ್ನಿಸಲ್ಪಡುತ್ತಾನೆ.

ನಾರದ—ಕೃತ, ತ್ರೇತಾ, ದ್ವಾಪರ, ಕಲಿಯುಗಗಳೆಂಬ ನಾಲ್ಕು ಯುಗಗಳ ಮೂಲವಿವಗಳನ್ನು ಹೇಳಬಲ್ಲೆಯಾ?

ಸುತ—ಶಾರ್ವರ ಶುಕ್ಲ ನವಮಿ ಕೃತಯುಗದ ಪ್ರಥಮದಿನ. ವೈಶಾಖ ಶುಕ್ಲ ತೃತೀಯೆ ತ್ರೇತಾಯುಗದ ಪ್ರಥಮ ದಿನ. ಮಾಘ ಕೃಷ್ಣ ಅಮಾವಾಸ್ಯೆ ದ್ವಾಪರ ಯುಗದ ದಿನ. ಭಾದ್ರಪದ ಕೃಷ್ಣ ತೃಯೋದಶಿ ಕಲಿಯುಗಾರಂಭ ದಿವಸ ಇಂತಿವು ಯುಗಾದಿಗಳು ಪ್ರತಿ ಯುಗದಲ್ಲಿ ನೂರು ವರ್ಷಗಳ ವರೆಗೆ ದಾನ ಮಾಡುವ ಫಲವು ಮೇಲಿನ ದಿವಸಗಳಲ್ಲಿ ದಾನ ಮಾಡು ವದರಿಂದ ಉಂಟಾಗುವುದು.

ನಾರದ —ಚತುರ್ದಶಮನ್ವಂಗಳ ಮೊದಲ ದಿನ ಗಳನ್ನು ತಿಳಿಸುವಿಯಾ ? ಮತ್ತು ಸಂಯಾಗ ಎಂದ ಪೂರ್ವತಿಥಿಯನ್ನು ಅರೋಹಣ ಮಾಡಿದ್ದಾನೆ ?

ಸುತ—ಆಶ್ವಯುಜ ಶುಕ್ಲ ನವಮಿ ಸ್ವಾಯಂಭುವ ಮನ್ವಾದಿ, ಚೈತ್ರ ಶು॥ ದ್ವಾದಶಿ ಸ್ವಾರೋಚಿ ಮನ್ವಾದಿ, ಫೈತ್ರಮಾಸದ ತೃತೀಯೆ ಉತ್ತಮಮನ್ವಾದಿ ಭಾದ್ರಪದದ ತೃತೀಯೆ ವೈವಸಮನ್ವಾದಿ, ಫಾಲ್ಗುಣ ಬಿ॥ ಅಮಾವಾಸ್ಯೆ ತಾಮಸಮನುವಿನ ಆದಿಯ ದಿವಸ ಮಾಘ ಸಪ್ತಮಿ ಸಾವರ್ಣಿಕಮನ್ವಾದಿ, ಶ್ರಾವಣಶುಕ್ಲವಿ ಬ್ರಹ್ಮಸಾವರ್ಣಿಯದು. ಆಷಾಢ ಪೂರ್ಣಮಾ ರುದ್ರ ಸಾವರ್ಣಿಯದು. ಕಾರ್ತೀಕದ ಪೂರ್ಣಮಾ ದಕ್ಷ ಸಾವರ್ಣಿಯದು. ಫಾಲ್ಗುಣ ಮಾಸದ ಪೂರ್ಣಿ

ಧರ್ಮಸಾಮರ್ಥ್ಯವು. ಶೈತ್ಯಪೂರ್ಣಮೂ ರೌದ್ರ ಮನ್ಮಾದಿ, ಶೈತ್ಯ ಪೂರ್ಣಮೆ ಭೌತ್ಯಮನ್ಮಾದಿ ಆಗಿದೆ. ಇದಲ್ಲದೆ ಮಾಘಮಾಸದ ಸಪ್ತಮಿಯ ದಿನ ಸೂರ್ಯನು ಪೂರ್ವರಥವನ್ನು ಆರೋಹಣಮಾಡಿದ್ದು ಅದ್ದರಿಂದ ಇದಕ್ಕೆ ರಥಸಪ್ತಮಿ ಎಂದು ಹೆಸರು ಬಂದಿದೆ ಈ ದಿವಸಗಳಲ್ಲಿ ಮಾಡಿದ ಸತ್ಕರ್ಮಗಳು ಬಹು ಫಲಪ್ರದ ಗಳು.

ನಾರದ—ಈ ಘೋರಸಂಸಾರದಲ್ಲಿ ಯಾರು ಆತ್ಯಂತ ದಕ್ಷರು ?

ಶುಕ—ನಾ ಬಂದುದು ಎಲ್ಲಿಂದ? ಯಾವ ಕರ್ಮ ದಿಂದ ಹೀಗಾದೆ! ಮುಂದೆ ಎಲ್ಲಿಗೆ ಹೋಗುವೆನು ಮತ್ತೆ ಮಲಿಬವೆನೆ ಇಲ್ಲವೆ? ಫೃಥು ಈ ಭವಸಾಗರಕ್ಕೆ ಬಾರದಿರಲು ನಿಮಮಾಡುವದು ? ಎಂದು ಗಾಢವಾಗಿ ಯೋಚಿಸಿ ತಕ್ಕ ಪ್ರತೀಕಾರವನ್ನು ಮಾಡುವಾತನೆ ಈ ಸಂಸಾರದಲ್ಲಿ ದಕ್ಷನು!!

ಈ ಪ್ರಕಾರವಾಗಿ ತನ್ನ ಪುತ್ರಿಗಳಿಗೆ ನೀರಿವಾಗಿ ಸಮಂಜಸ ಉತ್ತರವಿತ್ತ ಬಾಲಶುಕನುವಿಗೆ ವಿದ್ಯಾಬಲ ವನ್ನು ಪರಾಮರ್ಶಿಸಿದ ನಾರದಮುನಿಯು ಸಂಕೃಪ್ತ ನಾಗಿ ವಿಜಯರೂಪಧಾರಿಯಾದನು

ಏ. ಸೂ.—ಕ್ಷೌತ್ರಿಯರುಗಳಿಗಿರುವ ವಿದ್ಯಾಂಸ ನಾಗಿರುವ ವಿಪ್ರನು ದಾನಕ್ಕೆ ಸತ್ಪಾತ್ರನೆಂದು ಬಗೆದು ಧರ್ಮವರ್ಮರಾಜನಿಂದ ತನಗೆ ಕೊಡಲ್ಪಟ್ಟ ಧನ, ಭೂಮಿಗಳನ್ನು ಅಂತಹ ಬ್ರಾಹ್ಮಣನಿಗೆ ಸಲ್ಲಿಸಬೇಕೆಂಬ ಸದಿಚ್ಛೆಯಿಂದ ಮೈಲ್ಯಾಡೆಸಿದ ಪ್ರಶ್ನೆಗಳನ್ನು ಕೇಳುತ್ತ ಕೇಳುತ್ತ ಉಲಾಪ್ರಾಮದಲ್ಲಿಯ ವಿಪ್ರೋತ್ತಮರನ್ನು ಸಂದರ್ಶಿಸಿ ಅವರ ಜೀಳಿಕೆಯಿಂತೆ ಮೆಲುಳನಂತಿರುವ ಸುತಪ್ತ ಎಂಬುವ ಬಾಲನನ್ನು ಉರಿತು ನಾರದ ಮಹರ್ಷಿ ಪ್ರಶ್ನಿಸಿದನು.

ಸ್ಕಾಂದಪುರಾಣಾಂತರ್ಗತವಾದ ದ್ವಿತೀಯ ಶೌಮಾ ರಿಣಾ ಖಂಡದಲ್ಲಿ ಈ ಪ್ರಶ್ನೋತ್ತರ ವಿಧಾನವು ಗ್ರಂಥಿತ ವಾಗಿದೆ. ಈ ಖಂಡವನ್ನು ಎಂ. ಎಸ್. ಸುಬ್ರಹ್ಮಣ್ಯ ಶಾಸ್ತ್ರಿಗಳು ತನ್ನ ದಶ್ಯ ಭಾಷಾಂತರಿಸಿರುತರು. ಜಿಜ್ಞಾಸು ಗಳ ಅನುಗ್ರಹನಿಗಾಗಿ ಈ ಮಹತ್ಪ್ರಂಥ ಸಂದರ್ಭವನ್ನು ಸಂಗ್ರಹಿಸಲಾಗಿದೆ.

ವಾರ ಭವಿಷ್ಯ

ಲೇ. ಯಡಗೋಡ ರಾಷಾಲಾಭ್ಯಾಸಿ ಜ್ಯೋತಿರ್ಮಾರ್ತಂಡ ವೇ|| ರುದ್ರಾರಾಧ್ಯಶಾಸ್ತ್ರಿಗಳು

(ತಾ|| ೩೦-೮-೫೨ ರಿಂದ ತಾ|| ೬-೯-೫೨ ರ ವರೆಗೆ)

ಮೇಷ—ಈ ವಾರದಲ್ಲಿ ಸುಖ, ಧನಾ ಈ ಮಿಶ್ರ ಫಲಗಳೊದಗುವುವು.

ವೃಷಭ—ಸಂಕಟಗಳು ಈ ವಾರದಲ್ಲಿ ಸರ್ವತ್ರ ಉಂಟಾಗುವು. ಹುಷಾರಿಯಾಗಿ ಇರಬೇಕು.

ಮಿಥುನ—ಈ ವಾರದಲ್ಲಿ ಸುಖ ಕಡಿಮೆಯಾಗಿ ಅತಿಯು ಹೆಚ್ಚುವದು ಜಾಗ್ರತೆ.

ಕರ್ಕ—ಅಲ್ಪಸುಖ ಈ ವಾರದಲ್ಲಿ ಉಂಟಾಗುವುದು.

ಸಿಂಹ—ಸುಖವುಂಟು. ಅದರೂ ಮುಕ್ತಿಗೆ ಮುಖ ತೋರಿರಿ

ಕನ್ಯಾ—ಜೀವನವು ಈ ವಾರದಲ್ಲಿ ತಾರಿಯಿಂ ತಿದ್ದು ಅದರಂತೆ ಸುಖಹೊಂದಿರಿ.

ತುಲಾ—ಕಷ್ಟ ಬಯಲಾಯಿತು. ಬುದ್ಧಿ ನಿಶ್ಚಲ ವಾಯಿತು ನಿಶ್ಚಲಿಸಿಗೆ ಶ್ರಮಿಸಿರಿ, ಆದರೂ ಪ್ರಯತ್ನ ಬೇಕು.

ವೃಶ್ಚಿಕ—ಸುಖ ಮಿಶ್ರಿತ ಮಿಶ್ರಯೋಗವುಂಟು. ಯಾವ ಕಾರ್ಯಕ್ಕೂ ಹರಿಯಾಯಬೇಡಿ.

ಧನು—ಈ ವಾರದಲ್ಲಿ ಸುಖವುಂಟು. ದೃಷ್ಟಿ ವಿಕ ರೂಪದಲ್ಲಿರಿರಿ.

ಮಕರ—ಮನವನ್ನು ಕಷ್ಟಬಂತೆಂದು ನೈಲಿಗೆ ಮಾಡಿಕೊಳ್ಳಬೇಡಿರಿ.

ಕುಂಭ—ಮುಕ್ತಿನ್ನಾನು ಇಷ್ಟಿದ ಅಷ್ಟವನ್ನು ಸುಸೂತ್ರ ಸುವಿಸುವ ಯೋಗವದೆ.

ಮೀನ—ಈ ವಾರದಲ್ಲಿ ಸುಖವು ನಿಮಗೆ ಮಿಂಚು ಸೋಪಾದಿಯಲ್ಲಿದೆ. ಬಹಳ ಹುಷಾರಿಯಿಂದ ಇರಬೇಕು

ವರ್ತಮಾನ ಸಂಗ್ರಹ

ಗ್ರಾಮಾಭಿವೃದ್ಧಿ ಸಮಿತಿಗಳ ರದ್ದು

ಮೈಸೂರು ಸಂಸ್ಥಾನದಲ್ಲಿ ೧೯೫೨ ರ ಗ್ರಾಮ ಪಂಚಾಯಿತಿ ಮತ್ತು ಜಿಲ್ಲಾ ಬೋರ್ಡ್ ಕಾಯಿದೆ ಜಾರಿಗೆ ಬಂದಿದ್ದು ಸರಕಾರದ ವೆಚ್ಚವನ್ನು ತಡೆಯಿಸಿ ಮಾಡುವ ಸಲುವಾಗಿ ಗ್ರಾಮಾಭಿವೃದ್ಧಿ ಸಮಿತಿಗಳನ್ನು ರದ್ದು ಮಾಡಲಾಗಿದೆ, ಎಂದು ಸರಕಾರದ ಆಜ್ಞೆ ಹೊರಟಿದೆ

ರೈತರಲ್ಲಿ ಮೊದಲನೆಯ ಬಹುಮಾನ ಪಡೆದ ಸತ್ರಿಯೊಬ್ಬರಿಗೂ ಟ್ರ್ಯಾಕ್ಟರ್

ಭಾರತದಲ್ಲಿ ಈ ಬಾರಿಯೂ ಬತ್ತ, ಗೋಧಿ, ಅಲೂ ಗಡ್ಡೆ ಮುಂತಾದ ಆರು ಆಹಾರ ವಸ್ತು ಬೆಳೆಯುವುದ ರಲ್ಲಿ ಸ್ಪರ್ಧೆ ನಡೆಯುತ್ತಿದೆಯಷ್ಟೆ ಈ ಒಂದೊಂದು ಬೆಳೆಯ ಸ್ಪರ್ಧೆಯಲ್ಲೂ ಮೊದಲನೆ ಬಹುಮಾನ ಪಡೆ ದವರಿಗೆ ಭಾರತ ಸರಕಾರದವರು ತಲಾ ೫೦೦೦ ರೂಪಾಯಿ ಕೊಡಲು ನಿರ್ಧರಿಸಿದ್ದರು. ಅದರೆ ಮೆಸರ್ಸ್ ಎಸ್ಕಾರ್ಟ್ಸ್ ಸಂಸ್ಥೆಯವರೆ ಮೊದಲನೆಯ ಬಹುಮಾನ ಪಡೆಯುವ ಆರು ಮಂದಿಗೂ ತಲಾ ೭೭೦೦ ರೂಪಾಯಿ ಬೆಲೆಬಾಳುವ ಫರ್ಗ್ಯೂಸನ್ ಟ್ರ್ಯಾಕ್ಟರ್‌ಗಳನ್ನು ಹಣಕ್ಕೆ ಬದಲಾಗಿ ಕೊಡಲು ನಿರ್ಧರಿಸಿದ್ದಾರೆ. ಬಹುಮಾನ ಪಡೆದ ರೈತರ ಜಮೀನಿಗೆ ಟ್ರ್ಯಾಕ್ಟರನ್ನು ಕಂಪನಿಯ ವೆಚ್ಚದಿಂದಲೇ ರವಾನಿಸಲಾಗುವುದು. ಅಲ್ಲದೆ, ಅದನ್ನು ಪಡೆಸಲು ರೈತ ನೇಮಿಸುವನನ್ನಿಗೆ ಕಂಪನಿಯವರೇ ಉಚಿತವಾಗಿ ತಿಕ್ಷಣ ಕೊಡುವರು. ತಿಕ್ಷಣ ಕೊಡಲು ಆ ಜಾಲಗಾರನನ್ನು ಕಂಪನಿಯ ಖರ್ಚಿಗೆ ಕರೆಸಿಕೊಳ್ಳಲಾಗು ವುದು ಆರು ತಿಂಗಳ ಕಾಲ ಯಂತ್ರದ ರಿಪೇರಿ ಕೆಲಸ ವನ್ನು ಉಚಿತವಾಗಿ ಮಾಡಿಕೊಡಲಾಗುವುದು ಈ ಬಹುಮಾನ ಪಡೆಯಲು ನಮ್ಮ ರೈತರಲ್ಲಿ ಎಷ್ಟರ ಮಟ್ಟಿಗೆ ಪೈಪೋಟಿ ನಡೆಯುವುದೋ ನೋಡಬೇಕು.

ಮಾರಾಟ ತೆರಿಗೆಯಿಂದ ವಿನಾಯಿತಿ

ಧಾನ್ಯ, ವೀಳೆದೆಲೆ, ಹತ್ತಿ, ಕೃತಕ ಗೊಬ್ಬರ, ಸೌದೆ. ಇದ್ದಲು, ಸೀಮೆಯೆಣ್ಣೆ ಮುಂತಾದ ೪೨ ವಸ್ತುಗಳ ಮಾರಾಟ ತೆರಿಗೆಯಿಂದ ವಿನಾಯಿತಿ ಕೊಡಬೇಕು, ಎಂಬುದನ್ನು ದೆಹಲಿಯ ಪಾರ್ಲಿಮೆಂಟ್ ಸಭೆ ಅಂಗೀಕರಿಸಿದೆ.

ಕಾಶ್ಮೀರದ ಬಗ್ಗೆ ಯುದ್ಧ ತಲೆದೋರುವ ಸಂಭವ

ಕಾಶ್ಮೀರದ ಬಗ್ಗೆ ಜಿನೀವದಲ್ಲಿ ನಡೆಯುವ ಮಾತು ಕತೆಗಳು ವಿಫಲವಾದರೆ ಕಾಶ್ಮೀರದ ಬಂಧವಿಮೋಚನೆ ಗಾಗಿ ಯುದ್ಧ ಹೂಡಬೇಕಾಗುವುದು ಎಂದು ಆಜಾದ್ ಕಾಶ್ಮೀರದ ಮಂತ್ರಿ ಶೇಖ್ ಹುಸೇನ್‌ರವರು ವಿಸಾರ್‌ಪುರದಲ್ಲಿ ತಿಳಿಸಿದರು ಜಿನೀವ ಮಾತುಕತೆಗಳು ಯಶಸ್ವಿಯಾಗುವ ವಿಚಾರದಲ್ಲಿ ಅವರು ತಮ್ಮ ಸಂದೇಹ ವನ್ನು ವ್ಯಕ್ತಪಡಿಸುತ್ತಾ "ಪವಿತ್ರ ಯುದ್ಧ ಹೂಡಲು ಆಮಂತ್ರಣ ಕೊಡಬೇಕೆಂದು ಪಾಕಿಸ್ತಾನ್ ಸಂಸ್ಥಾಕ್ಕೆ ಮಧವಿಮಾಡಿಕೊಂಡರು. ಪಾಕಿಸ್ತಾನ ಮತ್ತು ಕಾಶ್ಮೀರ ಗಳು ಬೇರೆಬೇರೆ ಪ್ರದೇಶಗಳೆಂದು ನಾವು ಭಾವಿಸುವ ದಿಲ್ಲ. ನೆಹರ್ರು-ಅಜ್ಜುಲ್ ಒಪ್ಪಂದವನ್ನು ನಾವು ತಿರ್ವ ನಾಗಿ ಖಂಡಿಸುತ್ತೇವೆ" ಎಂದು ಅವರು ತಿಳಿಸಿದರು.

ತಕ್ಷಣ ನಾಲ್ಕು ಭಾಷಾವಾರು ಪ್ರಾಂತ್ಯಗಳ ರಚನೆ ಆಗಬೇಕು

ಅಖಿಲ ಭಾರತ ಭಾಷಾವಾರು ಪ್ರಾಂತ್ಯ ಸಮ್ಮೇಳನವು ಡಾ|| ಲಂಕಾಸುಂದರಂರವರ ಅಧ್ಯಕ್ಷತೆಯಲ್ಲಿ ತಾ|| ೧೬ ರಂದು ಆಮಂತ್ರಣತಿಯಲ್ಲಿ ಸೇರಿ ವಿಜಾಪುರ್ಯ, ಮಹಾರಾಷ್ಟ್ರ, ಕರ್ನಾಟಕ ಮತ್ತು ಕೇರಳ ಪ್ರಾಂತ್ಯಗಳನ್ನು ತಕ್ಷಣ ರಚನೆ ಗೊಳಿಸಬೇಕೆಂದು ಒತ್ತಾಯಪಡಿಸಿತು. ಗಡಿ ಜಗಳ ವನ್ನು ಬಗೆಹರಿಸಲು ಗಡಿ ನಿರ್ಧಾರ ಸಮಿತಿಯೊಂದನ್ನು ನೇಮಿಸಬೇಕೆಂದು ಸಹ ಒತ್ತಾಯಪಡಿಸಿತು.

ಈಗಿರುವ ಪ್ರಾಂತ್ಯಗಳ ಗಡಿಗಳನ್ನು ಬದಲಾಯಿಸಿ, ಹೊಸ ಪ್ರಾಂತ್ಯಗಳನ್ನು ರಚಿಸಲು ಭಾರತ ರಾಜ್ಯಾಂಗದ ೩ ನೇ ವಿಧಿಯಂತೆ ಅವಕಾಶವಿದೆಯೆಂದು ನಿರ್ಣಯದಲ್ಲಿ ತಿಳಿಸಲಾಗಿತ್ತೆ ಸಮ್ಮೇಳನದಲ್ಲಿ ಒಟ್ಟು ೫ ನಿರ್ಣಯಗಳು ಅಂಗೀಕೃತವಾದವು. ಪ್ರಜಾಸರ್ಕಾರ ಯಶಸ್ವಿಯಾಗಿ ನಡೆದು ಬರಬೇಕಾಗಿದ್ದರೆ ಆರ್ಥಿಕಾಭಿವೃದ್ಧಿ ಆಗಬೇಕಾ ಗಿದ್ದರೂ, ಎಲ್ಲ ಕಡೆಯೂ ಕೃಷ್ಣ ಮಾಡಬೇಕಾಗಿದ್ದರೆ, ಭಾಷಾನುಗುಣವಾಗಿ ಪ್ರಾಂತ್ಯಗಳ ಪುನರ್ವಿಂಜನೆ ಆಕ್ಯಗತ್ಯ ವೆಂದು ಸಮ್ಮೇಳನವು ಸಾರಿತು.

ಭಾಷಾವಾರು ಪ್ರಾಂತ್ಯ ಪ್ರಶ್ನೆಯಲ್ಲಿ ಪ್ರಜಾ ಚಳುವಳಿ ಆಗುವಂತೆ ಮಾಡಬೇಕೆಂದೂ, ಈ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ಉಚೇರಿಸುವಂತೆ ಜನತೆ ಸರಕಾರ ವನ್ನು ಒತ್ತಾಯಪಡಿಸಬೇಕೆಂದೂ ಪ್ರಾರ್ಥಿಸಲಾಯಿತು.

ನಿಜಾಮರನ್ನು ತಕ್ಷಣ ಪದಚ್ಯುತಗೊಳಿಸಿ ಮಾತ್ರ, ಸಂಸ್ಥಾನವನ್ನು ಭಾಷಾನುಗುಣವಾಗಿ ವಿಭಾಗಿಸ ಬೇಕೆಂದು ಹೈದರಾಬಾದಿನ ಪ್ರಜೆಗಳು ಒತ್ತಾಯ ಪಡಿಸು ತ್ತಿರುವ ಬಗ್ಗೆ ಪಂ|| ನೆಹ್ರೂರವರು ಅಪ್ರಸರಿಸುತ್ತಿರುವ ನೀತಿಯಾಗಿ ಸಮ್ಮೇಳನವು ಇಷ್ಟೊಂದು ನಿರ್ಣಯದ ಮೂಲಕ ಆಶ್ಚರ್ಯವನ್ನು ವ್ಯಕ್ತಪಡಿಸಿತು. ಹೈದರಾ ಬಾದಿನ ಮತ್ತು ಭಾರತದ ಪ್ರಜೆಗಳು ಈ ಬಗ್ಗೆ ಮಾಡಿರುವ ಚಳುವಳಿಯೊಂದನ್ನು ನಡೆಸಿ ಸಂಸ್ಥಾನದ ಮೂರು ಭಾಷಾ ಕ್ಷೇತ್ರಗಳು ನೆರೆಯ ಪ್ರಾಂತ್ಯಗಳೊಡನೆ ಸೇರಿ ವಿಶಾಲ ಆಂಧ್ರ, ಸಂಯುಕ್ತ ಮಹಾರಾಷ್ಟ್ರ ಮತ್ತು ಸಂಯುಕ್ತ ಕರ್ನಾಟಕ ಪ್ರಾಂತ್ಯಗಳಾಗುವಂತೆ ಪ್ರಯತ್ನ ಮಾಡಬೇಕೆಂದು ಒತ್ತಾಯಪಡಿಸಲಾಯಿತು.

ಸರಕಾರದ ಹಿಂದಿರುವ ಪಕ್ಷವು ತನ್ನ ಕೈಲೇ ಅಧಿಕಾರವನ್ನು ಉಳಿಸಿಕೊಳ್ಳಬೇಕೆಂಬ ಇಚ್ಛೆಯಿಂದ ಭಾಷಾವಾರು ಪ್ರಾಂತ್ಯ ರಚನೆಯ ಬೇಡಿಕೆಯನ್ನು ತುಳಿಯಲು ಯತ್ನಿಸುತ್ತಿದೆಯೆಂದು ಮತ್ತೊಂದು ನಿರ್ಣಯದ ಮೂಲಕ ಆಕ್ಷೇಪಣೆಯಾಯಿತು.

ಭಾಷಾವಾರು ಪ್ರಾಂತ್ಯ ಸ್ಥಾಪನೆ ಚಳುವಳಗಳಲ್ಲಿ ಆಸಕ್ತರಾದ ವ್ಯಕ್ತಿಗಳು, ಸಂಸ್ಥೆಗಳು, ಗುಂಪುಗಳು ತಮಗಿಷ್ಟವಿರುವ ಸಂಪರ್ಕ ಬೆಳೆಸಿ, ಪ್ರಾದೇಶಿಕ ಸಮ್ಮೇ ಳನಗಳನ್ನು ನಡೆಸಲು ಶಾಶ್ವತಿಳ ಸಮಿತಿಯೊಂದನ್ನು ಸ್ಥಾಪಿಸಲಾಯಿತು. ಭಾಷಾವಾರು ಪ್ರಾಂತ್ಯ ಸಮಸ್ಯೆ ಗಳನ್ನು ಚರ್ಚಿಸಲು ಅಖಿಲ ಭಾರತ ಪ್ರತಿನಿಧಿಗಳ ಸಮ್ಮೇಳನವನ್ನು ಈ ವರ್ಷಾಂತ್ಯದಲ್ಲೇಗೆ ಕರೆಯ ಲಾಗುತ್ತದೆ.

ಶಾಶ್ವತಿಳ ಸಮಿತಿಯಲ್ಲಿ ಡಾ|| ಲಿಂಗಾಸುಂದರಂ (ಅಧ್ಯಕ್ಷರು), ಡಾ|| ಎಚ್. ಬಿ ಖಾರೆ, ಶ್ರೀ ಎ. ಡಿ. ದೇಶಪಾಂಡೆ, ಡಿ. ಕೆ ಬೇಡೇಕರ್, ಶ್ರೀ ಎಂ. ಎಸ್. ಗುರುಪಾದಸ್ವಾಮಿ (ಮೈಸೂರು) ಮುಂತಾದವರಿದ್ದಾರೆ.

ವಿಜಾಪುರಿನಲ್ಲಿ ಬಂಗಾಳಿ ಮಾತನಾಡುವ ಜನರುವ ಪ್ರದೇಶಗಳನ್ನು ಬಂಗಾಳಕ್ಕೆ ವರ್ಗಾಯಿಸಬೇಕೆಂದು ಮತ್ತೊಂದು ನಿರ್ಣಯದ ಮೂಲಕ ಒತ್ತಾಯಪಡಿಸ ಲಾಯಿತು. ಈ ಬೇಡಿಕೆಗೆ ಜನರ ಸಹ ಪಡೆಯಲು ಬಂಗಾಳದ ಜನ ಯತ್ನಿಸುತ್ತಿರುವುದಕ್ಕಾಗಿ ಅಭಿವಂದಿಸ ಲಾಯಿತು.

ಭಾಷಾವಾರು ಪ್ರಾಂತ್ಯ ಸಮ್ಮೇಳನದವರ ಸೂಚನೆ ಯಂತೆ ಸಂಯುಕ್ತ ಮಹಾರಾಷ್ಟ್ರ ಚಳುವಳಿಯನ್ನು ಧೀಂಗೆಗೊಳಿಸಲು ಹೈದರಾಬಾದಿನ ಸಾಹಿತ್ಯಕಾರರ ಶ್ರೀ ಪಿ. ದೇಶಪಾಂಡೆಯವರ ಅಧ್ಯಕ್ಷತೆಯಲ್ಲಿ ೨೦ ಜನರುಳ್ಳ ಸಮಿತಿಯೊಂದನ್ನು ಸ್ಥಾಪಿಸಲಾಯಿತು

ಅಕ್ಷರ ಮುಖ್ಯವು ಭಾಷೆ

೩ ದಿನಗಳ ಕಾಲ ನಡೆದ ಅಧಿವೇಶನವನ್ನು ಡಾ|| ಲಂಕಾಸುಂದರಂರವರು ಮುಕ್ತಾಯಗೊಳಿಸುತ್ತ ' ಭಾಷಾ ವಾರು ಪ್ರಾಂತ್ಯಗಳು ರಚಿಸಲ್ಪಟ್ಟರೆ ಆರ್ಥಿಕ ಮತ್ತು ಭೌಗೋಳಿಕ ಸಾಮರ್ಥ್ಯಕ್ಕೆ ನಿರ್ಬಾಧಿತವಾಗಿ ಪ್ರಜಾಪ್ರಭುತ್ವ ಕ್ಕೆಕ್ಕೆ ಭದ್ರವಾದ ತಳಹದಿ ಹಾಕಿದಂತೆ ಆಗುತ್ತದೆ. ಈಗ ದೇಶದಲ್ಲಿ ಒಂದು ಗುಂಪಿನವರು ಇನ್ನೊಂದು ಗುಂಪಿನವರನ್ನೆಷ್ಟೆ, ಒಂದು ಭಾಷೆಯು ಮತ್ತೊಂದು ಭಾಷೆಯನ್ನಷ್ಟೆ ಸೂರೆಗೊಳ್ಳುವ ಪ್ರಯತ್ನ ನಡೆಯು ತ್ತಿದೆ. ಈ ಬಗೆಯ ' ಸಿವಿಲ್ ಸಂಗ್ರಾಮ ' ನಡೆಯಲು ಬಿಡಕೂಡದು. ಭಾಷಾನುಗುಣ ಪ್ರಾಂತ್ಯರಚನೆ ಆಕ್ಷ

ಗತ್ಯ ಅದಾಗದಿದ್ದರೆ ದೇಶ ಛಿದ್ರವಾಗುವುದು ಖಂಡಿತ' ಎಂದರು

ಕಾಂಗ್ರೆಸ್ಸಿನ ಎರಡು ವರ್ಗಗಳಲ್ಲಿ ಅಂತರ ಹೆಚ್ಚುತ್ತಿದೆ

ಅದನ್ನು ಬೇಗನೆ ಸರಿಪಡಿಸದೇ ಇದ್ದರೆ ಸಂಸ್ಥೆಯ ಪತನ ಖಂಡಿತ

ಕಾಂಗ್ರೆಸು ಜನಮನ್ನಣೆ ಕಳೆದುಕೊಂಡಿರುವುದಕ್ಕೆ ಆಡಳಿತ ಕಾರ್ಯದಕ್ಷತೆಯಿಂದ ನಡೆಯದಿರುವುದೇ ಕಾರಣ, ಎಂಬುದಾಗಿ ಹೊಂಬಾಳೆ ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾದ ಶ್ರೀ ಎಸ್ ಕೆ ಪಾಟೀಲರು ನಿರಗಾಂ ಜಿಲ್ಲಾ ಕಾಂಗ್ರೆಸ್ ಸಮಿತಿ ಸಭೆಯಲ್ಲಿ ಭಾಷಣ ಮಾಡುತ್ತಾ ತಿಳಿಸಿದರು.

ಕಾಂಗ್ರೆಸ್ ಸರಕಾರದಲ್ಲಿ ಕಾಂಗ್ರೆಸ್ ಸಂಸ್ಥೆಯ ಪಾತ್ರವೇನು, ಆಡಳಿತ ಪಾತ್ರವೇನು ಎಂಬುದು ಜನ ಸಾಮಾನ್ಯರಿಗೆ ತಿಳುದು ಅದ್ದರಿಂದ, ಆಡಳಿತದ ಲೋಪಗಳ ಫಲವಾಗಿ ಇಡೀ ಸಂಸ್ಥೆಗೇ ಕೆಟ್ಟಹೆಸರು ಬಂದಿದೆ ಕಾಂಗ್ರೆಸ್ಸಿನಲ್ಲಿರುವ ಎರಡು ವರ್ಗಗಳವರಲ್ಲಿ ಅಂತರ ಹೆಚ್ಚಿ, ಅವೆರಡೂ ವಿರುದ್ಧ ರಾಜಕೀಯ ಪಕ್ಷಗಳ ಸ್ಥಿತಿಗೆ ಬಂದಿವೆ ಈ ಅಂತರವನ್ನು ಬೇಗನೆ ಸರಿಪಡಿಸಲು ಯತ್ನಿಸದಿದ್ದರೆ ಕಾಂಗ್ರೆಸ್ಸಿನ ಪತನ ಖಂಡಿತ, ಎಂದರು

ಚುನಾವಣೆಗಳಲ್ಲಿ ಗೆಲ್ಲಲು ಕಾಂಗ್ರೆಸ್ ಸಂಸ್ಥೆಯ ಬೆಂಬಲವನ್ನು ಪಡೆಯಲಾಗುತ್ತಿದೆ ಚುನಾವಣೆಗಳನ್ನು ಎದುರಿಸಬೇಕಾಗಿ ಒಂದಾಗಿ ಮತ್ತು ಜನತೆಯ ಬೆಂಬಲ ಪಡೆಯಬೇಕಾಗಿ ಬಂದಾಗಮಾತ್ರ ಸರಕಾರಕ್ಕೆ ಸಂಸ್ಥೆಯು ಜ್ಞಾಪಕ ಒರುತ್ತದೆ--ಎಂದರು

ಬಹುಮುಖ ಮಾರಾಟ ತೆರಿಗೆ ವಿಚಾರವನ್ನು ಅವರು ತಿಳಿಸುತ್ತ ಯಾವುದೊಬ್ಬ ಮಂತ್ರಿ ಮುಂದೆ ಒಂದು, ಈ ತೆರಿಗೆ ಅವಶ್ಯಕವೆಂಬುದನ್ನು ಜನತೆಗೆ ವಿವರಿಸಿಲ್ಲ ಈ ತೆರಿಗೆಯ ಹೇಗೆ ಅವಶ್ಯಕವೆಂಬುದನ್ನು ಜನತೆಗೆ ಮನ ಗಾಣಿಸುವ ಭಾರ ಪ್ರದೇಶ ಕಾಂಗ್ರೆಸ್ ಸಮಿತಿ ಮೇಲೆ ಬಿದ್ದಿದೆಯೆಂದು ಒಂದುವೇಳೆ ಸೋಲ್ತಿಸಿದರೂ ಕೂಡ ಸರಕಾರ ಈ ವಿಚಾರದಲ್ಲಿ ಸಮಿತಿಯ ಸಲಹೆ ಪಡೆದಿಲ್ಲ ಎಂದರು

ಈ ಸಂಬಂಧದಲ್ಲಿ ತಮಗೆ ಮುಖ್ಯಮಂತ್ರಿಗಳಿಂದ ಬಂದ ಪತ್ರವೊಂದರ ಬಗ್ಗೆ ಶ್ರೀ ಎಸ್ ಕೆ ಪಾಟೀಲರು ಪ್ರಸ್ತಾಪಿಸಿದರು

ತೆರಿಗೆಗಳನ್ನು ಹಾಕುವುದು ಸರಕಾರದ ಕೆಲಸ ಸರಕಾರವು ಅದನ್ನು ವಿಧಿಸುವುದು ಹೇಗೆ ಅನಿವಾರ್ಯ ವಾಯಿತೆಂಬುದನ್ನು ಜನತೆಗೆ ವಿವರಿಸುವುದು ಕಾಂಗ್ರೆಸ್ ಸಮಿತಿಗಳ ಕರ್ತವ್ಯ ಎಂದು ಶ್ರೀ ದೇಸಾಯಿಯವರು ಅದರಲ್ಲಿ ತಿಳಿಸಿದ್ದಾರೆ

ಅದಮ್ಮ ಬೇಗ ಸಚಿವರಾಗಬೇಕೆಂದು ಹಂಬಲಿಸು ತ್ತಿರುವ ಹೊಸ ಶಾಸನ ಸಭಾಸದಸ್ಯರನ್ನು ಶ್ರೀ ಎಸ್ ಕೆ ಪಾಟೀಲರು ಟೀಕಿಸಿದರು

ಇಂತಹ ವಾದಗ್ರಸ್ತ ಅಂತರಗಳು ಬಂದಾಗ ಪೂರ್ವ ಭಾವಿಯಾಗಿ ಸರಕಾರವು ಕಾಂಗ್ರೆಸ್ ಸಮಿತಿಗಳ ಸಲಹೆ ಪಡೆಯುವಂತೆ ಕಾಂಗ್ರೆಸ್ ಅಂಗರಚನೆಯಲ್ಲೇ ವಿಧಿಸ ಬೇಕು--ಎಂದರು

'ನಾನು ನನ್ನ ಸ್ವಂತ ಪತ್ರದ ವಿಚಾರದಲ್ಲಿ ಇಷ್ಟೆಲ್ಲ ಹೇಳಬೇಕಾಗಿ ಬಂದಿದೆ ಜನರು ನರಳುತ್ತಿರುವ ದನ್ನು ನೀವು ಕಣ್ಣಾರೆ ನೋಡಿದಾಗ ಸುಮ್ಮನಿರುವಿ ದಾದರೂ ಎಂತು ?' ಎಂದು ಕೇಳಿದರು

ಕೇಂದ್ರದ ಮತ್ತು ಸಂಸ್ಥಾನ ಶಾಸನ ಸಭೆಗಳ ಕಾಂಗ್ರೆಸ್ ಪಕ್ಷದವರು ಆಯಾ ಪ್ರಾದೇಶಿಕ ಕಾಂಗ್ರೆಸ್ ಸಮಿತಿಗಳ ಮತ್ತು ವರ್ಕಿಂಗ್ ಕಮಿಟಿಗಳ ಸಲಹೆ ಪಡೆದು ವರ್ತಿಸುವಂತೆ ಕಾಂಗ್ರೆಸ್ ಹೈಕಮ್ಯಾಂಡಿನವರು ತಕ್ಕ ಕಾರ್ಯಕ್ರಮ ರೂಪಿಸುವಂತೆ ಮಾಡಬೇಕೆಂದು ನಿರ್ಣಯವೊಂದರ ಮೂಲಕ ಪ್ರಾರ್ಥಿಸಲಾಯಿತು

ನೂತನ ದಂಡನಾಯಕರು

ಲೆ॥ ಜನರಲ್ ಮಹಾರಾಜ್ ರಾಜೇಂದ್ರ ಸಿಂಹ್ಜಿ ಯವರನ್ನು ಭಾರತದ ನೂತನ ದಂಡನಾಯಕರನ್ನಾಗಿ ನೇಮಿಸಬೇಕೆಂದು ತೀರ್ಮಾನಿಸಲಾಗಿದೆಯೆಂದು ಭಾರತ ಸಂಸ್ಥಾನದವರು ಪ್ರಕಟಿಸಿದ್ದಾರೆ ರಾಜೇಂದ್ರ ಸಿಂಹ್ಜಿ ಯವರು ೧೯೫೩ ನೇ ಜನವರಿ ೧೫ ರಿಂದ ನೂತನ ಪದವಿಯನ್ನು ವಹಿಸಿಕೊಳ್ಳುವರು ಈಗ ಅವರ ದಕ್ಷಿಣ ಕಮ್ಯಾಂಡಿನ ದಂಡನಾಯಕರಾಗಿದ್ದಾರೆ

ಕೊರಿಯಾ ಕದನ

ಮಂಚೂರಿಯ ಗಡಿಯಲ್ಲಿರುವ ಕಮ್ಯೂನಿಸ್ಟರ ನೆಂದು ಗುಂಡು ಕಾರ್ಖಾನೆಯ ಮೇಲೆ ಕಳೆದ ರಾತ್ರಿ ೧೪ ಸೂಪರ್ ಫಾರ್ಟ್‌ರೆಸ್ ವಿಮಾನಗಳು ಬಾಂಬು ಗಳನ್ನು ಹಾಕಿದುವೆಂದು ಅಮೆರಿಕಾ ವಿಮಾನದಳದ ಪ್ರಕಟಣೆಯಿಂದ ತಿಳಿದುಬಂದಿದೆ

ಸಿನಿಮಾ ನಟಿಯ ಕೈಸೆರೆ

ಸಿಯೋಲ್‌ಗೆ ಹೋಗುತ್ತಿದ್ದ ರೈಲಿನಮೇಲೆ ನೆರಿಲ್ಲಾ ಗೆಲು ದಾಳಮಾಡಿ, ಅಡ್ಮಿರಿಟರ್ ಎಂಬ ಸಿನಿಮಾ ನಟಿಯನ್ನು ಸೆರೆಹಿಡಿದರ ಯುದ್ಧರಂಗದಲ್ಲಿ ಸೈನಿಕರಿಗೆ ಮನರಂಜನೆಯನ್ನೊದಗಿಸಲು ಆಕೆಯು ಹೋಗು ತ್ತಿದ್ದಳು

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಸಟಿ (೬ನೆಯ ಆವೃತ್ತಿ)	...	...	೧ ಆಣೆ
ಸಚ್ಛಾಸಾಸ್ತ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	..		೧ ಆಣೆ
ಷಂಚಮಿವಂಶತಿ ಪ್ರಶ್ನಪ್ರಕಾಶ (೫ನೆಯ ಆವೃತ್ತಿ)			೧ ಆಣೆ
ಶ್ರೀಜಗದ್ಗುರು ರೇಣುಕಾಚಾರ್ಯ ಕೀರ್ತನ	...	...	೧ ಆಣೆ
ಶ್ರೀಪಂಚಾಚಾರ್ಯ ಮಂಗಳಸ್ತೋತ್ರಾವಳಿ (೧೧ನೆಯ ಆವೃತ್ತಿ)	...		೨ ಆಣೆ
ಶ್ರೀರೇಣುಕಾಷ್ಟಾಚಾರ್ಯಶತಕ (೨ನೆಯ ಆವೃತ್ತಿ)	...		೨ ಆಣೆ
ಶ್ರೀರುದ್ರಮುನಿವಾಚಾರ್ಯಶತಕ	...		೨ ಆಣೆ
ಶಿವಶಕ್ತಿವಿಲಾಸ			೨ ಆಣೆ
ವಿಜಯನಗರ ಸಾಮ್ರಾಜ್ಯವೂ ಶ್ರೀರೇಣುಕಾಚಾರ್ಯರೂ	...		೨ ಆಣೆ
ಬಿಲ್ವಮಾಹಾತ್ಮ್ಯ (೨ನೆಯ ಆವೃತ್ತಿ)	....	..	೨ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೧೦ನೆಯ ಆವೃತ್ತಿ)	...		೩ ಆಣೆ
ಆಸವಾದಿನಿಜತತ್ವದರ್ಪಣ (೫ನೆಯ ಆವೃತ್ತಿ)	....		೩ ಆಣೆ
ಪಂಚಾಚಾರ್ಯಪ್ರಕಾಶ	....		೩ ಆಣೆ
ಪಂಚಾಚಾರ ಪ್ರಕಾಶಿಕಾ	....		೩ ಆಣೆ
ಶ್ರೀಗುರುತತ್ತ್ವಪದಗಳು (೩ನೆಯ ಆವೃತ್ತಿ)	...		೪ ಆಣೆ
ವೀರಶೈವಾಚಾರವಿಧಿ (೪ನೆಯ ಆವೃತ್ತಿ)	...		೪ ಆಣೆ
ಲಿಂಗಧಾರಣವಿಧಿ	..	...	೪ ಆಣೆ
ವಿವಾಹವಿಧಿ (೪ನೆಯ ಆವೃತ್ತಿ)	....		೪ ಆಣೆ
ಶ್ರೀಪಶಿಪಂಡಿತಾರಾಧ್ಯರ ಕಾಲನಿರ್ಣಯ	..	....	೪ ಆಣೆ
ವೀರಶೈವ ಪ್ರಾಯಶ್ಚಿತ್ತವಿಧಿ	..	..	೪ ಆಣೆ
ವೈದಿಕವಾಕ್ಯೈರಹಸ್ಯ	...		೪ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೩ನೆಯ ಆವೃತ್ತಿ)	....		೪ ಆಣೆ
ಕೈವೋಪನಿಷತ್ಸಂಗ್ರಹ (ಸಂಸ್ಕೃತ) (೨ ನೆಯ ಆವೃತ್ತಿ)	....		೬ ಆಣೆ
ಸಚ್ಛಾಸಾಸ್ತ್ರಮವಿಮರ್ಶತತ್ತ್ವನಿರೂಪಣ (೩ನೆಯ ಆವೃತ್ತಿ)	....		೬ ಆಣೆ
ವೀರಶೈವಾ-ವೈಚಿತ್ರಿ-ಶ್ರಾದ್ಧವಿಧಿ	....	....	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ ಜಕ್ಕಣಸೆಜ)	...		೮ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ)	...	....	೮ ಆಣೆ
ವೀರಶೈವಮಹಾತ್ಮರು			೮ ಆಣೆ
ಬಸವಧ್ಯಾಂತದಿವಾಕರ (೩ನೆಯ ಆವೃತ್ತಿ)			೮ ಆಣೆ
ಆಗಮಪರಿಜ್ಞಾನ			೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)			೮ ಆಣೆ
ಶ್ರೀಜಗದ್ಗುರು ಶಿವಾನಂದವಿಜಯ	..		೮ ಆಣೆ
ಶ್ರೀಜಗದ್ಗುರು ವಿಶ್ವಕರ್ಣವಿಜಯ ನಕ್ಷತ್ರಮಾಲಿಕಾ			೮ ಆಣೆ
ಕನ್ನಡ ನ್ಯಾಯಶತಕರ್ಮ			೮ ಆಣೆ
ಸಿದ್ಧಾಂತಸಾರಾವಳಿ (ಶ್ರೀಲೋಚನಶಿವಾಚಾರ್ಯಕೃತ)			೧೨ ಆಣೆ
ಶಿಖಾಸೂತ್ರಸಿದ್ಧಾಂತದರ್ಪಣ			೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ಪ್ರಾಚೀನತ್ವ			೧ ರೂ
ಮಾಹೇಶ್ವರ ದೀಕ್ಷಾವಿಧಿ (೩ನೆಯ ಆವೃತ್ತಿ)			೧ ರೂ
ವಿವೇಕಮುಕ್ತಾವಳಿ			೧ ರೂ
ವಿಚಾರಸಾರಾವಳಿ			೧ ರೂ
ವೈದಿಕಶಿವಪೂಜಾವಿಧಿ (ವೈದಿಕಸ್ತರಯುಕ್ತಬಾಮದು ೨ನೆಯ ಆವೃತ್ತಿ)			೧॥ ರೂ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	..		೧॥ ರೂ
ಸಚಿತ್ರ ರೇಣುಕವಿಜಯ (೩ ನೆಯ ಆವೃತ್ತಿ)			೨ ರೂ
ಶಿವಾಗಮಸಂಗ್ರಹ: (ಚಂದ್ರಜ್ಞಾನಾಗಮ-ಶಾರದಾಗಮ-ಮಂಥಾನಾಗಮ ಸೂಕ್ಷ್ಮಾಗಮಗಳಿಂದ ಕಡಾರಿಯಲ್ಪಟ್ಟದು)			೨ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಛಾಯಾಚಿತ್ರ)			೨॥ ರೂ
ಸಿದ್ಧಾಂತಶಿಖಾಮಣಿ (ಸಂಸ್ಕೃತ ಟೀಕಾಸಹಿತ)	..		೩ ರೂ
ವೀರಶೈವರತ್ನ (೩ನೆಯ ಆವೃತ್ತಿ, ೩೦ ಮಹತ್ವದ ಫೋಟೋಗಳಿರುವವು)			೩ ರೂ
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೪೪ ಪುಟ)			೧೨ ರೂ
A brief life-sketch of Pandit Sri Kashinatha Shastrigu (*English*)			4 As
The Philosophical Aspect of Viraśaivism (*English*)			8 As
Speeches by Pandit Sh. Kashinatha Shastrigu (*English*)			12 As
ಶಿವಾಚಾರಚಂದ್ರಿಕಾ (ಸಂಸ್ಕೃತ)			೩ ಕ
ವೀರಶೈವರತ್ನ (ಮರಾಠಿ)			೧ ಕ
ಸಚ್ಛಾಸನಾರಾಯಣೋಪನಿಷತ್ (ವೀರಶೈವಭಾಷ್ಯ-ಸಂಸ್ಕೃತ)			೧ ಕ
ಸಂದೇಹವಿಷಾರಕಾರಿಕಾ (ಸಂಸ್ಕೃತ)	..		೨ ಆಣೆ

ಮ್ಯಾನೇಜರ್—ಶ್ರೀಪಂಚಾಚಾರ್ಯಾ ಎಲೆಕ್ಟ್ರಿಕ್, ಪ್ರೆಸ್, ಮೈಸೂರು

Edited, Printed and Published by Bruhanmath Mahadevaah at Shri Panchacharya Electric Press, Sayaji Rao Road, Mysore.

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯ ಪ್ರಸೀದಂತು ॥ REGISTERED No M 2266

ಪಂಚಾಚಾರ್ಯ ಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾತಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಲಸತ್ಪಂಚಾಕ್ಷರೀಮೋದಕರ್ । ಪಂಚಾಚಾರ್ಯಜಗದ್ಗುರೂತ್ತಮವರ್ ಪಾಲಿಪ್ಪುದೀಲೋಕನುಂ ॥

ಸಂಸ್ಥಾಪಕರು—ನಾಗನೂರು ಬೃಹನ್ಮಹಾಧ್ಯಕ್ಷರಾದ ವೇ॥ ಪಂ॥ ಶ್ರೀ ಶಾಶೀನಾಥಶಾಸ್ತ್ರಿಗಳವರು.

ಚಂದಾ ಪರಮ್ಮಳದವರಿಗೆ ೩ ರೂ ಸಂಪಾದಕರು—ನಾಗನೂರು ಬೃ॥ ಮಹಾದೇವಯ್ಯನವರು ವಿ ಪಿ ಖರ್ಚು ಸೇರಿ ೩ ರೂ ೬ ಆಣೆ

ಸಂಪುಟ ೫೬] ಸೋಮವಾರ ತಾ॥ ೧೧ನೇ ಸೆಪ್ಟೆಂಬರ್ ೧೯೫೨ [ಸಂಚಿಕೆ ೧೭

ಪತ್ರವ್ಯವಹಾರ

[ಚಾತ್ಮೀದಾರರು ಅಭಿಪ್ರಾಯ ಪಡುವ ಲೇಖನಗಳಿಗೆ ಶ್ರೀಕಾರ್ಯರು ಜವಾಬ್ದಾರರಲ್ಲ ಎಂಬ ವಿಷಯವನ್ನು ರೂಢಿ ಲಕ್ಷ್ಯದಲ್ಲಿಡತಕ್ಕದ್ದು —ಸಂ]

ಶ್ರೀಶೈಲಜಗದ್ಗುರು ವಾಗೀಶಪಂಡಿತಾರಾಧ್ಯ ಮಹಾಸ್ವಾಮಿಗಳವರ ಶ್ರಾವಣಮಾಸದ ಪಟ್ಟಾಭಿಷೇಕ ಸಮಾಪ್ತಿ ಸಮಾರಂಭ

ಪ್ರತಿವರ್ಷ ಪಟ್ಟಾಭಿಷೇಕ ಶ್ರಾವಣಮಾಸಾರಂಭದ ಸುಮಂಗಳಪ್ರದವಲ್ಲಿರುವ ಶ್ರೀಗಿರಿನಾಡಸೂರ್ಯಸಿಂಹಾಸನದಲ್ಲಿ ಶ್ರೀಜಗದ್ಗುರು ವಾಗೀಶಪಂಡಿತಾರಾಧ್ಯ ಮಹಾಸ್ವಾಮಿ ಮಹಾರುದ್ರಾಭಿಷೇಕವು ಆರಂಭವಾಗಿ ಅವಮಾಸ್ಯೆಗೆ ಮಹಾಪೃಥಿವದಿಂದ ಸಮಾಪ್ತಿಯಾಯಿತು ಲಿಂಗೈಕ್ಯರಾದ ಪಂಡಿತಾರಾಧ್ಯಮೂರ್ತಿಗಳ ಮಹಾಪೂಜೆಯು ಸಕ್ತಿಮಾನಿ ನಡೆಯಿತು ಕೊನೆಯ ದಿನ ಮಹಾಗಣರಾಧಕಿಯಾಯಿತು ಗುಂತಕಲ್ಲು ಮೈನಿರ್ಲಗ್ರಾಮಗಳ ಶಿಷ್ಯಕೋಟಿಯು ಈ ಮಹಾ ಪೂಜೆಯಲ್ಲಿ ಬಹುಭಕ್ತಿಯಿಂದ ಸೇವೆ ಸಲ್ಲಿಸಿ ಸರ್ವರೂ ಶೀರ್ಥಪ್ರಸಾದ ವಿಶಿಯೋಗವಾಗಿ ಜಗದ್ಗುರುಗಳ ಶ್ರೀ "ರುದ್ರಾಭಿಷೇಕದ ಮಹಿಮೆ" ವಿಜಾರವಾಗಿ ಮಾಡಿದರು. ಸರ್ವರಿಗೂ ಈ ಉಪದೇಶದಿಂದ ಸಂತುಷ್ಟರಾಗಿ ಜಗದ್ಗುರುಗಳನ್ನು ಕೊಂಡಾಡಿದರು ಸಂಜೆ ೯ ಘಂಟೆವರೆಗೆ ಇದವರೆಗೆಲ್ಲಾ ಭೋಜನವು ನಡೆಯಿತು ಅಂದು ಶ್ರೀ (ತಾ॥ ೨೦-೮-೫೨) ಪುನಃ ಶಿವಭಜನೆಯೊಡನೆ ಪಾಮಂಗಳಾರತಿಯೂ ಆಶಿರ್ವಚಲ್ಲಿತು ಈ ಸಂದರ್ಭದಲ್ಲಿ ಗುಂತಕಲ್ಲು ಮಾಸ್ಟರ್ ವೇ॥ ರಾಮಲಿಂಗಯ್ಯನವರಿಗೆ "ಸಂಗೀತಶುಕ" ಎಂಬ ಪ್ರಶಸ್ತಿಯೂ, ಹಂ ಜಂಬಯ್ಯನವರಿಗೂ, ಮತಪತ್ರಿ ವೀರಭದ್ರಯ್ಯನವರಿಗೂ, ಮೇದಾರ ತಿಪ್ಪಣ್ಣ ಅಂಬಾ ಟೈಲರ್ಸ್‌ರ್ಕೆಂಟ್ ಅವರಿಗೂ ರಜತಕಡಗಗಳು ಜಗದ್ಗುರುಗಳಿಂದ ಆಶೀರ್ವದಿಸಲ್ಪಟ್ಟು ಮಹಾಮಂಗಳಾರತಿಯ ಪಟ್ಟಾಭಿಷೇಕ ಸಮಾರಂಭವು ಸಮಾಪ್ತವಾಯಿತು

ಸಂಸ್ಥಾನದ ವಿಜಂಟರ್
ಯಂ. ಯಂ ನಾಗಯ್ಯ, ಗುಂತಕಲ್ಲು

ಶ್ರಾವಣಪೂಜಾಸಮಾಪ್ತಿ, ಕಂಪ್ಲಿ

ನೊದಲು ಪ್ರಳಯಿಪದಂತೆ ಶ್ರಿಮಾನ್ ಕಲ್ಲುಡಿ ಶರಪ್ಪನವರ ಗೃಹದಲ್ಲಿ ಶ್ರೀ ಹಂಪಿ ಗಾವಿರೇಶ್ವರ ಸ್ವಾಮಿಗಳವರು ಮಹಾಲಿಂಗ ಮಹಾ ಪಟ್ಟಾಭಿಷಕ್ತ ಪಂ॥ ಶ್ರೀ ಸಿದ್ಧಲಿಂಗಶಿವಾಚಾರ್ಯ ಮಹಾಸ್ವಾಮಿಗಳವರ ರುದ್ರಾಭಿಷೇಕ ತಾ॥ ೨೫-೮-೫೨ ಸೋಮವಾರ ಉದಯ ೬ ಘಂಟೆಯಿಂದ ೯ ಘಂಟೆಯವರೆಗೆ ಶ್ರೀ ರುದ್ರಾಭಿಷೇಕ, ಅಷ್ಟೋತ್ತರಬಿಲ್ವಾರ್ಚನೆ, ಅನ್ನಸಂತರ್ಪಣೆ ಈ ಕಾರ್ಯಗಳು ಬಹುಸಂಭ್ರಮದಿಂದ ಜರುಗಿದವು ೫ ಘಂಟೆಗೆ ಶ್ರೀಗಳವರು ತಮ್ಮ ಅಮೃತವಾಣಿಯಿಂದ ಭಕ್ತಮಂಡಳಿಗೆ ಮನಾನಂದನವಾಗುವಂತೆ ಸಾಮಾಜಿಕವಿಷಯದಲ್ಲಿ ಭಾಷಣನಾಡಿ ಶ್ರೀಶಂಕರಪ್ಪನವರಿಗೆ "ಸಕ್ಷೀನಾವಿರತ" ಎಂಬ ಪ್ರಶಸ್ತಿಯನ್ನು ಅಶೀರ್ವದಿಸಿ ಸಭಾಕಾರ್ಯಕ್ರಮವು ಮುಗಿಸಲ್ಪಟ್ಟಿತು

ಗುರುಸೇವಕ,
ಕೆ ಯಂ ಮಹಾಬಲೇಶ್ವರಶರ್ಮ, ಕಂಪ್ಲಿ

ಪುರಾಣಪ್ರವಚನಸಮಾಪ್ತಿ, ಧಾರವಾಡ

ತಾ॥ ೨೦-೮-೫೨ನೇ ಇಸ್ವಿ ನಂದನನಾಮ ಸಂವತ್ಸರ ಶ್ರಾವಣ ಶುದ್ಧ ೬ರಿಂದ ತಾ॥ ೨೯-೮-೫೨ರ ವರೆಗೆ ಧಾರವಾಡದ ಕಟ್ಟೀಮಠದಲ್ಲಿ ಶ್ರೀಮತಿ ತಾಂತಮ್ಮ ಕಟ್ಟೀಮಠ ಇವರಿಂದ ಪ್ರತಿದಿನ ಸಾಯಂಕಾಲದಲ್ಲಿ ಪ್ರವಚನರೂಪದಿಂದ ನಡೆಯುತ್ತಿ ಬಂದ ಶ್ರೀ ಯಡೆಯೂರು ಶ್ರೀದ್ವಲಿಂಗೇಶ್ವರವಿಜಯಪುರಾಣ ಸಮಾಪ್ತಿಯು ಒಳ್ಳೇ ವಿದ್ಯಾಭಕ್ತಿಯಿಂದ ನಡೆಯಿತು ಸಮಾಪ್ತಿನೇಳೆಗೆ ಶ್ರೀಯುತ ವೀರಬಸಯ್ಯನವರು ವಸ್ತ್ರದ ಸಾಕೀನ ಶಿರೋಳ ಇವರು ಧಾರ್ಮಿಕಜೀವನದಲ್ಲಿ ಶ್ರೀಯರ ಶತ್ರ್ಯಗಳ ಒಗ್ಗಿ ವೀರಶೈವಧರ್ಮದಲ್ಲಿರುವ ಆವಶ್ಯನೆಯಗಳ ಬಗ್ಗೆ ತಿಳಿಸಿ, ಶ್ರೀಯರಿಂದಲೇ ಧರ್ಮಜಾಗ್ರತಿಯಾಗುವದೆಂದು ಹೇಳಿದನಂತರ ಮಂಗಲವಾಗಿ ಪಂಚಾಚಾರ್ಯರ ಜಯಘೋಷದೊಂದಿಗೆ ಕೊನೆಗೊಂಡಿತು

ಅನುಷ್ಠಾನ ಹಾಗೂ ಶ್ರೀಶರಣಬಸವೇಶ್ವರ ಪುರಾಣಸಮಾಪ್ತಿ ಮಹೋತ್ಸವ, ಹೊಂಬಳ

ಧಾರವಾಡ ಜಿಲ್ಲಾ ಗದಗ ತಾಲೂಕ ವೈಕೆ ಹೊಂಬಳ ಗ್ರಾಮದ ಶ್ರೀ ಪ್ರಭುಸ್ವಾಮಿಮಠದಲ್ಲಿ ಗದಗ ಶ್ರೀ ಜಗದ್ಗುರು ರೇಣುಕಾಚಾರ್ಯಮಂದಿರ ಸಂಸ್ಥಾಪಕರೂ ಧರ್ಮೋಧ್ಧಾರಕರೂ ಆಚಾರ್ಯತತ್ತ್ವ ಪ್ರಕಾಶಕ ಪದವೀಪ್ರದಾನವಿಭೂಷಿತರೂ ಆದ ಶ್ರೀ ಜಗದ್ಗುರು ಪಂಡಿತ ಶ್ರೀ ರೇವಣಸಿದ್ಧ ಶಿವಾಚಾರ್ಯಮಹಾಸ್ವಾಮಿಗಳವರು ಗುರು-ಸಂಸ್ಥಾನ ಬೃಹತ್ಮಠ ಚಳ್ಳಕೆರೆ ಮಣ್ಣೂರು ಈ ಪೂಜ್ಯಾಚಿಪರಿಗಳವರ ಅಧ್ಯಕ್ಷತೆಯಲ್ಲಿ ಅನುಷ್ಠಾನ-ಪುರಾಣಪರಿಸಮಾಪ್ತಿಗಳು ದಿನಾಂಕ ೨೧-೮-೫೨ನೇ ಗುರುವಾರದಿಪ ಜರುಗಿದವು ಭಕ್ತ ಮಹೇಶ್ವರರು ಬಹು ಭಕ್ತಿಯಿಂದ ಪಲ್ಲಕ್ಕಿಯಲ್ಲಿ ಶ್ರೀ ಲಿಂಗೋದ್ಭವ ಮೂರ್ತಿ ಮಣ್ಣೂರು ರೇಣುಕಾಚಾರ್ಯರ ಮೂರ್ತಿಯನ್ನು ಹಾಗೂ ಶ್ರೀ ಶರಣಬಸವೇಶ್ವರಪುರಾಣವನ್ನು ಮೂರ್ತಗೊಳಿಸಿ ಪುಷ್ಪನಾಲೆಗಳನ್ನು ಹಾಕಿ ಮೆಳರ ತೋರಣ, ಹೆಗಲದೀವಟಿಗೆ, ಭತ್ತಜ್ಯಾಮರ, ಅಶ್ವಗಿರಿ, ನಿಶಾನಿ, ಕಾಳೆ ಡೊಳ್ಳು ಬ್ಯಾಂಡು ಶ್ರೀಜಗದಾಚಾರ್ಯರ ಭಜನೆಗಳು ಸ್ಥಳೀಯ ಸುಮಂಗಲೆಯರಿಂದ ಹಿಡಿಯಲ್ಪಟ್ಟ ೩೦೦ ಆರತಿಗಳೊಂದಿಗೆ ಒಳ್ಳೆ ವಿಜೃಂಭಣೆಯಿಂದ ಉತ್ಸವ ಪ್ರಾರಂಭಕಾಲ ೮ ಘಂಟೆಯಿಂದ ಹೊರಟು ಮಳಕ್ಕೆ ೧೨ ಘಂಟೆಗೆ ಸೇರಿತು ಗಣಾಂಥನೆ ನಡೆಯಿತು ಬಳಗಾನೂರು ವೆಂಕಟಾಪುರ ಲಿಂಗದಾಳ, ಗದಗ ಬ್ಯಾಂಡಿನವರಿಗೂ ಉಳಿದ ಮೇಳದವರಿಗೂ ಮಹಾಸ್ವಾಮಿಗಳವರು ಮೆಚ್ಚಿ ವಸ್ತ್ರಿರಿ ಕೊಟ್ಟು ಫಲಾಶೀರ್ವಾದಮಾಡಿದರು ಸಾಯಂಕಾಲ ೬ ಘಂಟೆಗೆ ಪುರಾಣ ಹಾಗೂ ಮಹಾಸ್ವಾಮಿಗಳವರ ವ್ಯಾಖ್ಯಾನಗಳು ನಡೆದವು ಶ್ರೀ ವೇ॥ ಈಶ್ವರಯ್ಯಶಾಸ್ತ್ರಿಗಳು ಹಿರೇಮಲ್ಲಶಲವಡಿ ಇವರಿಗೆ ಪುರಾಣಧುರೀಣ' ಎಂಬ ಪದವಿಯನ್ನು ಮಹಾಸ್ವಾಮಿಗಳವರು ಕೊಟ್ಟರು ಹಾಗೂ ಶ್ರೀ ವೇ॥ ಚೆನ್ನವೀರಯ್ಯನವರು ಸಾಲೀಮಠ ಪಾಟಿನಾಗ ಇವರಿಗೆ 'ಸುಗೀಕಭೂಷಣ' ಎಂಬ ಪ್ರಶಸ್ತಿಯು ಕೊಡಲ್ಪಟ್ಟಿತು ಈ ಪ್ರಕಾರ ಎಲ್ಲಾ ಕಾರ್ಯಗಳು ಸುಗಮವಾಗಿ ನಡೆದವು ಈ ಕಾರ್ಯಕ್ಕೆ ಹೊಂಬಳ ಭಕ್ತವರ್ಗದ ಭಕ್ತಮಹೇಶ್ವರರು ಶ್ರೀ ಪಜ್ಜರುಗಳವರೆಗೆ ಶ್ರೀ ಶರಣಬಸವೇಶ್ವರರ ಗದ್ದುಗೆಯನ್ನು ಮಾಡಿ ಬಹು ಪುಣ್ಯಕೇಷ್ಟಗಳಿಗೆ ಭಾಗಿಗಳಾದರು ಯಾವತ್ತು ಜನಗಳಿಗೆ ಗುರುಪಾದನ್ನು ಉತ್ತರೋತ್ತರ ಸುಖನನ್ನೀಯಲೆಂದು ಹಾರೈಸುವ,

ಫಕೀರಪ್ಪ ಶಂಕರಪ್ಪ ಬಿದರಿ

ಸ್ವೀಕಾರ

ಶಿವಮೊಗ್ಗ ಜಿ॥ ಸಾಲೂರು ಗ್ರಾಮವಾಸಿಗಳಾದ ಶ್ರೀ ಸುರಗಿಹಳ್ಳಿ ಶಿವರುದ್ರಪ್ಪನವರು ಶಾಖಾಜಮಾಡಿಸಿದ ಸಮಯದಲ್ಲಿ ಪ್ರಭಾಪ್ರೇಷಣಕ್ಕಾಗಿ ಸಮರ್ಪಿಸಿದ 2 ರೂ. ಗಳು ವೇ॥ ಶಿವಮೂರ್ತಾರಾಧ್ಯರ ದ್ವಾರಾ ಸಲ್ಲಿರುತ್ತವೆ

ಧಾರವಾಡ ಕಟ್ಟೀಮಠದಲ್ಲಿ ನಡೆದ ಪುರಾಣಸಮಾಪ್ತಿ ಕಾಲಕ್ಕೆ ಪ್ರಭಾಪ್ರೇಷಣೆಗಾಗಿ ಸಮರ್ಪಿಸಿದ 2 ರೂ. ಗಳು ಶಾಂತಮ್ಮ ಕಟ್ಟೀಮಠ ಇವರಿ ದ್ವಾರಾ ಸಲ್ಲಿರುತ್ತವೆ

ಧಾರವಾಡ ಜಿ॥ ಹೊಂಬಳ ಗ್ರಾಮದಲ್ಲಿ ನಡೆದ ಅನುಷ್ಠಾನ ಮುಕ್ತಾಯದ ಸಮಯದಲ್ಲಿ ಪ್ರಭಾಪ್ರೇಷಣೆಗೆಂದು ತೆಗೆದ] ೨೫ರಾಯಿ ಚಳ್ಳಮಣ್ಣೂರು ಶ್ರೀಗಳವರ ದ್ವಾರಾ ಸಲ್ಲಿರುತ್ತವೆ.

ಈ ಮೇಲ್ಕಂಡ ಮಹಾತಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ಶುಭ್ಯಮಂಗಲವಪ್ಪಿಯಲೆಂದು ಹಾರೈಸುತ್ತೇವೆ

॥ ಶ್ರೀವೀಷ್ಟಿಗದ್ದುರು ಪಂಚಾಚಾರ್ಯಾಃ ಪ್ರಸೀದಂತು ॥

ಶ್ರೀಜಗದ್ಗುರು ಕೇದಾರಪೀಠದ ಸಮಾಚಾರ

ಶ್ರೀಮದ್ರಂಭಾಪುರೀ ವೀರಸಿಂಹಾಸನಾಧೀಶ್ವರ ಶ್ರೀ ೧೦೦೮ ಒಗದ್ಗುರು ಪ್ರಸನ್ನ ವೇಣುಕ ವೀರಗಂಗಾಧರ ರಾಜೇಂದ್ರಶಿವಾಚಾರ್ಯಮಹಾಸ್ವಾಮಿಗಳವರು ಉಳಿದ ತ್ರಿಪೀಠಾಧಿಪತಿಗಳಿಗೆ ಆಸ್ಪದೆ ಕೊಡಿಸಿದ ಪತ್ರಗಳ ಸಾರಾಂಶ —

ಮಹಾಸ್ವಾಮಿಗಳವರ ಚರಣಸನ್ನಿಧಾನಂಗಳಲ್ಲಿ ಕ್ಷಿತಾನಂತ ತಿರಸಾಷ್ಟಾಂಗ ವಂದನೆಗಳು ಮಹಾಸ್ವಾಮೀ ಶ್ರೀ ॥ ॥ ಕೇದಾರಪೀಠದ ಸಂಗತಿಯು ಯಾವ ಮಟ್ಟಿಗಲ್ಲಿ ಉಳಿದಿದೆ ' ಮುಂದಿನ ಆದರೆ ಸ್ಥಿತಿಗತಿಗಳೇನು ಎಂಬುದರ ಬಗ್ಗೆ ಈವರೆಗೆ ಯಾವ ನಿರ್ಣಯವೂ ಆಗಲಿಲ್ಲವಾಗಿ ತೋರುತ್ತದೆ ಅಲ್ಲಿಯ ಪರಿಸ್ಥಿತಿಯನ್ನು ಕಾನೂನುಬದ್ಧವಾಗಿ ವಿಚಾರಿಸಿ ಮುಂದಿನ ಕಾರ್ಯಕ್ರಮಗಳನ್ನು ಕೈಕೊಳ್ಳುವದು ಹಿತಕರ ಪಕ್ಷಸಾಂತ ದರ್ಪ ಪ್ರಯೋಗ, ಕಾಪಟ್ಯ ಮುಂಗೈಜೋರುಗಳು ಕಾರ್ಯಸಾಧನೆಯ ಸಕ್ಷರಣಗಳಲ್ಲ ಎಲ್ಲವೂ ಕೊನೆಯ ಮಟ್ಟಕ್ಕೆ ಬಂದಿರುವಾಗ ಸ್ಥಿತಿಯು ಮತ್ತಷ್ಟು ವಿಷಮವಾದರೆ ಪಟ್ಟ ಶ್ರಮ, ಪ್ರಯತ್ನಗಳು ವಿಫಲವಾಗಬಹುದು ಸೂಕ್ಷ್ಮವಾಗಿ ಪರಿಶೀಲಿಸಿದರೆ ಆಂತರಿಕ ವಾತಾವರಣವು ಬಹು ದೂಷಿತವಾಗಿ ತೋರುತ್ತದೆ ಈ ಬಗ್ಗೆ (ನಂದವ ಸಂ॥) ಆಷಾಢ ಅಮಾವಾಸ್ಯೆಯೊಳಗೆ ಸರಿಯಾದ ವೈವಸ್ಥೆಯಾಗಬೇಕು ಇದನ್ನು ಆಲಕ್ಷಿಸಿದಲ್ಲಿ ಶ್ರಾವಣ ಶು॥ ಪ್ರತಿಪದೆಯಿಂದ ಉಗ್ರೋತ್ಸವವನ್ನು ಕೈಕೊಂಡು ನಿಜಸಂಗತಿಗಳ ವಿಮರ್ಶಕ್ಕಾಗಿ ದೊಡ್ಡ ಕೋಲಾಹಲವನ್ನೇ ಎಬ್ಬಿಸಲಾಗುವುದು ಈ ವಿಚಾರವಾಗಿ ಈಗ ಹೆಚ್ಚಾಗಿ ನಿವೇದಿಸಲಾಗದು ಸ್ವಾಧೀಯ ಸತ್ಯಪರೀಕ್ಷಾ ಕಾಲವು ಸಮೀಪಿಸುತ್ತಿರುವಾಗಿದ್ದು ನಿಜಸಂಗತಿಯನ್ನು ನಿವೇದಿಸಿಕೊಳ್ಳಲಾಗಿದೆ ಇತ್ಯನಂತ ಶಿ॥ ಸಾ॥ ನೆ॥ ಗಳು ಮುಕ್ಕಾಂ ಆಗಡಿ ತಾಲ್ಲೂಕು ಹುಬ್ಬಳ್ಳಿ ಜಿಲ್ಲಾ ಧಾರವಾಡ

ಇದನ್ನನುಸರಿಸಿ ೨೦ ೭ ೫೨ ಕ್ಕೆ ಆಗಡಿ ಮುಕ್ಕಾಮಿಗೆ ಶ್ರೀ ಗುಜ್ಜೆ ಸೀ ಜಗದ್ಗುರುಗಳು ಆಗಮಿಸಿ ತಮ್ಮ ಅಭಿಪ್ರಾಯವನ್ನು ಸೂಚಿಸಿದ ಮೇರಿಗೆಯೂ ಉಳಿದ 'ರಂಭಾಪೀಠಿಗಳು ಪತ್ರದ್ವಾರ ತಮ್ಮ ಅಭಿಪ್ರಾಯ ಗಳನ್ನಿತ್ತುದರ ಪರಿಣಾಮವಾಗಿಯೊ ಉಗ್ರೋತ್ಸವಾದಿ ಸವತಸನ್ನು ಕೈಕೊಳ್ಳದೆ ಈ ಕೆಳಗಿನಂತೆ ಹುಕುಂ ದುಃಖಾಲಿಸೋಣವಾಗಿದೆ

೬ ೭೦ ಗೆ ಸಂ ೧
ತಾ|| ೨೨ ೭ ೫೨

ಶ್ರೀ ರಂಭಾಪುರೀ ಜಗದ್ಗುರು ಮಹಾಸನ್ನಿಧಿಯಿಂದ

ಶ್ರೀಕ ಸಾಸಾಪ್ರತಿರಾದ ಭಾರತದ ನಾನಾ ಭಾಗಗಳಲ್ಲಿ ವಾಸಿಸುತ್ತಿರುವ ಸಮಸ್ತ ಶಿಷ್ಯಮಂಡಲಿಗೆ ಸನ್ಮಂಗಲಾನುಗ್ರಹವಂತು ಇತ್ಯಾತೀರ್ವಾಜನಪೂರ್ವ ಕ ಅಭ್ಯುತೆಕೆಂದಿರುವದೇನೆಂದರೆ ಶ್ರೀಮದ್ಜಗದ್ಗುರ್ವೆನೆ ಮಹಾಮತ ಸ್ಥಾಪನಾಚಾರ್ಯಾ ಜಗದ್ಗುರು ಪಂಚಾಚಾರ್ಯ ಪಂಚಪೀಠಗಳಲ್ಲಿ ಒಂದಾದ ಶ್ರೀ ಹಿಮವತ್ಕೇದಾರ ಜಗದ್ಗುರು ವಿಕೋರಾಮಾರಾಧ್ಯ ಪೀಠವು ಕೆಲವು ವರ್ಷಗಳಿಂದ ವ್ಯಾಜ್ಯಕ್ಕೊಳಪ್ಪಟ್ಟು ವಿಸ್ತೀರ್ಣವಾಗಿದ್ದು ಸನ್ ೧೯೧೧ ನೆಯ ಶ್ರೀ ಪೀಠದ ಸ್ವಾಮಿಗಳನುಸರಿಸಿ ಆ ಪೀಠದ ಹಕ್ಕುದಾರರಾದ ಶ್ರೀ ಕೆ ಲಾಸಲಿಂಗತಿವಾಚಾರ್ಯರು ಪೀಠದ ಸುವ್ಯವಸ್ಥೆಗಾಗಿ ಕಾನೂನಿನಂತೆ ಕಾರ್ಯಕ್ರಮಗಳನ್ನು ಕೈಕೊಂಡು ಇತರೇ ಸಿ ರಾಚಾರ್ಯರಿಂದಲೂ ಸಮಾಜದಿಂದಲೂ ಧನಸಹಾಯ ಹೊಂದಿ ಕೋರ್ಟಿನಲ್ಲಿ ಹೋರಾಡಿ ದಕ್ಷಿಣ ದೇಶದ ಜಂಗಮ ಬ್ರಹ್ಮಚಾರಿಗಳೇ ' ಶ್ರೀ ಕೇದಾರ ಪೀಠದ ಅಧಿಪತಿಗಳಾಗಬೇಕೆಂದು ಸಿದ್ಧಪಡಿಸಿದರು

ತರುವಾಯ ಇತ್ತೀಚೆಗೆ ಸ್ಕಾದುರ್ಬವಿಸಿದ ಒದರೀ ಕೇವಾರ ಟೆಂಸಲ್ ಕಮೀಟಿಯು ಸಂ॥ ಶ್ರೀ। ವಿಶ್ವನ ಧಲಿಂಗರನ್ನು ರಾವೆಲರನ್ನಾಗಿ ಕರೆದಿರುವದು ಸವ ರೃತ ಆದರೆ ಇಪ್ಪರಿಂದ ಮಹಾಪೀಠದ ಸ್ವತಂತ್ರ ಸರ್ವಾಧಿಕಾರಿಗಳು ಶ್ರೀ ಪೀಠಾಧಿಪತಿಗಳಿಗೆ ದೊರೆಯಲಾರವೆಂದೂ ಹೆಚ್ಚಿನ ಹಕ್ಕುಗಳನ್ನು ಪಡೆಯಲು ಕೋರ್ಟಿನಲ್ಲಿ ಹೋರಾಡುವದೇ ಸರ್ವಫಲಪ್ರದಿಯಸಾಧನವೆಂದೂ ಈಗ ದೊರೆತಿರುವ ಪಾವನ್ನೇ ನಂಬಿ ಕೋರ್ಟಿನ ವ್ಯವಹಾರವನ್ನು ನಿಲ್ಲಿಸುವದು ಸರಿಯಲ್ಲವೆಂದೂ ಕಾನೂನು ತಿಳಿದ ಜನೇಕರು ಘಂಟಾಘೋಷವಾಗಿ ತಮ್ಮ ತಿಪ್ರಿಪ್ರಾಯಗಳನ್ನು ವ್ಯಕ್ತಪಡಿಸುತ್ತಾರೆ ಇತರೇ ಪೀರಾಚಾರ್ಯರ ಅಪಿಪ್ರಾಯವೂ ಹೀಗೆಯೇ ಇರುವುದು

ಶ್ರೀ ಕೇದಾರ ಪೀಠದ ವ್ಯಾಜ್ಯವು ಟೆಂಪಲ್ ಕಮೀಟಿಗಿಂತಲೂ ಸೂರ್ಯಚ್ಛೆಂದೂ ಕಮೀಟಿಯು ಶ್ರೀ ಮಹಾಪೀಠದ ಸ್ವಾತಂತ್ರ್ಯಗಳನ್ನು ವಶಪಡಿಸಿಕೊಂಡಿರುವದು ನ್ಯಾಯಬದ್ಧವಾದುದಲ್ಲವೆಂದೂ ಬಂದು ಸ್ವತಂತ್ರ ಸಂಸ್ಥೆಯು ಮತ್ತೊಂದು ಸಂಸ್ಥೆಯ ಕೆಳಗಿರುವದು ಅಕ್ರಮಬದ್ಧವಾದುದೆಂದೂ ಕಾನೂನು ಬಲ್ಲವರೆ ಅಭಿಪ್ರಾಯವಾಗಿದೆ

ಈ ಕಾರಣದಿಂದ ಹಕ್ಕುದಾರರಾದ ಶ್ರೀ ಕೈಲಾಸಲಿಂಗರು ಕೋರ್ಟಿನ ಕೊನೆಯ ತೀರ್ಮಾನದ ವರೆಗೆ ಹೋರಾಡುವದು ಅನಿವಾರ್ಯವಾಗಿದೆ ಇದು ಕೊನೆಯ ಪ್ರಯತ್ನ ಹಿಂದೆ ಸಹಾಯ ಮಾಡಿದಂತೆ ಇಂದೂ ಶ್ರೀ ಮಹಾಪೀಠದ ವಿಷಯದಲ್ಲಿ ಸ್ಮರಿಸಿ ಹಕ್ಕುಳ್ಳ ಶ್ರೀ ಕೈಲಾಸಲಿಂಗತಿವಾಚಾರ್ಯರಿಗೆ ಧನಸಹಾಯವನ್ನು ನೀಡಿ ಪೂರ್ಣಾಕೇರ್ತಿಗೆ ಭಾಜನರಾಗುವುದಲ್ಲದೆ, ಶ್ರೀ ಮಹಾಪೀಠದ ವೈಭವವನ್ನು ನೋಡಿ ಆನಂದಿಸಲು ಸದಾ ಸಿದ್ಧರಿರತಕ್ಕದ್ದು ಈಬಗ್ಗೆ ಶ್ರೀ ಮಹಾಪೀಠಾಧಿಪಾಭಿಗಳಾದಂಥ ಧರ್ಮಶ್ರೀಮಿಗಳಿಗೆ ಅಧಿಕವಾಗಿ ಆಜ್ಞಾಪಿಸುವ ದೇನೂ ಇರುವುದಿಲ್ಲ.

ತಾ| 22-7-1952
ಮುಕ್ಕಾಂ—ಆಗಡಿ
ಪೋ॥ ಅರೇಕಟ್ಟಿ
ತಾಲೂಕು—ಹುಬ್ಬಳ್ಳಿ

ಸಮಸ್ತ ಸನ್ಮಂಗಲಾಭಿಧಮಂತಿತ್ಯಾಶಿಸಃ

ದನಗಳಿಗೆಳೆ ಎಲೆಪ್ರೀತಿಯು ।
ಜನಗಳಗದರಿಂದ ತಂಪುನೆಳಲಾಗುವುದು ॥
ಅನುಕೂಲ ಒಲೆಗೆ ಒಣಾಲೆ ।
ದಿನದಿನವದಿಯಲ್ಲಿ ಚೆಲ್ಲೆ ಗೊಬ್ಬರವಹುದು ॥೩

ಅಕ್ಕಿಯ ತಳಿಸುವ ಒಪ್ಪಕೆಯು ।
ಹಕ್ಕೆಗಳಲ್ಲಿರುವ ದವನ ಗೂಟಗಳದರಿಂ ॥
ಒಕ್ಕುವಮೇಟೆಯು ಮರದಿಂ ।
ದಿಕ್ಕುವ ಕದ ಹೊರಸು ರಾಟೆ ಹುಟ್ಟುಗಳದರಿಂ ॥೪॥

ಮಡಿಗಿಗೆ ಕಟ್ಟಿಗೆಬೇಕದು ।
ಅಡಿಗೆಗೆ ಕಟ್ಟಿಗೆಗಳಂತು ಬೇಕೇ ಬೇಕ್ಕೆ ॥
ಬಡಿಗೆಗೆ ಸಹ ಕಟ್ಟಿಗೆ ಬೇ ।
ಕಡಿಗಡಿಗೀ ಗಿಡದಗಕ್ಕ ಜನಗಳಿಗುಂಟು ॥೫॥

ಕೂಡುವ ಖುರ್ಚಿಯು ಕಟ್ಟಿಗೆ ।
ಹಾಡುವ ಪೆಟ್ಟಿಗೆಯು ಮೇಜು ಸಂದುಳ ಕಟ್ಟಿಗೆ ॥
ಹೂಡುವ ರಂಟೆಯು ಕಟ್ಟಿಗೆ ।
ನೋಡಿದ ಕಡೆಗೆಲ್ಲ ದಿವ್ಯಕಟ್ಟಿಗೆ ತೋರ್ಪುದ್ ॥೫॥

ಹೊಗೆಬಂಡಿಗೆ ಕಟ್ಟಿಗೆ ಬೇ ।
ಕುಗಿಹಡಗಕೆ ಬೇಕು ದಿವದ ಕಟ್ಟಿಗೆಯದರಿಂ ॥
ಬಗೆಬಗೆಯ ಯಂತ್ರಗಿರಡಿಗಳ್ ।
ಸಗದಿರೆ ಕಟ್ಟಿಗೆಯು ನಿಂತುಹೋಗುವವನಿಕಂ ॥೬॥

ಕಟ್ಟಿಗೆ ಕಡಿಯುವರೆಹ್ಯೋ ।
ಸುಟ್ಟದ್ದಲಿಸಾಡಿ ಮಾರಬಲ್ಲವರೆಹ್ಯೋ ॥
ಹುಟ್ಟಿಸಬಾರದೆ ಗಿಡಗಳ ।
ಸೃಷ್ಟಿಯಸಾಲವನುಳಿಪ್ಪು ಮುಟ್ಟಿಸಬೇಕ್ಕೆ ॥೭

ಗಿಡಒ ದಂಕಡಿದವಗಡ ।
ನಡವಿಯೊಳ್ಳೆದನ್ನು ಹಚ್ಚಿಡಿಬೆಸುವಡೆಂದುಂ ॥
ಇಡಿನಾಡಿಗೆಲ್ಲ ಕಾಯಿದೆ ।
ಪಡನೂಡದೆ ಮಾಡಿರೆಂದು ಬೇಡುನೆಮುದದಿಂ ॥೮

ವಾರ ಭವಿಷ್ಯ

ಲೇ ಯದರ್ಶೀ ವಾರಶಿಲಾಧ್ಯಾಪಕ ಕೋ॥ವರ್ಸಾರ್ತರ
ಸೇ। ರುದ್ರಾರಾಧ್ಯಶಾಸ್ತ್ರಿಗಳು

(ತಾ|| ೭ ೯ ೫೨ ರಿಂದ ತಾ|| ೧೪ ೯ ೫೨ ರ ವರೆಗೆ)

ಮೇಷ—ಈ ವಾರದಲ್ಲಿ ಈ ರಾಶಿಯವರಿಗೆ ಸುಖ ಲಾಭ ಕಡಿಮೆ ಇದೆ

ವೃಷಭ—ಈ ವಾರದಲ್ಲಿ ಸುಖದುಃಖಗಳ ಮಿ ಫಲವುಂಟು

ಮಿಥುನ—ಶರೀರವ್ಯಾಧಿ, ಧನವ್ಯಯ, ಜ ಕಡಿಮೆಯಾಗುವದು

ಕರ್ಕ—ಕನ್ನಡಿಯಲ್ಲಿಯ ಪಕ್ಷಾನ್ನ ದಂತೆ ಸು ತೋರಿ ಅಡಗುವದು

ಸಿಂಹ—ದುಡಿತದಂತೆ ಫಲವಿಲ್ಲ ಅದರೂ ಈಶ್ವ ರಾಧನೆಬೇಕು

ಕನ್ಯಾ—ಸುಖಬಂತೆಂದು ಹಿಂದುಮುಂದಿನ ಯೋ ಚನೆ ಬಿಡುವಾರದು, ಶಾಂತಿ, ಹುಷಾರಿ

ತುಲಾ ಸುಖದುಃಖಮಿಶ್ರಿತಯೋಗವುಂಟು ಸ ಸಂಗ್ರಹಮಾಡಿರಿ

ವೃಶ್ಚಿಕ—ಸಾಧಾರಣ ಸುಖವುಂಟು ಇದರ ಜಪಬಲಕ್ಕಿಂತ ಗುರುದೇವತೆಗಳ ಬಲ ಪಡೆಯಿರಿ

ಧನು—ಬಂಧು, ಪರಸ್ಥಳ ವ್ಯಾಜ್ಯ ಇವುಗಳಿಂ ಕಷ್ಟವುಂಟು

ಮಕರ—ಈ ವಾರದಲ್ಲಿ ಕಷ್ಟದೂರಾಯಿತು ಶ ದೇವರ ಪೂಜೆಮಾಡಿರಿ

ಕುಂಭ—ಸುಖವು ಸಹವಾಸದಲ್ಲಿದೆ ನವಗ್ರಹ ಪೂಜೆ, ಸೈವೇದ್ಯ ಇರಿರಿ.

ಮೀನ—ಸಾಕಷ್ಟವಿಷಯ, ವ್ಯವಹಾರ, ಬಂಧ ಸುಖ ಇವುಗಳಲ್ಲಿ ಸುಖವಿದೆ ಆದರೂ ಎಚ್ಚರಿಕ ಇರಬೇಕು.

ಗಿಡಗಳ ಅವಶ್ಯಕತೆ

(ಲೇ—ಶ್ರೀವಿರೂಪಾಕ್ಷಶಾಸ್ತ್ರೀ ಪುರಾಣಿಕಮಠ, ಹಿರೇಹಡಗಲಿ)

ದೇಶದಲ್ಲಿ ಸರ್ವತ್ರ ಗಿಡಮರಗಳ ಅಭಿವೃದ್ಧಿಯಾಗುತ್ತಿರುವದರಿಂದ ಪರಿಮಳಪುಷ್ಪಗಳೂ, ಫಲಗಳೂ, ಸುಗಂಧಯುಕ್ತವಾಯುಸಂಚಾರವೂ ಏಏಲವಾಗಿ ದೊರೆಯುವವಲ್ಲದೆ ಮೇಘರಾಜನು ಕಾಲಕಾಲಕ್ಕೆ ಸುವೃಷ್ಟಿಗರೆಯುತ್ತಾ ಜಡಜೀವನವು ಸುಖಮಯವಾಗಿರುವುದು ಆದುದರಿಂದ ಸರ್ವರೂ ತಮ್ಮ ಹೊಲ, ಗದ್ದೆ, ಮನೆಗಳ ಮತ್ತಿತ್ತು ಭೂಮಿಗಳಲ್ಲಿ ಗಿಡಗಳನ್ನು ಅತ್ಯವಶ್ಯವಾಗಿ ಬೆಳೆಯಿಸಬೇಕು ಈ ಗಿಡಗಳ ಸಮೂಹದಿಂದ ಇನ್ನೂ ಅನೇಕರೀತಿ ಪ್ರಯೋಜನ ಉಂಟು. ಈ ಬಗ್ಗೆ ವಾಚಕರು ಕೆಳಗಿನ ಕಂದಪದ್ಯವನ್ನು ಓದಿರಿ.

॥ ಕಂದ ॥

ಗಿಡಗಳ್ ದಡಸಾಗುತಿರೆ ।
ಗುಡಿಗುಡಿಸುತೆ ನೋಡಮೆಲೆಯೋಡಾಡುವವು ॥
ಜಡಿಯದ ಮಳೆಗಳ್ ಹೊಡೆವವು ।
ಅಡವಿಯು ತಾ ಹುಲ್ಲು ಜಿಗಿತು ತಲಿಪಲಿಯುವದು ॥೧॥

ವರ್ತಮಾನಸಂಗ್ರಹ

ಟ್ರೂಮನ್ನರು ಭಾರತಕ್ಕೆ

ಬರುವ ಜನವರಿ ತಿಂಗಳಲ್ಲಿ ಅಮೆರಿಕದಲ್ಲಿ ಹೊಸ ಅಧ್ಯಕ್ಷರ ಚುನಾವಣೆ ನಡೆಯುತ್ತದೆ. ಹೊಸದಾಗಿ ಚುನಾಯಿತರಾಗಿ ಬರುವ ಅಧ್ಯಕ್ಷರಿಗೆ ಮಿಃ ಟ್ರೂಮನ್ ಅವರು ಅಧಿಕಾರವನ್ನು ವಹಿಸಿಕೊಡುತ್ತಾರೆ. ಆನಂತರ ಅವರು ತಮ್ಮ ಹೆಂಡತಿ ಮತ್ತು ಮಕ್ಕಳೊಡನೆ ಭಾರತಕ್ಕೆ ಬರುತ್ತಾರೆ, ಎಂದು ತಿಳಿದುಬಂದಿದೆ

ಅಖಿಲಭಾರತ ಶಿಕ್ಷಣ ಸಮ್ಮೇಳನ

ಡಿಸೆಂಬರ್ ೨೭ ರಿಂದ ನಾಗಪುರದಲ್ಲಿ ಅಖಿಲ ಭಾರತ ಶಿಕ್ಷಣ ಸಂಸ್ಥೆಗಳ ಫೆಡರೇಷನ್ನಿನ ಅಶಯಲ್ಲಿ ನಡೆಯಲಿರುವ ೨೭ನೆಯ ಅಖಿಲ ಭಾರತ ಶಿಕ್ಷಣ ಸಮ್ಮೇಳನದಲ್ಲಿ ಸುಮಾರು ೫೦೦ ಪ್ರತಿನಿಧಿಗಳು ಭಾಗವಹಿಸಲಿದ್ದಾರೆಂದು ತಿಳಿದುಬಂದಿದೆ ಸಮ್ಮೇಳನದ ವ್ಯವಸ್ಥೆಗಳನ್ನು ಮಾಡಲು ಸ್ವಾಗತ ಸಮಿತಿಯೊಂದನ್ನು ರಚಿಸಲಾಗಿದೆ

ಎರಡು ಲಕ್ಷ ಚೀನಾಸೇನೆ

ಭಾರತ ಟಿಬೆಟ್ ಗಡಿಯಲ್ಲಿ ೨ ಲಕ್ಷ ಮಂದಿ ಶಸ್ತ್ರ ಸಜ್ಜಿತ ಸೈನಿಕರುಗಳನ್ನೊಳಗೊಂಡ ಭಾರಿ ಸೇನೆಯೊಂದನ್ನು ಚೀನ ಕಮ್ಯೂನಿಸ್ಟರು ನಿರ್ಮಾಡುಮಾಡಿರುವುದಾಗಿ ನರೆದಿಯಾಗಿದೆ ಕಮ್ಯೂನಿಸ್ಟರ ನಿರ್ಣಾಯಕದೆ ಕ್ರಮಣ ಆಫ್‌ಘಾನಿಸ್ತಾನ್, ನೇಪಾಳ್, ಭೂತಾನ್ ಮತ್ತು ಸಿಕ್ಕಿಂ ರಾಜ್ಯಗಳನ್ನು ವಶಪಡಿಸಿಕೊಳ್ಳುವುದೇ ಆಗಿದೆಯೆಂದು ಊಹಿಸಲಾಗಿದೆ

ಭಾರತದ ಕಮ್ಯೂನಿಸ್ಟರಿಗೆ ಶಸ್ತ್ರಾಸ್ತ್ರಗಳ ಸರಬರಾಜು

ಚೀನ ಕಮ್ಯೂನಿಸ್ಟರಿಂದ ರಹಸ್ಯ ಒಪ್ಪಂದ

ಚೀನ ಕಮ್ಯೂನಿಸ್ಟರು ಭಾರತದ ಕಮ್ಯೂನಿಸ್ಟ್ ರೊಡನೆ ಹೆಚ್ಚಿನ ಸ್ನೇಹ ಸೌಹಾರ್ದಗಳನ್ನು ಬೆಳೆಸುವುದಾಗಿದೆಯೆಂದೂ ಅಲ್ಲದೆ ಭಾರತ ಕಮ್ಯೂನಿಸ್ಟರ ಚಳುವಳಿಗೆ ಪೂರ್ಣ ಬೆಂಬಲ ನೀಡುವುದಾಗಿದೆಯೆಂದೂ ಗೊತ್ತಾಗಿದೆ

ಈಗಾಗಿರುವ ಒಪ್ಪಂದದ ಪ್ರಕಾರ ಚೀನ ಕಮ್ಯೂನಿಸ್ಟರು ಭಾರತದ ಕಮ್ಯೂನಿಸ್ಟರಿಗೆ ಮದ್ದು ಗುಂಡು ಗಳನ್ನೂ ಶಸ್ತ್ರಾಸ್ತ್ರಗಳನ್ನೂ ಸರಬರಾಜು ಮಾಡುವುದೂ ಭಾರತದಲ್ಲಿ ಕಮ್ಯೂನಿಸ್ಟ್ ಪಕ್ಷವನ್ನು ತೀವ್ರ ಬಲಯುತವಾದ ಪಕ್ಷವನ್ನಾಗಿ ಮಾಡುವುದೂ ಆಗಿದೆಯೆಂದೂ ಗೊತ್ತಾಗಿದೆ ಈಗಿನ ಸರ್ಕಾರವನ್ನು ಉರುಳಿಸಲು ಭಾರತ ಕಮ್ಯೂನಿಸ್ಟ್ ಪಕ್ಷಕ್ಕೆ ಚೀನ ಕಮ್ಯೂನಿಸ್ಟ್ ಪಕ್ಷವು ಸರ್ವ ವಿಧಗಳಲ್ಲೂ ಸಹಾಯ ನೀಡುವುದಾಗಿ ಒಪ್ಪಂದ ಮಾಡಿಕೊಂಡಿದೆಯೆಂದು ಗೊತ್ತಾಗಿದೆ

ರಹಸ್ಯದಲ್ಲಿ ಮಹಾ ಬದಲಾವಣೆ

ರಹಸ್ಯದಲ್ಲಿ ಮಹತ್ವಪೂರ್ಣವಾದ ಬದಲಾವಣೆಗಳು ಉಂಟಾಗುವುವು, ಎಂದು ತಿಳಿದುಬಂದಿದೆ ರಹಸ್ಯದ ಅಧ್ಯಕ್ಷತ್ವ ಸ್ವೀಕರಿಸಿರುವ ಅವರು ಸ್ವಾಸ್ಥ್ಯಕ್ಕೆ ಮಾರೆಂಕೊವ್ ಬರುವರು ಎಂದು ಗೊತ್ತಾಗಿದೆ. ಅಕ್ಟೋಬರ್ ೫ ನೆಯ ತಾರೀಖು ಈ ವಿಷಯ ಖಚಿತವಾಗಿ ಗೊತ್ತಾಗುತ್ತದೆ. ಮಾರ್ಷಲ್ ಸ್ಟಾಲಿನ್ ಅವರಿಗೆ ಈಗ ೭೨ ವರುಷ ಮಾಲೆಂಕೊವ್ ಅವರಿಗೆ ೫೦ ವರುಷ ಮಾಲೆಂಕೊವ್ ಅವರು ಸ್ಟಾಲಿನ್ ಅವರ ಬಲಗೈಯಂತಿದ್ದಾರೆ

ಶತ್ರುನೆಲೆಯಮೇಲೆ ಗುಂಡಿನ ಸುರಿಮಳೆ

ಕೊರಿಯಾದ ಈಶಾನ್ಯಭಾಗದಲ್ಲಿರುವ ಪರ್‌ಚಾಂಗ್ ಬಳಿ ಇರುವ ಶತ್ರುವಿನ ಸರಬರಾಜು ಕೇಂದ್ರದ ಮೇಲೆ ಮಿತ್ರರಾಷ್ಟ್ರಗಳ ವಿಮಾನಗಳು ಭಾರಿ ಪ್ರಮಾಣದ

ಪಾಕೀಸ್ತಾನ್ ಸರ್ಕಾರ ಉರುಳುವುದು

ಈಗಿನ ಪಾಕೀಸ್ತಾನ ಸರ್ಕಾರದ ಆಗುಹೋಗುಗಳನ್ನು ಗಮನಿಸಿದವರಿಗೆ ಪಾಕೀಸ್ತಾನ್ ಸರಕಾರವು ಇಷ್ಟರಲ್ಲೇ ಉರುಳುವುದು ಖಂಡಿತವೆಂದು ಜಿನ್ನಾ ಅವಾಮಿಲೀಗ್‌ನ ನಾಯಕ ಸುಹ್ರವರ್ಧಿಯವರು ಬಹಿರಂಗ ಸಭೆಯೊಂದರಲ್ಲಿ ಮಾತನಾಡುತ್ತಾ ತಿಳಿಸಿದ್ದಾರೆ

ವಿಮಾನ ಅಪಘಾತ

ಪಾಕೀಸ್ತಾನದ ವಿಮಾನದಳದ ತಿಹಾಸದಲ್ಲಿ ಇದು ವರೆಗೆ ನಡೆಯದೇ ಇದ್ದಂತಹ ಘೋರ ಅಪಘಾತವೊಂದು ೪ ೩೬ ರ ಬೆಳಿಗ್ಗೆ ಸಂಭವಿಸಿತು ಬ್ರಿಸ್ಟಲ್ ಫೈಟರ್ ವಿಮಾನವೊಂದು ಪಂಜಾಬಿನಲ್ಲಿ ನೆಲಕ್ಕುರುಳಿ ಅದರೊಳಗಿದ್ದ ೧೮ ಮಂದಿಯೂ ಮರಣ ಹೊಂದಿದರು ವಿಮಾನವು ಬಾಂಬಿಂಗ್ ಅಭ್ಯಾಸಕ್ಕೋಸ್ಕರ ಲಾಹೋರಿನಿಂದ ಪೆಷಾವರಿಗೆ ಹೊರಟಿತ್ತು ಆದರೊಳಗೆ ಮದ್ದುಗುಂಡು ಗಳು ತುಂಬಿದ್ದವು

ಅದರಲ್ಲಿ ೧೧ ಮಂದಿ ವಿಮಾನದಳದ ಅಧಿಕಾರಿಗಳೂ ೬ ಮಂದಿ ನಾನ್ ಕಮಿಷನ್ಡ್ ಅಧಿಕಾರಿಗಳೂ ಮತ್ತು ಒಬ್ಬ ಸಿವಿಲಿಯನರೂ ಪಾಕೀಸ್ತಾನ್ ವಿಶೇಷ ಪೋಲೀಸ್‌ದಳದ ಇನ್‌ಸ್ಪೆಕ್ಟರ್ ಜನರಲ್ ಮಿಃ ಏತೆ ಯಾಜ್ ಉದ್ದೀನರು ಇದ್ದರು ಇವರು ಲಿಯಾಕತ್‌ಅಲಿ ಖಾನರ ಕೆಲಸಿ ತಪ್ಪಿಸಿ ಸಂಬಂಧದಲ್ಲಿ ಪೆಷಾವರಿಗೆ ತೆರಳು ತ್ತಿದ್ದರೆಂದು ಹೇಳಲಾಗಿದೆ

ಸರ್ಕಾರಕ್ಕೂ ಕಾಂಗ್ರೆಸ್ ಸಂಸ್ಥೆಗೂ ಸಂಪರ್ಕ

ಸಂಸ್ಥಾನಗಳಲ್ಲಿ ಕಾಂಗ್ರೆಸ್ ಪರಿಕಾರಗಳಿಗೂ ಮತ್ತು ಕಾಂಗ್ರೆಸ್ ಸಂಸ್ಥೆಗಳಿಗೂ ನಿಕಟಬಾಂಧವ್ಯವಿರುವಂತೆ ನಿರ್ಣಾಟುಮಾಡಬೇಕೆಂದೂ ಈ ಸಂಬಂಧದಲ್ಲಿ ಕಾಂಗ್ರೆಸ್ ಅಂಗರಚನೆಗೆ ತಿದ್ದುಪಡಿಯೊಂದನ್ನು ಸೂಚಿಸ ಬೇಕೆಂದೂ ಬೆಂಬಾಯ ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾದ ಶ್ರೀ ಎಸ್ ಕೆ ಪಾಟೀಲರು ಸಂಸ್ಥಾನದ ಇತರ ಮೂರು ಪ್ರದೇಶ ಕಾಂಗ್ರೆಸ್ ಸಮಿತಿಗಳಿಗೆ ಪತ್ರ ಬರೆದಿದ್ದಾರೆಂದು ಗೊತ್ತಾಗಿದೆ

ಪ್ರತಿಯೊಂದು ಸಂಸ್ಥಾನದಲ್ಲೂ ಕೋ ಆರ್ಡಿನೇಷನ್ ಬೋರ್ಡ್ ಒಂದನ್ನು ಸ್ಥಾಪಿಸಬೇಕೆಂದೂ, ಆದರಲ್ಲಿ ಆಯಾ ಸಂಸ್ಥಾನದ ಮುಖ್ಯ ಸಚಿವರು, ಸಂಸ್ಥಾನದ ನಾನಾ ಪ್ರದೇಶ ಕಾಂಗ್ರೆಸ್ ಸಮಿತಿಗಳ ಅಧ್ಯಕ್ಷರು ಮತ್ತು ಇತರ ಪ್ರಮುಖ ಕಾಂಗ್ರೆಸ್ ನಾಯಕರು ಇರಬೇಕೆಂದೂ ಶ್ರೀ ಪಾಟೀಲರು ಸೂಚಿಸಿದ್ದಾರೆ

ಸರ್ಕಾರದವರು ಕೈಗೊಳ್ಳಲಿರುವ ಪ್ರತಿ ಮುಖ್ಯ ಕೆಲಸವನ್ನೂ ಈ ಬೋರ್ಡ್ ವಿವರ್ಶಿಸಬೇಕೆಂದೂ ಬೋರ್ಡಿನ ಒಪ್ಪಿಗೆ ಇಲ್ಲದೆ ಯಾವ ಮುಖ್ಯ ಕಾರ್ಯ ವನ್ನೂ ಸರಕಾರ ಕೈಗೊಳ್ಳಕೂಡದೆಂದೂ, ಬೋರ್ಡಿನ ಸದಸ್ಯರಲ್ಲಿ ಭಿನ್ನಾಭಿಪ್ರಾಯ ಬಂದರೆ ಕೇಂದ್ರ ಪಾರ್ಲಿ ಮೆಂಟರಿ ಬೋರ್ಡಿನ ತೀರ್ಮಾನವೇ ಅಂತಿಮವಾಗಿ ಬೇಕೆಂದೂ ಶ್ರೀ ಪಾಟೀಲರು ಸಲಹೆ ಮಾಡಿದ್ದಾರೆ

ಕಾಂಗ್ರೆಸ್ ಅಂಗರಚನೆಗೆ ತಿದ್ದುಪಡಿ ಸೂಚಿಸಲು ಬೊಂಬಾಯಿ ಪ್ರದೇಶ ಕಾಂಗ್ರೆಸ್ ಸಮಿತಿ ಈಗಾಗಲೇ ಒಂದು ಉಪಸಮಿತಿಯನ್ನು ನೇಮಿಸಿದೆ ಸೆ ೧೪ ರಿಂದ ಇಂದೂರಿನಲ್ಲಿ ಪ್ರಡೆಯಲಿರುವ ಎ ಐ ಸಿ ಸಿ ಮುಂದೆ ಈ ತಿದ್ದುಪಡಿಗಳು ಇರ್ಜಿಗೆ ಬರಲಿವೆ

ಕೇಂದ್ರದಿಂದ ಹಲವು ಕಛೇರಿಗಳು ಹೈದರಾಬಾದಿಗೆ

ಹೈದರಾಬಾದ್ ನಗರವನ್ನು ಭಾರತದ ಉಪರಾಜ್ಯ ಧಾನಿಯನ್ನಾಗಿ ಮಾಡಲು ನಿರ್ಣಾಟುಗಳು ನಡೆಯು ತ್ತಿವೆಯೆಂದು ಕೌನ್ಸಿಲ್ ಆಫ್ ಸ್ಟೇಟ್ಸ್‌ನ ಸದಸ್ಯರಾದ ಶ್ರೀ ವಿ ಕೆ ಡಾಗೆ ಮತ್ತು ಶ್ರೀ ರಾಜ್‌ಬಹದ್ದೂರ್ ಗೌರ್‌ರವರು ಇಂದು ಪತ್ರಿಕಾಪ್ರತಿನಿಧಿಗಳಿಗೆ ತಿಳಿಸಿದರು ಕೇಂದ್ರ ಸರ್ಕಾರದ ಹಲವು ಇಲಾಖೆಗಳನ್ನು ಹೈದರಾ ಬಾದ್‌ನಗರಕ್ಕೆ ವರ್ಗಾಯಿಸಿ ಉಪಕೇಂದ್ರವನ್ನಾಗಿ ಮಾಡಲು ಪ್ರಯತ್ನಗಳು ಫಲಿಯುತ್ತಿವೆಯೆಂದೂ ಇದಕ್ಕೆ ತಮ್ಮ ಪಕ್ಷದ ವಿರೋಧವಿದೆಯೆಂದೂ ಅವರು ತಿಳಿಸಿದರು

ಕ್ಲೋರೋಫಾರಂ ಕೊಟ್ಟು ತರುಣಿಯರ ಅಪಹರಣ

ಲಕ್ನೋ—ವಯಸ್ಸಿಗೆ ಬಂದ ತರುಣಿಯರನ್ನು ಕ್ಲೋರೋಫಾರಂ ಕೊಟ್ಟು ಅಥವಾ ಪುಸಲಾಯಿಸಿ ಅಪ ಹರಿಸಿಕೊಂಡು ಬಂದು "ರಕ್ಷಣಾ ಗೃಹ" ಎಂಬ ಹೆಸರಿನಲ್ಲಿ ತರುಣಿಯರ ಮಾರಾಟ ನಡೆಸುತ್ತಿದ್ದ ಒಂದು ಭಾರಿ ಗ್ಯಾಂಗನ್ನು ಪೋಲೀಸರು ಪತ್ತೆಹಚ್ಚಿದ್ದಾರೆ ಆ ಗ್ಯಾಂಗಿನಲ್ಲಿ ಅಪಹರಿಸಲ್ಪಟ್ಟಿದ್ದ ೪೦ ಮಂದಿ ತರುಣಿಯ ರಿದ್ದರೆಂದೂ ಅವರನ್ನೆಲ್ಲ ಬಿಡುಗಡೆಮಾಡಿ ಅವರವರ ಊರುಗಳಿಗೆ ಕಳುಹಿಸಿಕೊಡಲಾಯಿತೆಂದೂ ನರೆದಿ ಯಾಗಿದೆ ತರುಣಿಯರನ್ನು ಅಪಹರಿಸುತ್ತಿದ್ದ ಗ್ಯಾಂಗಿನ ಇಬ್ಬರನ್ನು ಪೋಲೀಸರು ದಸ್ತಗಿರಿಮಾಡಿದ್ದಾರೆ

ಭಿಕ್ಷುಕನ ಅದೃಷ್ಟ

ಶ್ರೀ ಕಾಮದೇವ್ ಪ್ರಸಾದ್ ಎಂಬ ತಿರುಚನೋರ್ವ ಶ್ರೀಸಾಮಾನ್ಯ ಕೆಲವು ದಿನಗಳ ಹಿಂದೆ ೨೦೦೯ ಡಬ್ಲೂ ಟಬಿ ೪೦೫೦ ಟಿಕೆಟ್ ಒಂದನ್ನು ಕೊಂಡುಕೊಂಡಿದ್ದನು ಆತನ ನಿರಾ ನಷ್ಟೆ ತಂತೆ ಒಂದು ಆತ ಕೊಂಡುಕೊಂಡ ಟಿಕೆಟ್ ೧೫ ಸಾವಿರ ರೂಪಾಯಿಗಳ ಮೊದಲನೇ ಬಹುಮಾನ ತಂದಿದೆ ಯೆಂಬ ಸಂತೋಷದ ಸುದ್ದಿ ತಿಳಿಸಿದೆ ಅತನೋರ್ವ ಕುರುಡ ಬಿಚ್ಚುಕ

ಸ್ಟೇವನ್ ಮಾಸ್ಟರ್ ಬಳಿ ಟಿಕೆಟ್ ಇರಲಿಲ್ಲ

ಫಿರೋಜ್‌ಪುರ ಮೋಗಗಳ ನಡುವೆ ರೈಲುಗಾಡಿ ಓಡುತ್ತಿದ್ದಾಗ ಟಿಕೆಟ್ ಪರೀಕ್ಷಕನವರು ನಾಗಿಗೆ ಒಂದು ಟಿಕೆಟ್ ಕೇಳಲಾಗಿ ಆ ಗಾಡಿಯಲ್ಲಿ ಕುಳಿತಿದ್ದ ಸ್ಟೇವನ್ ಮಾಸ್ಟರ್ ಒಬ್ಬರ ಬಳಿ ಟಿಕೆಟ್ ಇರಲಿಲ್ಲ ಅವರು ತಮ್ಮ ಪತ್ನಿ ಸಮೇತರಾಗಿ ಟಿಕೆಟ್ ಇಲ್ಲದೆ ಪ್ರಯಾಣ ಮಾಡುತ್ತಿದ್ದರು ಆವರನ್ನು ಪತ್ನಿ ಹೆಚ್ಚಲಾಗಿ ಅವರೂ ಜುಲ್ಮಾನೆ ಕೊಡಬೇಕಾದ ಪ್ರಸಂಗ ಬಂದಿತು

ವಿಮಾನತಯಾರಿಕೆವಿಧಾನವನ್ನು ವಿವರಿಸುವ ಹಸ್ತಪ್ರತಿ

"ವೈಮಾನಿಕಶಾಸ್ತ್ರಕ್ಕೆ" ಸಂಬಂಧಪಟ್ಟ ಪುರಾತನ ಹಸ್ತಪ್ರತಿಯೊಂದು ಸಂಸ್ಕೃತ ಪರಿಷೋಧನ ಶಾಖೆಯ ಮುಖ್ಯಾಧಿಕಾರಿಗಳಿಗೆ ಇತ್ತೀಚೆಗೆ ದೊರೆತಿದೆ ಅದನ್ನು ಮಹರ್ಷಿ ಭರದ್ವಾಜರು ಸಂಸ್ಕೃತಭಾಷೆಯಲ್ಲಿ ಬರೆದಿ ದ್ದಾರೆ 'ಸುಂದರ' 'ಶಕುನ' ಮತ್ತು 'ರುಕ್ಮ' ಎಂಬ ಮೂರು ಬಗೆಯ ವಿಮಾನಗಳಿಗೆ ಸಂಬಂಧಿಸಿದ ಚಿತ್ರ ಗಳೂ ದೊರೆತಿವೆಯಂತೆ ಈ ಹಸ್ತಪ್ರತಿಯಲ್ಲಿ ೮ ಪ್ರಕ ರಣಗಳೂ ೫೦೦ 'ಸೂತ್ರ'ಗಳೂ ಇವೆಯೆಂದು ಹೇಳ ಲಾಗಿದೆ ವೇರೆ ವೇರೆ ಬಗೆಯ ವಿಮಾನಗಳನ್ನು ತಯಾರಿಸುವ ವಿಧಾನಗಳನ್ನು ಅವುಗಳಲ್ಲಿ ವಿವರಿಸಲಾಗಿದೆ. ಮುರಿಯದೆ, ಕತ್ತರಿಸಲ್ಪಡದೆ ಮತ್ತು ಬೆಂಕಿಯಲ್ಲಿ ಸುಡದ ವಿಮಾನಗಳನ್ನು ತಯಾರಿಸುವ ವಿಧಾನಗಳು ಸಹ ವರ್ಣಿಸಲ್ಪಟ್ಟಿವೆ

ಈ ಹಸ್ತಪ್ರತಿಯ ಪ್ರಕಾರ ವಿಮಾನದಲ್ಲಿ ೩೧ ಭಾಗ ಗಳಿವೆ ವಿಮಾನಗಳನ್ನು ರಚಿಸಲು ಬೇಕಾದ ೧೬ ಬಗೆಯ ವಸ್ತುಗಳನ್ನು ವಿವರಿಸಲಾಗಿದೆ

ಕೃತಕ ನೆಲ್ಲಗಳು ಮತ್ತು ನಾನಾಬಗೆಯ ಯಂತ್ರ ಗಳನ್ನು ತಯಾರಿಸುವ ಹಸ್ತಪ್ರತಿಗಳೂ ಸಹ ಮೊತೆ ತೆಯೆಂಬಂತೆ

'ಯಂತ್ರಶಾಸ್ತ್ರ'ವನ್ನು ಬರೆದ ಮಹರ್ಷಿ ಭರದ್ವಾ ಜರು ಕೃತಕಕೀಟ ಮಳೆ ಬರಿಸುವ ವಿಧಾನವನ್ನು ಸಹ ವರ್ಣಿಸಿದ್ದಾರೆಂದು ಹೇಳಲಾಗಿದೆ,

ಮೈಸೂರು ಶ್ರೀಮನ್ಮಹಾರಾಜರವರ ಆಫ್ರಿಕಾ ಪ್ರವಾಸ

ಈ ಸಾರೆಯ ದಸರಾ ಮುಗಿದ ನಂತರ ಶ್ರೀಮನ್ಮ ಹಾರಾಜರವರು ದಕ್ಷಿಣ ಆಫ್ರಿಕಾ ಪ್ರವಾಸ ಕೈಗೊಳ್ಳುವ ವರೆಂದು ತಿಳಿದು ಬಂದಿದೆ

ಸಿದ್ಧಾಂತಶಿಖಾಮಣಿ

ವೀರಶೈವಮತದಲ್ಲಿ ಜನ್ಮಧಾರಣಮಾಡಿದ ಪ್ರತಿಯೊಬ್ಬ ವಿಧಿಯ ಸಿದ್ಧಾಂತಶಿಖಾಮಣಿಗ್ರಂಥವು ಸ್ವಾಗತಾರ್ಹವಾದುದು. ಈ ಮಹಾಗ್ರಂಥವನ್ನು ಶ್ರೀಜಗದ್ಗುರುರೇಣುಕಾಚಾರ್ಯರು ಜಗತ್ಕಲ್ಯಾಣಕ್ಕಾಗಿ ಅನುಗ್ರಹಿಸಿರುವರೆಂಬ ಅಭಿಪ್ರಾಯವು ಸಕಲ ಶಿವಭಕ್ತರಲ್ಲಿಯೂ ಮನೆಮಾಡಿರುವುದು. ಇದರಲ್ಲಿ ಆಚಾರ್ಯಲಕ್ಷಣ, ಶಿವದೀಕ್ಷಾವಿಧಿ, ಲಿಂಗಧಾರಣವಿಧಿ, ಪಂಚಾಚಾರ ಪ್ರಕಾಶಿಕಾ, ಶಿವಾಚಾರ ಪ್ರಕಾಶಿಕಾ, ಶಿವಾಗಮಸಂಗ್ರಹ, ಶಿವಾಗಮಸಂಗ್ರಹ (ಚಿಲ್ಲರೆ ಪ್ರಶ್ನೋತ್ತರ),

EGISTERED No. M. 2266 (ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು) REGISTERED No. M. 2266

ಪಂಚಾಚಾರ್ಯ ಪ್ರಭಾ

ಸ್ಮೃತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಸಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೇಶ್ವರರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಮೋದಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ॥

ಸಂಸ್ಥಾಪಕರು—ನಾಗನೂರು ಬೃಹನ್ಮಠಾಧ್ಯಕ್ಷರಾದ ಸೇ॥ ಪಂ॥ ಶ್ರೀ ಕಾಶೀನಾಥಶಾಸ್ತ್ರಿಗಳವರು.

ವಾರ್ಷಿಕ ಚಂದಾ ಪರಸ್ಥಳದವರಿಗೆ ೩ ರೂ. ಸಂಪಾದಕರು—ನಾಗನೂರು ಬೃ॥ ಮಹಾದೇವಯ್ಯನವರು ವಿ. ಪಿ. ಖರ್ಚು ಸೇರಿ ೩ ರೂ ೬ ಆಣೆ

ಮೈಸೂರು ಸಂಸ್ಕೃತದ ನಿದ್ಯಾ ಇಲಾಖೆಯ ಭೂತಪೂರ್ವ ಡೈರೆಕ್ಟರರಾದ ಶ್ರೀ ಜೆ. ಬಿ. ಮಲ್ಲಾರಾಧ್ಯರ ಭಾಷಣ

ಬೆಂಗಳೂರು ಶ್ರೀ ಜಗದ್ಗುರು ಪಂಚಾಚಾರ್ಯ ಸಂಸ್ಕೃತ ಕಾಲೇಜಿನ ಅಧ್ಯಾಪಕರು ಮತ್ತು ವಿದ್ಯಾರ್ಥಿಗಳು ಶ್ರೀ ವಿಘ್ನರಾಜ ವ್ಯಾಗಣಪತಿ ಪೂಜಾಮಹೋತ್ಸವಸಂದರ್ಭದಲ್ಲಿ ವರ್ಷಂಪ್ರತಿ ನಡೆಸಿಕೊಂಡು ಬರುತ್ತಿರುವ ಕಾರ್ಯಕ್ರಮಗಳ ಮುಕ್ತಾಯಸಮಾರಂಭದಲ್ಲಿ ಮೈಸೂರು ಸಂಸ್ಕೃತದ ವಿದ್ಯಾಇಲಾಖೆಯ ಡೈರೆಕ್ಟರರಾದ ಶ್ರೀ ಜೆ. ಬಿ. ಮಲ್ಲಾರಾಧ್ಯ. ಬಿ.ಎ ಎಸ್., ರವರು ದಿನಾಂಕ ೫-೯-೧೯೫೨ ನೇ ಮಂಗಳವಾರ ನಾಡಿದ ಭಾಷಣದ ಸಾರಾಂಶ—

ಧ್ಯಾಪಕರೇ ಮತ್ತು ಮಹನೀಯರೇ,

ಈ ದಿನ ತಾವು ಶ್ರೀ ವಿಘ್ನಗಣಪತಿ ಪೂಜಾಮಹೋತ್ಸವದ ಅಂಗವಾಗಿ ವರ್ಷಂಪ್ರತಿಯಿರುವ ಉಪನ್ಯಾಸಮಾಲೆಯ ಉಪನ್ಯಾಸಕ್ಕಾಗಿ ನನ್ನನ್ನು ಬರಮಾಡಿಕೊಂಡು ಗೌರವಿಸಿದ್ದೀರಿ.

ಶ್ರೀ ಗಣಪತಿ ಪೂಜಾಸಂದರ್ಭದಲ್ಲಿ ಮಹಾವಿದ್ವಾಂಸರುಗಳು ತಮ್ಮ ತಮ್ಮ ಶಾಸ್ತ್ರಾರ್ಥವನ್ನು ವಾಕ್ಚಾರ್ಯರಸ್ಪರರಾಗಿ ನಿರೂಪಿಸಿ ಶಿಷ್ಯರಿಗೂ ಇತರರನ್ನೂ ಆನಂದಗೊಳಿಸುವ ಪದ್ಧತಿ ನನ್ನಲ್ಲಿ ಆನೂಚಾನವಾಗಿ ಬಂದಿದೆ. ಹಿಂದಿಯಾ, ಜೈನಗ್ರಂಥಗಳನ್ನು ಬಿಟ್ಟು ಇನ್ನು ಯಾವ ದೇಶದಲ್ಲೂ ವಿದ್ಯಾಸ್ಪರ್ಧೆಗಳು ಇಷ್ಟು ಅಧಿಕವಾಗಿರುವಂತೆ ತೋರುವುದಿಲ್ಲ. ಆದರೆಲ್ಲಾ ವಿದ್ವನ್ನಗರಗಳೂ, ಪುಣ್ಯನಗರವೂ ಹಿಂದೂ ರಾಜಸತ್ತೆಗಳನ್ನು ಕಳೆದುಕೊಂಡಮೇಲೆ ಮೈಸೂರಿನ ರಾಜವಂಶವು ಸಂಸ್ಕೃತವಿದ್ಯೆಗೆ ನೀಡಿರುವ ಮುಕ್ತಹಸ್ತದ ಸದಾಶ್ರಯವನ್ನು ನೆನೆದು ಕೊಂಡಾಗ ನಮ್ಮೆಲ್ಲರಿಗೂ ಅತಿಯಾದ ಸಂತೋಷವಾಗುವುದರಲ್ಲಿ ಏನೂ ಸಂದೇಹವಿಲ್ಲ.

ಇಂದು ಸಂಡಿತರು ಭೋಧಿಸುತ್ತಿರುವ ಕ್ರಮವು ಸುಮಾರಾರು ವರ್ಷಗಳಷ್ಟು ಹಿಂದಿನದು. ಪ್ರಾಚೀನ ಗುರುಪರಂಪರೆಯ ಆಶೀರ್ವಾದವನ್ನು ಪಡೆದುದು ನಿಜ. ಅಂದೆ ಗೌತಮಬುದ್ಧನು ವಿದ್ಯಾರ್ಥಿಯಾಗಿದ್ದಾಗ ಅರುವತ್ತುನಾಲ್ಕು ವಿದ್ಯೆಗಳನ್ನು ಕಲಿತನೆಂದು ಲಲಿತವಿಸ್ತರದಲ್ಲಿ ಹೇಳಿದೆ. ಆ ಅರವತ್ತುನಾಲ್ಕು ವಿದ್ಯೆಗಳನ್ನು ಕುರಿತು ಮನು ಮುಮ್ಮುಡಿ ಕೃಷ್ಣರಾ ಯರವರು ಬರೆದಿರುವ ಸೌಗಂಧಿಕಾಪರ್ಣ ಎಲ್ಲೂ ಉಲ್ಲೇಖವಿದೆ. ಇದಗಳು ಎಲ್ಲರಿಗೂ ಲಭ್ಯವಾದುದು ಕಾಲಧರ್ಮವೆಂದು ಹಿರಿಯರು ಅಂಗೀಕರಿಸಬೇಕು.

ಹಿಂದೆ ಸಂಸ್ಕೃತ ವಿದ್ಯಾಭ್ಯಾಸಮಾಡುತ್ತಿದ್ದವರು ಬ್ರಾಹ್ಮಣ್ಯವಾಗಿ, ಬಹುಶಾಗಿ, ವಿದ್ವಾಂಸರ ಮಕ್ಕಳು. ಇವರು ಆಕ್ಷರಭ್ಯಾಸ ಮಾಡುವ ವೇಳೆಗೆ ಅಗಲೆ ಪ್ರೌಢಪಾಠಗಳು ಪ್ರಾತಿಕ್ಷೋಭಗಳು ಅವರಿಗೆ ಬರುತ್ತಿದ್ದವು. ಮನೆಗಳಲ್ಲಿ, ಮಂದಿರಗಳಲ್ಲಿ, ಪರಿಷತ್ತೆ ಉತ್ಸವಗಳಲ್ಲಿ ಸಂಸ್ಕೃತ ವಿದ್ವಾಲಟ್ಟಿ ತಾಂಡವವಾಡುತ್ತಿದ್ದಲು. ಅಂಧವನಿಗೆ ವ್ಯಾಕರಣ ಪಾಠಮಾಡುವುದೂ ಕತ್ತಲಾಗುತ್ತಿರಲಿಲ್ಲ. ಆಗಿನ ವಿದ್ಯಾರ್ಥಿಗೆ ಸಾಹಿತ್ಯವಾತಾವರಣ ವಿರುತ್ತಿತ್ತು. ಈಗ ಅದು ಇಲ್ಲ. ವಿದ್ಯಾರ್ಥಿಗಳಾಗಿ ಬರುವವರು ಸಾಮಾನ್ಯ ನಗರದವರು. ವಿದ್ಯಾಗಂಧವಿಲ್ಲದ, ಅಕ್ಷರಶ್ಯರೂ ಇಲ್ಲದವರು. ಮಕ್ಕಳು. ಅವರಿಗೆ ವಿದ್ಯತ್ ಪುತ್ರರಿಗೆ ಮಾತ್ರ ಸಾಧ್ಯವಾದ ಕ್ರಮದಲ್ಲಿ ಅಧ್ಯಾಪನ ವೆಂದರೆ ಹೇಗಾಗಬೇಕು? ಯಾವುದೋ ಶಾಸ್ತ್ರದಲ್ಲಿ ಅಧ್ಯಯನವಿಧಿ ಅಧ್ಯಾಪನವಿಧಿ ಎಂದು ಗದ್ದಲವಾಗಿರುವೆಯೆಂದು ಆದೇ ಪ್ರಧಾನವಾಗಿ ಎರಡು ಮತಗಳಾದವು ಎಂದೂ ಕೇಳಲ್ಪಡ್ತೇನೆ. ಈಗಂತೂ ಈ ಜನಸಾಮಾನ್ಯಯುಗದಲ್ಲಿ ಆನಕ್ಷರಸ್ಥರ ಮಕ್ಕಳೇ ಹೆಚ್ಚಾಗಿ ಶಾಲೆಗಳಿಗೆ ನುಗ್ಗುತ್ತಿರುವಾಗ, ಸಂಸ್ಕೃತವು ಎಲ್ಲರ ಸ್ವತ್ತಾಗುವುದು ಮಾತ್ರವಲ್ಲ ; ಎಲ್ಲರಿಗೂ ಹಿಡಿಯುವಂತೆ ಬೋಧಿಸುವ ಸುಲಭ ಕ್ರಮವೂ ಒಂದು ವಿಘಾಡಣೆಯಬೇಕು ಎಂದು ನಾನು ಕೋರುತ್ತೇನೆ.

ಹಿಂದೆ ಸಂಸ್ಕೃತವೊಂದನ್ನೇ ಕಲಿಯುವಾಗ ಹತ್ತು ರಿಂದ ಹನ್ನೆರಡು ವರ್ಷಗಾದರೂ ಓದಲು ಅವಕಾಶವಿತ್ತು. ಈಗ, ನಾನು ಆಗಲೇ ಹೇಳಿದಂತೆ ಸಂಸ್ಕೃತವು ದೇವಭಾಷೆಯಾದರೂ ಮಾತೃಭಾಷೆಯ ಮಗ್ಗುಲಲ್ಲಿ ಇರಬೇಕಾದ ಕಾಲ ಬಂದಿದೆ.

ಸಂಸ್ಕೃತವನ್ನು ಓದಬೇಕಾದ ಗ್ರಂಥರತ್ನಗಳು ಬೇಕಾದಷ್ಟು ಇವೆ. ನಿಜ. ಹಾಗೆಂದು ಈಗಿನ ವ್ಯವಹಾರಕ್ಕೆ ಬೇಕಾದ ಆಧುನಿಕಾವಿದ್ಯೆಯನ್ನು ಬಿಟ್ಟು ಇರಲು ಸಾಧ್ಯವೇನು ? ನಮ್ಮ ವಿದ್ವಾಂಸರು ರಾಜಸಭಾಭೂಷಣರಾಗುವುದೂ ನಮ್ಮ ದೇವಸ್ಥಾನಗಳ ಗೋಪುರಗಳಂತೆ ಅವನ್ನು ಸಾಧಾರಣ ಗೌರವದಿಂದ ಮೆರೆಯುವುದೂ ಟೀಕು ಎನ್ನುವವನು ನಾನು. ಹಾಗೆಯೇ ಆನಗು ನೇಗಾಭ್ಯಾಸಜಡರು, ವೈದಿಕರು ಎನ್ನಿಸಿಕೊಂಡು ಹೊಲೆಗುಂಪಾಗುವುದೂ ಬದಲಾಯಿಸಿ. ಹಳೆಯುನೀನೆ ಹೊಸತೇನು ಬರಲಿ. ಯೂಫ್ಲಿನಿಸ್ಟಿ ಪ್ರೊಫೆಸರ್‌ಗಳಂತೆ ಶ್ರೀ ಜಾಮರಾಜೇಂದ್ರ ಕಾಲೇಜಿನ ಪಂಡಿತರೂ ಆಗಲಿ. ಸಮಯ ಬಿದ್ದಾಗ ಇಲ್ಲಿನ ಪಂಡಿತರನ್ನೂ ಅಲ್ಲಿನ ಪ್ರೊಫೆಸರು ಗಳನ್ನಾಗಿ ಹಾಕುವಂತಾಗಿಲಿ. ಆದರಿಂದ ತಾವು ಹೊಸ ಬೆಳಕನ್ನು ತಳ್ಳಬೇಡಿ ಎನ್ನುತ್ತೇನೆ.

ನಾನು ಮನೆಯಲ್ಲಿ ದಿನವೂ ತಿನಾರ್ಚನೆ ಮಾಡುತ್ತೇನೆ. ಆಗ ರುದ್ರಪಾಠಾಯಣ ಮಾಡುತ್ತೇನೆ. ಆಗಾಗ ಮಹಾನ್ಯಾಸವೂ ಹೇಳುತ್ತೇನೆ. ಆಗ ರುದ್ರ, ಶಿವ, ಇವರ ವಿಚಾರವಾಗಿ ಬಹಳ ಸಲ ಯೋಚನೆ ಬಂದಿದೆ. ರುದ್ರರು, ಭೂಮಿ, ಅಂತರಿಕ್ಷ, ಆಕಾಶ, ಸಮುದ್ರ, ಎಲ್ಲೆಲ್ಲೂ ಇರುವರೆಂಬ! ಶಿವನು ಮಾತ್ರ ಕೈಲಾಸದಲ್ಲಿ ರುವಂತೆ! ಅದನ್ನೇ ಇಲ್ಲಿ ವಿದ್ಯಾಭ್ಯಾಸಕ್ಕೆ ಹೋಲಿಸಿದರೆ, ಹಿಂದೆ ನಾನು ಕೇಳಿದ ಕಥೆಯು ನೆನಪಾಗುತ್ತದೆ. ಕಶ್ಯಪನು ಇಂದ್ರನಿಗೆ ಶತ್ರುವಾಗುವ ಮಗನನ್ನು ಪಡೆಯಬೇಕು ಎಂದು ಯಾಗ ಮಾಡಿದನಂತೆ. ಪ್ರಜಾಪತಿಗಳೆಲ್ಲಾ ಬ್ಬನೂ ಸಪ್ತರ್ಷಿಗಳಲ್ಲಿ ಒಬ್ಬನೂ ಆದ ಅತನಿಗೂ ಸ್ವರಸ್ಖಲುವಾಯಿತಂತೆ; ಇಂದ್ರನಿಗೆ ಶತ್ರುವಾಗುವ ಮಗನ ಬದಲು ಇಂದ್ರನು ಶತ್ರುವಾಗುವ ಮಗನು ಹುಟ್ಟಿದನಂತೆ. ಬಹುಶಃ ನಮ್ಮ ಅಧ್ಯಯನದಲ್ಲಿಯೂ ಹೀಗೆ ಆಗಿದೆಯೋ? ನಾವು ಜಗನ್ಮಾನ್ಯರಾದ ಪಂಡಿತರಾಗಲಿ ಎಂದು ಅಂಗೀಕರಿಸಿರುವ ಶ್ರಮ ಅರ್ಥವಾದರೂ ಸೃಷ್ಟಿಸುವ ಅವರ್ಣಕಾರಣವಾಗಿದೆ. ಇದನ್ನು ತಪ್ಪಿಸಿ, ಈ ರುದ್ರಕ್ರಮವನ್ನು ಬಿಟ್ಟು ಶಿವ ಕ್ರಮವನ್ನು ಅವಲಂಬಿಸಲಾರೆವೆನ್ನಿ? ಭೂತಭೂತಿಯು ಉತ್ತರರಾಮಚರಿತ್ರದಲ್ಲಿ ವಾಕ್ಯಗೂ ವಹ್ನಿಗೂ ಅಸವಾದ ಕಟ್ಟಿದ್ದಲ್ಲ ಎಂಬುದನ್ನು ನೆನೆಯೋಣ. ಹಾಗೆಯೇ ಹಿರಿಯರು ಆಡಿದ "ಒಂದು ಮಾತು ಸರಿಯಾಗಿ ಆಡಿದರೆ ಸ್ವರ್ಗದಲ್ಲಿ ಕಾಮಧೇನುವಾಗುವುದು" ಎಂಬ ಉದಾರ ವಾಣಿಯನ್ನೂ ನೆನೆಯೋಣ. ತಮ್ಮ ವಿದ್ಯಾರ್ಥಿಗಳು ಈಗ ಶಾಸ್ತ್ರಗಳಲ್ಲಿ ಕೃತಾರ್ಥರಾಗಿ ವಾಕ್ಯಾರ್ಥಮಾಡಬಲ್ಲಂತೆ, ಕಾಲಿದಾಸಾದಿ ಮಹಾಕವಿಗಳ, ರಾಮಾಯಣ ಭಾರತಾದಿ ಕಾವ್ಯೇತಿಹಾಸಗಳನ್ನು ತೆಗೆದುಕೊಂಡು ವಿಸ್ತಾರವಾಗಿ ವಿಪ್ರಲವಾಗಿ ನುನೋಹರವಾಗಿ ಮಾತನಾಡಬಲ್ಲ ರಸಿಕರೂ ಆಗುವಂತೆ ಮಾಡಿ. ಸಾಹಿತ್ಯ ಶೇಖರರು, ಶಾಸ್ತ್ರಪಾಪುಣರು, ಆಗುವ ತಮ್ಮ ವಿದ್ಯಾರ್ಥಿಗಳು ವ್ಯವಹಾರ ಕುಶಲರೂ ಆಗಲಿ.

ಮೈಸೂರು ಭಾರತದಲ್ಲಿ ಬಹಳ ಮುಂದುವರಿದ ರಾಜ್ಯವೆನ್ನುತ್ತಾರೆ. ಸಂಸ್ಕೃತ ವಿದ್ಯಾಭ್ಯಾಸದ ನವೀಕರಣದಲ್ಲಿಯೂ ಮೈಸೂರು ಮಾದರಿಯಾಗುವಂತೆ ಮಾಡಿ. ಅದು ತಮ್ಮ ಕೈಯ್ಯಲ್ಲಿದೆ. ಆ ಕೆಲಸ ತಾವು ಮಾಡುವುದಕ್ಕೆ ನನ್ನ ಕೈಲಾದ ಸಹಾಯವನ್ನು ಮಾಡಲು ನಾನು ಸರ್ವದಾ ಸಿದ್ಧನಾಗಿದ್ದೇನೆ ಆದರೆ, ಮರೆಯಬೇಡಿ. ಅಂಥ ತಮ್ಮದು. ಹಿಂದಿಗೆಯಬೆ, ಹಿದರವೆ, ಮುನ್ನುಗ್ಗಿ ಕಾರ್ಯವನ್ನು ಸಾಧಿಸಿ. ಆ ಕಾರ್ಯವು ನಿರ್ವಿಘ್ನವಾಗಿ ನೆರವೇರಿ. ಸಂಸ್ಕೃತ ವಿದ್ಯೆಗೆ ಮತ್ತೆ ಲೋಕದಲ್ಲೆಲ್ಲಾ ಗೌರವಬರುವಂತೆ ಮಾಡಲು ಬೇಕಾದ ಉತ್ಸಾಹ, ಧೈರ್ಯಗಳನ್ನು ಶ್ರೀಮಹಾಗಣಪತಿಯು ತಮಗೆ ನೀಡಲಿ.

ತಾವು ನನ್ನನ್ನು ವಿಶ್ವಾಸದಿಂದ ಬರಮಾಡಿಕೊಂಡು ಈ ವಿದ್ವತ್ಸಭೆಯಲ್ಲಿ ಮಾತನಾಡಲು, ಇಲ್ಲಿರುವ ಮಹಾವಿದ್ವಾಂಸರ ಪರಿಚಯಮಾಡಿಕೊಳ್ಳಲು, ಪದವೆಂಕಟವನ್ನು ಕಲ್ಪಿಸಿಕೊಟ್ಟುದಕ್ಕಾಗಿ ತಮಗೆ ಅನಂತಾನಂತ ವಂದನೆಗಳು.

ಸ್ವೀಕಾರ

ಕಡವಾ ಡಿ॥ ರಾಯಾವರಂ ಶಿವಾನಂದಾಶ್ರಮದ ಟ್ರಸ್ಟಿಯರ ಡಾ॥ ಎಸ್. ವೀರಯ್ಯದೇವರು ತ್ರಾವಣ ಮಾಸದಲ್ಲಿ ರೇಣುಕವಿಜಯಪುರಾಣ ಶ್ರವಣ ಮಾಡಿದ ಸಂತೋಷಾರ್ಥವಾಗಿ ಪ್ರಭಾಪೋಷಣೆಗೆ 2 ರೂ. ಗಳನ್ನು ಸಮರ್ಪಿಸಿ ಕಳಿಸಿದ್ದಾರೆ.

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಪ್ರಾರ್ಥಿಸುತ್ತೇನೆ.

ಪಂಚಾಚಾರ್ಯಪ್ರಭಾ

ಗ್ರಹಿತನೆಯ ಸೆಪ್ಟೆಂಬರ್ ಶಾ॥ ೦೫ನೇ ಸೋಮವಾರ

ಗುರುಕುಲವಾಸ

ಪರಂಪರೆಯಾಗಿ ದೀಕ್ಷಾ, ನಿವಾಸಾದಿ ಸೋಪಸ್ಕರ ಕರ್ಮಗಳಲ್ಲಿ ಪೌರೋಹಿತ್ಯವನ್ನು ನಡೆಸಿಕೊಂಡು ಬಂದ ಮತಸ್ಥಲೋತ್ಪನ್ನ ರಂದ ವೀರಸೌಹಶೈವರ ವಟುಗಳನ್ನು ಜಗದ್ಗುರುಗಳು–ಪಟ್ಟಚಿತಾಧಿಕಾರಿಗಳು ತಮ್ಮ ಆಶ್ರಮದಲ್ಲಿಟ್ಟುಕೊಂಡು ಅವರಿಗೆ ದೀಕ್ಷಾವಿಧಿಯಾದ ಸಂಸ್ಕೃತವನ್ನು ಅಭ್ಯಸಿಸಿ ಶಿವಯೋಗಸಾಧನೆ, ದರ್ಮಶಂರಕ್ಷಣೆ, ಶಿಸ್ಯೋದ್ಧಾರಣೆ ಮೊದಲಾದ ಸ್ಯಕರ್ತವ್ಯಗಳಲ್ಲಿ ನಿಸ್ಣಾತರಾಗುವಂತೆ ಮಾಡಿ,ವುದೇ ಗುರುಕುಲವಾಸದ ಮುಖ್ಯ ಧ್ಯೇಯವಾಗಿದೆ ಇಂಥ ಗುರುಕುಲವಾಸಗಳೂ ಜಿಸ್ಸಾಶ್ರಮಗಳೂ ಈ ಹಿಂದೆ ಇದ್ದುದರಿಂದಲೇ ಧರ್ಮವಿನ್ನು ತನ್ನ ಸ್ಥಾನವನ್ನು ಕಾಯ್ದುಕೊಂಡು ಬಂದಿದ್ದಿತು. ಅದಕ್ಕಂತಯೇ ಗುರುಪೀಠಗಳು ಗಿರಿಗಹ್ವರಗಳಲ್ಲಿ ವಿರಾಜಿಸುತ್ತಿದ್ದವು ಬ್ರಹ್ಮಚಾರಿಗಳಾದ ವಟುಗಳು ಕಠಿಶದ್ಧಮನಸ್ಕರಾಗಿ ಗುರುಗಳ ಆಶ್ರಮದಲ್ಲಿದ್ದು ಕೊಂಡು ಗುರುಸೇವೆಯಿಸ್ಸಾ ಶಿರಸಾವಹಿಸಿ ಗುರಿ-ಮುಖದಿಂದ ವೇದ ವೇದಾಂಗಾದಿ ಸಕಲ ಶಾಸ್ತ್ರಪಾರಂಗತರಾಗಿ ಗುರುಗಳ ಕೃಪಾಶೀರ್ವಾದವನ್ನು ಹೊಂದಿ ಶಿಸ್ಯೋದ್ಧಾರಕಾರ್ಯವನ್ನು ಕೈಕೊಂಡು ದೇಶವಿಧ್ಯಂದಲ್ಲಿ ಭಕ್ತಾದಿಗಳಿಗೆ ಧರ್ಮಬೋಧೆಯನ್ನು ಮಾತುತ್ತಾ ಸನಾತನಧರ್ಮರಕ್ಷಣೆಯ ಭಾರವನ್ನು ವಹಿಸಿಕೊಳ್ಳ ಬೇಕಾಗುತ್ತಿತ್ತು ಅದರೆ ಈಗ ೬೦೦ ೪೦೦ ವರ್ಷಗಳಿಂದ ಬ್ರಿಟಿಷರ ಮನೋಹಕವಾದ ಸೌಭವನ ಅಳಿಕೆಯು ಬಂಬೂಡನೆ ಎಲ್ಲ ಗುರುಕುಲಗಳೂ ಆಶ್ರಮಗಳೂ ಮಾಯಾಶಕ್ತಿಯ ಕೈಮಾತ್ರಕ್ಕೆ ಜಾತಿ ಭೇದವಿಲ್ಲವೆಂಬ ದೊಡ್ಡ ಬಿರುಗಾಳಿಯು ಹೊಡತಕ್ಕೆ ಧರ್ಮದಲ್ಲಿ ಸಡಿಲುಹುಟ್ಟಿ ಗುರು ಶಿಸ್ಯಭಾವನೆಯು ಅಡಗಲಾರಂಭಿಸಿತು ಧರ್ಮದ ರಾಜ್ಯವು ಹೋಗಿ ದುಡ್ಡಿನ ರಾಜ್ಯವು ಉದಯವಾಯಿತು ದುಡ್ಡಿನ ಆಕೆಗಾಗಿ ಮಾತಾಹೇಶ್ವರ ವಟುಗಳು ಗುರುಕುಲಗಳಲ್ಲಿ ಇಂಗ್ಲೀಷ್ ಓದಿ ಬಿ ಎ, ಮೊದಲಾದ ಪರೀಕ್ಷೆಗಳಲ್ಲಿ ಪಾಸಾಗಿ ಗುರುತ್ವದ ಚಿಕ್ಕಗಳನ್ನೆಲ್ಲ ತೊರೆದು ದೂಡ್ಡ ದೊಡ್ಡ ನೌಕರಗಳಲ್ಲಿ ಸೇರುತ್ತ ದರ್ಮದ ಮರ್ಮವನ್ನೇ ತಿಳಿಯದಾದರು ಧಾರ್ಮಿಕರು ಸಹ ಯುಡ್ಡಿನ ಆಕೆಗೋಸ್ಕರ ಜವರೊಡನೆ ಬರೆತು ಮೂಲತತ್ವಗಳನ್ನು ಮರೆತರು ಸರಕಾರದವರು ಹೊಸ ಹೊಸ ಕಾನೂನುಗಳನ್ನು ಮಾಡುತ್ತ ಸರ್ವಸ್ವವನ್ನು ವಶಪಡಿಸಿಕೊಂಡು ಧರ್ಮಸ್ಥಾಕಂತ್ಯಕ್ಕೆ ತಿಲಾಂಜಲಿಯನ್ನು ಬಟ್ಟರು ಇದೆಲ್ಲಾ ಹುಚ್ಚಾಟವಿಟ್ಟೆ ಆಚಿರಿಸಿದ್ದರ ಫಲವಾಗಿದೆ ಗುರು ಗಳು ಕರ್ತವ್ಯನಿಸ್ಠರಾಗಿ ಶಿಸ್ಯೋಗಸಾಮ್ರಾಜ್ಯದಲ್ಲಿ ಲೀನವಾಗಿದ್ದರೆ ಈತರದ ಪರಿಸ್ಥಿತಿಯು ಬರಲು ಕಾರಣ ವಿದ್ದಿಲ್ಲ. ಜನುದಗ್ಗಿಯ ಆಶ್ರಮದಲ್ಲಿ ಕಾರ್ತವೀರ್ಯಾರ್ಜುನನ ಪರಿಸ್ಥಿತಿ ಯೇನಾಯಿತೆಂಬುದು ಎಲ್ಲರಿಗೂ ಗೊತ್ತಿರಬಹುದು ಅದರಂತೆ ಇನ್ನು ಮೇಲಾದರೂ ಗುರು ಗಳು ತಮ್ಮ ದಾಸಿಯನ್ನು ಬದಲಾಯಿಸಿ ಸಿರಿಸಂಪತ್ತು ಗಳನ್ನು ದೂರಿಸಲಿ ಕಾಮಕ್ರೋಧಾದಿ ಅರಿಷಡ್ವರ್ಗ ವನ್ನು ಹೋಗಲಾಡಿಸಿ ಶಿವಯೋಗದಲ್ಲಿ ಮಗ್ನರಾಗಿ ಮಾತೆಶ್ವರ ವಟುಗಳಿಗೆ ಸದ್ಬೋಧೆಯನ್ನು ಮಾಡುವ ಗುರುಳುಗಳಗಳ್ಳೆರ್ಪಡಿಸಿ ತಮ್ಮ ನಿಜಶಕ್ತಿಯನ್ನು ಜಗತ್ತಿಗೆ ತೋರಿಸಿಕೆಟ್ಟಲ್ಲಿ ಯಾವ ಸರಕಾರವೂ ಇವ ರನ್ನು ಅಲ್ಲಾಡಿಸಲಾರದು. ಅವಾಗ್ಲೇನೇ ಗುರುಗಳ ಶಕ್ತಿಯು ಹೆಚ್ಚಿ ಧರ್ಮವು ನೆಲೆಗೊಳ್ಳುವದು ಧರ್ಮ ಸ್ಥಾಪಕರಾದ ಆಚಾರ್ಯಭಗವತ್ಪಾದರು ದುಷ್ಟರನ್ನೂ ಧರ್ಮಘಾತಕರನ್ನೂ ತಮ್ಮ ಆತ್ಮಶಕ್ತಿಯಿಂದ ಸುಟ್ಟು ಬಿಡುವಂಥ ಸಾಮರ್ಥ್ಯವುಳ್ಳವರಾದುದರಿಂದಲೇ ಅವರಿಂದ ಧರ್ಮಸ್ಥಾಪನೆಯಾಗಿ ಇಂದಿಗೂ ನಡೆದುಬಂದಿದೆ. ಸ್ವತಂತ್ರ ಭಾರತದಲ್ಲಿ ದೇಶಭಾಷೆ, ಮಾತೃಭಾಷೆಗಳಿಗೆ ಸ್ಥಾನಾನ್ಯವಿದ್ದ ಈ ಸಮಯದಲ್ಲಿ ದುಡ್ಡುಳ್ಳ ಮಹಿಶೀಯರಾಗಲಿ, ಗುರುಗಳಾಗಲಿ ತಮ್ಮ ಹೆಣ್ಣಾದ ಮಕ್ಕಳನ್ನು ಸಪ್ತಿನಿಯೋಗಮಾಡಬೇಕೆಂದರೆ ಯೋಗ್ಯ ಸ್ಥಳದಲ್ಲಿ ಗುರುಕುಲವಾಸಗಳನ್ನು ನಿರ್ಮಿಸಿ ಅಲ್ಲಿ ಗುರು ವರ್ಗದ ಮಾರ್ಗದರ್ಶನ ಅಭ್ಯಾಸ ವನ್ನು ನಡೆಯಿಸಬೇಕು ಅಲ್ಲಿ ಉತ್ಕೃರ್ಣರಾದ ವಟು ಗಳಿಗೆ ಧನಸಹಾಯವನ್ನು ಮಾಡಿ ದೇಶಮಧ್ಯದಲ್ಲಿ ಧರ್ಮಬೋಧೆ ನಡೆಯುವಂತೆ ವ್ಯವಸ್ಥೆ ಮಾಡಬೇಕು. ಎಷ್ಟೋ ಮಂದಾಧಿಕಾರಿಗಳು ತಮಗೆ ಭೂಮಿ ಸೀಮೆಗಳು ಬೇಕಾದವನ್ನು ಇರುವೆಂದು ಓದುವುದನ್ನೇ ಮರೆತು ಬಿಡುತ್ತಾರೆ ಇಂಥವರಿಂದ ಶಿಸ್ಯಕೋಟಿಯು ಹೇಗೆ ಉತ್ಕರ್ಷವಾಗಬೇಕು ಗುರುಕುಲಾಗ್ನಣಗಳಲ್ಲಿದ ನಾಗ ನೂರು ಬ್ರಹ್ಮಸ್ಥರಾದ್ಯಸ್ಥ ಕೈ॥ ವೇ॥ ಸಂ॥ ಶ್ರೀಕಾಶೀನಾಥ ಶಾಸ್ತ್ರಿಗಳನು ಗುರುಕುಲದ ಈ ದುರವಸ್ಥೆಯನ್ನು ನೋಡಿ ಅವಮ್ಮು ಸುಧಾರಿಸಲು ಅಹೋರಾತ್ರಿ ಶ್ರಮಿ ಸಿದರು ಪಂಚಾಚಾರ್ಯರ ಸನ್ಮೇಳನ ಪಟ್ಟಚಿಂತಾಧಿ ಕಾರಿಗಳ ಸನ್ಮೇಳನಗಳಾಗಿ ಕರೆದರು ಕಾಶೀನಾಥ ಗ್ರಂಥವಾಲಯುಳ್ಳಿ ಅನೇಕ ಗ್ರಂಥಗಳನ್ನು ಸ್ಪಿಂಟು ಮಾಡಿಸಿ ದಕ್ಷ ಪರದೇಶಗಳಲ್ಲಿ ಪ್ರಚಾರಪಡಿಸಿದರು ಆದರೂ ಗುರುವರ್ಗವು ತೂಕಡಿಸುತ್ತಿಲೇ ಇರುವದು ಇನ್ನಾದಿರೂ ಗುರುವರ್ಗವು ಎಚ್ಚೆತ್ತು ಗುರುಕುಲವಾಸ ವನ್ನು ಮಾತಿ ವಿದ್ಯಾವಿಭೂಷಿತರಾಗಿ ಧರ್ಮಬೋಧೆಯ ಕಾರ್ಯವನ್ನು ಕೈಕೊಳ್ಳಬೇಕು ಇದಕ್ಕೆ ಅಳಿವಿಲ್ಲ, ಯಾರ ಆತಂಕವೂ ಇಲ್ಲ ಇದರಂತೆ ಆಚರಿಸಿ ಇಹಪರ ಕೇರ್ತಿಕಾಂಜಂಗಳಿಸೆಂಬುದೇ ಗುರುಕುಲವಾಸದ ಮುಖ್ಯ ಉದ್ದೇಶವಾಗಿದೆ

ಸತ್ಪ್ರವ್ಯವಹಾರ

[ಭಾಕ್ತೀದಾರರು ಅಭಿಸ್ರಾಯ ಸಡುವ ಲೇಖನಗಳಿಗೆ ಪತ್ರಿಕಾಕರರು ಜವಾಬ್ದಾರರಲ್ಲ ಎಂಬ ವಿಷಯವನ್ನು ಕರ್ರೂ ಲಕ್ಷ್ಯದಲ್ಲಿಡಬೆಕ್ಕಿದ್ದು —ಸಂ]

ನಿಜಾಶ್ರಯದಲ್ಲಿ ನಿಜ್ಯಂಭಣೆಯಿಂದ ಪುರಾಣದ ಸಮಾಪ್ತಿಯು ಮೆರವಣಿಗೆ

ದಿನಾಂಕ ೨೫-೮-೫೨ ನೇ ದಿವಸ ವಿಜಾಪುರ ಶಹರದ ಜೋರಾಪೂರ ಪೇರದಲ್ಲಿ ಪವಿತ್ರ ಶ್ರಾವಣ ಮಾಸದ ಶಿವಿಷ್ಠ ಶ್ರೀ ಮಲ್ಲಿಕಾರ್ಜುನ ದೇವಾಲಯದ ಮುಂಭಾಗ ದಲ್ಲಿ ಸದ್ಭಕ್ತರಿಂದ ಬಹು ಶ್ರಮವಹಿಸಿ ಈ ಮೊದಲೇ ನಿರ್ಮಿಲ್ಪಟ್ಟ ಭವ್ಯ ಮಂಟಪದಲ್ಲಿ ಶ್ರಾವಣ ಶುದ್ಧ ೫ ರಿಂದ ಭಾದ್ರಪದ ಶುದ್ಧ ೪ ವರೆಗೆ ಒಂದು ತಿಂಗಳು ಪೂರ್ಣ ಶ್ರೀ ಸಿದ್ಧರಾಮೇಶ್ವರ ಪುರಾಣವು ನಡೆದು ಮೇಲ್ಕಾಣಿಸಿದ ದಿನಾಂಕಕ್ಕೆ ಸಮಾಪ್ತಿಗೊಂಡಿತು. ದಿನಾಲು ಪುರಾಣದ ಶ್ರವಣದ ನಿನಿತ್ತ ೩೦೦೦ ಮೇಲ್ಪಟ್ಟು ಜನರು ಆಗಮಿಸುತ್ತಿದ್ದರು ಸದರ ಪುರಾಣ ವನ್ನು ವೇದಮೂರ್ತಿ ಮಹಾನುಭವಿಗಳಾದ ದಾಸ್ಯಾಳ ಮರದ (ತಾಲ್ಲೂಕು ವಿಜಾಪುರ) ವಿದ್ವಾನ ಮಹಿವಾ ಳ್ಯಶಾಸ್ತ್ರಿಗಳು ತಮ್ಮ ಅವ್ಯತವಾಣಿಯಿಂದ ಜನ ಸಮುದಾಯಕ್ಕೆ ಪುರಾಣದ ಒಳಿದಿಂದ ಭಕ್ತಿಮಾರ್ಗ ವನ್ನು ತೋರ್ಪಡಿಸಿಕೊಟ್ಟರು ಆದರಂತೆ ಶ್ರೀ ವಿರು ಪಾಕ್ಷಯ್ಯನವರು ತಮ್ಮ ರಸಭರಿತವಾದ ವಾಣಿಯಿಂದ ಬಸವೇಶ್ವರ ವಚನಗಳನ್ನು ಪಾಸ್ತೋಕ್ತ ರೀತಿಯಿಂದ ಹಾಡಿ ವಚನದ ತಿರುಳನ್ನು ತೋರ್ಪಡಿಸುತ್ತಿದ್ದರು. ಪುರಾಣ ಸಮಾಪ್ತಿಯವಂಠರ ದಿವ್ಯವಾದ ರಥೋತ್ಸವಕ್ಕೆ ೧೦೧ ಎತ್ತುಗಳನ್ನು ಹೂಡಿ ಆ ಅಮರಸಿದ್ಧರಾಮನ ಪುರಾಣವನ್ನು ಮೆರವಣಿಗೆಯಿಂದ ಮತ್ತು ೧೦೧ ಕಲಶ ದಿಂದೊಡಗೂಡಿದ ಮುತ್ತೈದಿಯರಿಂದ, ನಗಾರಿನೌಬತ್ತು ಬೆಂಡ ಬಾಜ ಇತ್ಯಾದಿ ಹೊಸ ಹಳೇ ಪದ್ಧತಿಯ ೧೦ ಪ್ರಕಾರದ ವಾದ್ಯಗಳಿಂದ ಹೊರಡಿಸಿದ್ದಾಗಿತ್ತು. ಈ ಉತ್ಸವಕ್ಕೆ ೧೫೦೦೦ ಮೇಲ್ಪಟ್ಟು ಜನ ಕಿಕ್ಕಿರಿದು ನೆರೆದಿದ್ದರು. ಉತ್ಸವವು ಭುರದ ಮುಖ್ಯ ಮುಖ್ಯ ಓಣಿಗಳಲ್ಲಿಯೂ, ಬಜಾರದಲ್ಲಿಯೂ ಹಾಯ್ದು ಮಧ್ಯಾಹ್ನ ೨ ಘಂಟೆಗೆ ಸಿದ್ಧರಾಮೇಶ್ವರ ದೇವಾಲಯಕ್ಕೆ ತಲ್ಪಿ ತಿರಿಗಿ ಸಂಜೆ ೬ ಘಂಟೆಗೆ ಮಲ್ಲಿಕಾರ್ಜುನನ ದೇವಾ ಲಯಕ್ಕೆ ತಲ್ಪಿತು. ಪುರಾಣದ ಸಮಾಪ್ತಿ ಸಮಯಕ್ಕೆ ಮಲ್ಲಿಕಾರ್ಜುನ ದೇವನು ಒರ್ವ ಭಕ್ತನ ಹಾಯನವನ್ನು ಪ್ರವೇಶಿಸಿ ಮರುದಿವಸದ ಅಷ್ಟಸಂತರ್ಪಣೆಯ ಕಾಲಕ್ಕೆ ಗಣಾರಾಧನೆ, ರುದ್ರಾಭಿಷೇಕ ಮಾಡಲು ದಿವ್ಯ ವಾಣಿ ಯಿಂದ ಪುಡಿದನು ಅದರಂತೆ ಬಡಿಗ್ಗರಿಂದ ಅಷ್ಟ ಸಂತರ್ಪಣೆಯಾಯಿತು. ಒರ್ವ ಶ್ರೇಕ್ಷಕ

ಹಂಚೀಗುಂಜದಲ್ಲಿ ನೀರಿನ ಗೋಳು

ಧಾರವಾಡ ಜಿ॥ ಕುಂದಗೋಳ ಮಂಡಲ ವೈಕಿ ಹಂಚೀಗುಂಜ ಮತ್ತು ಚಿಕ್ಕಗುಂಜ ಈ ಗ್ರಾಮದ ರೈತರ ವ. ಕೂಲಿಕಾರರ ಗೋಳು ಹೇಳಲಿಕ್ಕೆ ಬಾರದು ತಿನೆ ನೀರಿನ ಆರಬು ಆಗಿ ಆರುತಿಂಗಳಾಗುತ್ತಾ ಬಂದಿರು ವದು ಮೂರು ನಾಲ್ಕು ಸೈಲು ದೂರದಿಂದ ನೀರು ತರುತ್ತೀವೆ ಮೆಯಾಗಿಪ್ಪ, ಭೂಮಿಯಲ್ಲಿ ಬೀಜ ಹಾಕಿಲ್ಲ ರೈತರು ನ ಬಡವರು ಮುಂದೇನು ಗತಿಯೆಂದು ಗಾಬರಿಯಾಗಿರುತ್ತಾರೆ ಬಡವರಿಗೆ ಉದ್ಯೋಗವಿಲ್ಲ ಎಲ್ಲರಿಗೂ ನೀರಿನ ಉದ್ಯೋಗವೆ ಉದ್ಯೋಗ. ಜಿಲ್ಲಾಧಿ ಕಾರಿಗಳು ಈ ಎರಡು ಗ್ರಾಮಕ್ಕೆ ನೀರಿನ ಕೊರತೆಯನ್ನು ಹೋಗಲಾಡಿಸಬೇಕೆಂದು ವಿನಂಂತಿಮಾಡಿಕೊಳ್ಳುತ್ತೇವೆ.

ಒರ್ವ ಹಂಚೀಗುಂಜದ ರೈತ

ವಾರ ಭವಿಷ್ಯ

ಲೇ. ಯಡಿಯೂರು ಸಾರಂಗಾಚಾರ್ಯಾಗ್ನಿಹೋತ್ರಿ ಜ್ಯೋತಿರ್ಮಾರ್ತಂಡ ವೇ॥ ಶಿಪ್ರಾಚಾರ್ಯಶಾಸ್ತ್ರಿಗಳು

(ತಾ॥ ೧೪-೯-೫೨ ರಿಂದಾ ತಾ॥ ೨೦-೯-೫೨ ರ ವರೆಗೆ)

ಮೇಷ—ಈ ವಾರದಲ್ಲಿ ಮಿಶ್ರಯೋಗದ ಫಲ ವುಂಟಾಗುವದು.

ವೃಷಭ—ಈ ರಾತಿಯವರಿಗೆ ಈ ವಾರದಲ್ಲಿ ಸ್ಥಿರ ಆಸ್ತಿಗಳಿಂದ ಸುಖವಿಲ್ಲಾ

ಮಿಥುನ—ಈ ರಾತಿಯವರಿಗೆ ಈ ವಾರದಲ್ಲಿ ಫಲವು ಮಿಚಿನಂತಿದೆ

ಕರ್ಕ—ಕಷ್ಟದಂತೆ ಫಲ. ಮನ, ಶರೀರ, ದುಡಿಸಿರಿ ಸುಖವುಂಟು

ಸಿಂಹ—ಈ ವಾರದಲ್ಲಿ ಅನ್ಯತಿವು ಕೈಯ್ಯಲ್ಲಿದೆ, ವಿಚಾರಿಸಿ ಊಟಮಾಡಿರಿ

ಕನ್ಯಾ—ಹರ ಗುರುಗಳ ಸ್ತೋತ್ರಾದಿಗಳಿಂದ ಮಿಶ್ರ ಫಲ ಹೊಂದಿರಿ.

ತುಲಾ—ಸಾಧಾರಣ ಸುಖವುಂಟು. ಆದರೆ ತಂದಿದೆ ಸಾಂಬನನ್ನು ಬಿಡಬೇಡ

ವೃಶ್ಚಿಕ—ನಿಷ್ಕಾಳಜ್ಞದ್ದರಿಂದ ಕಷ್ಟವುಂಟಾಗುವದು.

ಧನು—ಗುರು, ಶಿವ, ದೇವತೆ ಪೂಜೆಮಾಡಿರಿ. ಈ ವಾರ ಸುಖ ಹೊಂದುವಿರಿ.

ಮಕರ—ಅಸಾಧಾರಣವಾದ ಈಕಸ್ಥನ್ನು ಸ್ವಾರ್ಥಿಸಿ ಸಾಧಾರಣ ಸುಖ ಪಡೆಯಿರಿ

ಕುಂಭ—ಎಚ್ಚರದಿಂದ ಅಳ್ಳುತಾಗ್ಗಳನಂತೆ ಧರ್ಮಪ್ರವರ್ತರಾದಲ್ಲಿ ಸುಖವುಂಟು.

ಮೀನ—ಈ ವಾರದಲ್ಲಿ ಈ ರಾತಿಯವರಿಗೆ ಮಾನಸಿಕ ವ್ಯಥೆ ಧನವ್ಯಯಗಳುಂಟು.

ದೇವನಾಗರಿಲಿಪಿ ಬಗ್ಗೆ ಮೊತನ ಕೋಡ್

ನಾಗಪುರ, ಛಿಂದದಾರಾ ಪ್ರದೇಶದ ನಾಗರಿಕರಾದ ಶ್ರೀ ಕೇತೆಕೀಲಾಲ್ ಭೌರಾಸಿಯಾರವರು ಬೆಲಿಜಾಭ್ಯ ಮೂಲಕ ದೇವನಾಗರಿಲಿಪಿಯನ್ನು ಕಳುಹಿಸಲು ಒಂದು ಮೊತನ 'ಕೋಡ್' ಕಂಡುಹಿಡಿದಿದ್ದಾರೆಂದು ತಿಳಿದು ಬಂದಿದೆ.

ರಷ್ಯಾಭಾಷೆಯಲ್ಲಿ "ಮಹಾಭಾರತ"

ರಷ್ಯಾ ಭಾಷೆಯಲ್ಲಿ ಭಾಷಾಂತರಿಸಿದ "ಮಹಾ ಭಾರತ" ಗ್ರಂಥವನ್ನೆಳೆಗೊಂಡು ಒಟ್ಟು ೩೬೦ ಪುಸ್ತ ಗಳನ್ನು ಕಳ್ಳತ್ತಾ ವಿಶ್ವವಿದ್ಯಾನಿಲಯಕ್ಕೆ ಸೋವಿಯೆಟ್ ಪ್ರೇಸ್ ವಿಶೇಷಾಧಿಯವರು ಬಹುಮಾನವಾಗಿತ್ತಿದ್ದಾರೆ ಅಂಗ್ಲ ಮತ್ತು ರಷ್ಯ ಭಾಷೆಗಳಲ್ಲಿರುವ ಈ ಪುಸ್ತ ಗಳನ್ನು ವಿಶ್ವವಿದ್ಯಾನಿಲಯದ ವೈಸ್-ಛಾನ್ಸೆಲರ್ ಆ ಡಾ॥ ಎಸ್. ಎಚ್. ಬ್ಯಾಕರ್ಜಿಯವರು ಸ್ವೀಕರಿಸಿದರು.

ವರ್ತಮಾನಸಂಗ್ರಹ

ಕಾಂಗ್ರೆಸ್ ಅಧಿವೇಶನ

ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಮುಂದಿನ ಧಿವೇಶನ ಗೋಲ್ಕೊಂಡದಲ್ಲಿ ನಡೆಯುತ್ತದೆ. ಎಂದು ಳೆದುಬಂದಿದೆ. ಶ್ರೀಮತಿ ವಿಜಯಲಕ್ಷ್ಮೀ ಪಂಡಿತ ವರು ಅಖಿಲ ಭಾರತದ ಕಾಂಗ್ರೆಸ್‌ನ ಅಧ್ಯಕ್ಷರಾಗುವ ಸೂಚನೆಗಳು ಕಂಡುಬಂದಿವೆ

ಶ್ರೀ ಅಜಯಘೋಷ್‌ಗೆ ರಷ್ಯಾದ ಆಹ್ವಾನ

ಮಾಸ್ಕೋವಿನಲ್ಲಿ ಆಕ್ಟೋಬರ್ ತಿಂಗಳಲ್ಲಿ ನಡೆಯು ರುವ ಕಮ್ಯೂನಿಸ್ಟ್ ಪಕ್ಷದ ೧೯ನೇ ವಾರ್ಷಿಕ ನ್ಮೈಳನದಲ್ಲಿ ಭಾಗವಹಿಸಬೇಕೆಂದು ಭಾರತ ಕಮ್ಯೂ ನಿಸ್ಟ್ ಪಕ್ಷದ ಕಾರ್ಯದರ್ಶಿ ಶ್ರೀ ಅಜಯಘೋಷ್‌ರವರಿಗೆ ಆಹ್ವಾನ ಬಂದಿದೆಯೆಂದು ಕಮ್ಯೂನಿಸ್ಟ್ ಪಕ್ಷೀಯ ಪ್ರಕಟಣೆ ತಿಳಿಸಿದೆ

ವಿಶ್ವದಲ್ಲೆಲ್ಲೇ ಕ್ಷಾಮವಾದರೂ ಧಾನ್ಯ ಸಹಾಯ

ವಿಶ್ವದ ಯಾವ ಭಾಗದಲ್ಲೇ ಆಗಲಿ ಕ್ಷಾಮವೊದ ದಲ್ಲಿ ಆಹಾರ ಧಾನ್ಯಗಳನ್ನು ಸರಬರಾಜುಮಾಡುವ ಲುವಾಗಿ ವಿಶ್ವ ಆಹಾರಧಾನ್ಯ ಸಂಗ್ರಹಣ ಸಮಿತಿ ಯೊಂದನ್ನು ನೇಮಿಸುವ ಬಗ್ಗೆ ಸೆ ೧೫ ರಂದು ವಿಶ್ವದ ಂಚಿಮಹಾರಾಷ್ಟ್ರಗಳ ಪ್ರತಿನಿಧಿಗಳ ಸಭೆಯು ರೋಮ್ ಲ್ಲಿ ಸಮಾವೇಶಗೊಳ್ಳಲಿದೆ.

ಮನುಷ್ಯರು ೧೫೦ ವರ್ಷ ಬದುಕಬಹುದು

ಸೋಡಾವನ್ನು ಹೆಚ್ಚಿಗೆ ಬಳಸುವುದರಿಂದ ಮನುಷ್ಯನ ಆಯುಸ್ಸು ಹೆಚ್ಚುವುದೆಂದೂ, ಸೋಡಾವನ್ನು ಇಂಜೆಕ್ಷನ್ ರೂಪದಲ್ಲಿ ಮನುಷ್ಯನ ರಕ್ತಕಣಗಳಿಗೆಗಳಿಗೆ ಬಿಟ್ಟರೆ ಮನುಷ್ಯನು ೧೫೦ ವರ್ಷಗಳ ಕಾಲ ಬದುಕುವಂತೆ ಮಾಡಬಹುದೆಂದೂ ರಷ್ಯದ ಸುಪ್ರಸಿದ್ಧ ಪ್ರಾಣಿ ಶಾಸ್ತ್ರಜ್ಞರು ಮಾಸ್ಕೋದಿಂದ ಮಾಡಿದ ರೇಡಿಯೋ ಪ್ರಸಾರವೊಂದರಲ್ಲಿ ತಿಳಿಸಿದ್ದಾರೆ.

ಅಸ್ಸಾಮಿನಲ್ಲಿ ಪ್ರವಾಹ

ಬ್ರಹ್ಮಪುತ್ರ ಮತ್ತು ಬಿಜು ನದಿಗಳಲ್ಲಿ ಭಾರಿಪ್ರವಾಹ ಂದು, ದಕ್ಷಿಣ ದಡದಳಿಗೆ ೬೫ ಚದರ ಮೈಲಿ ಕ್ಷೇತ್ರ ುಳುಗಿದೆ. ೭೦೦೦ ಜನರು ಕಷ್ಟಕ್ಕೆ ಸಿಕ್ಕಿದ್ದಾರೆ ೦೦ ಮಂದಿ ಕಷ್ಟವಾಸಿ ಪ್ರಾಥಮಿಕಶಾಲೆ ಬಳಿ ಇರುವ ಕ್ಷರವಾದ ಪ್ರದೇಶದಲ್ಲಿ ರಕ್ಷಣೆ ಪಡೆಯುತ್ತಿದ್ದಾರೆ. ನೆಲ ಗುತ್ತಿಸಲುಗಲ್ಲಿ ೪-೫ ಅಡಿ ನೀರು ನಿಂತಿದೆ. ಲವರು ನೀರಿನಲ್ಲಿ ಕೊಚ್ಚಿಹೋದರೆಂದು ಸಹ ವರದಿ ಂದಿದೆ.

ಕಾರ್ಮಿಕ ದಿನಾಚರಣೆಯಲ್ಲಿ ೩೫೪ ಮಂದಿ ಸಾವು

ಅಮೆರಿಕದ ಕಾರ್ಮಿಕ ದಿನಾಚರಣೆ ಸಂದರ್ಭದಲ್ಲಿ ಸಿಟ್ಟೆದ್ದ ಮೂರು ದಿಕ್ಕಿಗಳ ರಭಸದಲ್ಲಿ ಅಪಘಾತಗಳಿಂದ ೨೪ ಮಂದಿ ಸತ್ತಿರೆಂದು ವರದಿಯಾಗಿದೆ

ನೇಪಾಳದ ಮಾಜಿ ಪ್ರಧಾನಿ

ನೇಪಾಳದ ಮಾಜಿ ಪ್ರಧಾನಿ ಶ್ರೀ ಎಂ ಪಿ ಕೊಯಿ ಲ ಮತ್ತು ಇನ್ನಿಬ್ಬರು ಕಾಂಗ್ರೆಸ್ ಮಂತ್ರಿಗಳನ್ನು ಂಗ್ರೆಸ್ಸಿನಿಂದ ಮೂರು ವರ್ಷ ದಂಡಿಸಬೇಕೆಂದು ಂಗ್ರೆಸ್ ಕಾರ್ಯಕಾರೀ ಸಮಿತಿಯು ಮಾಡಿದ ತೀರ್ಮಾನ ನ್ನು ಅಖಿಲ ನೇಪಾಳ ಕಾಂಗ್ರೆಸ್ ಸಮಿತಿಯು ಸ್ವೀಕರಿಸಿತು.

ಕೈತರ ಉಪವಾಸ

ಸಹಪ್ರಮಂದಿ ಕೈತರು ಮದಪಲ್ಲಿ ತಾಲ್ಲೂಕಿನಲ್ಲಿನ ಕ್ಷಾಮ ಪರಿಸ್ಥಿತಿಯನ್ನು ಪರಿಹರಿಸಲೋಸುಗ ಪರಿಹಾರ ಕಾರ್ಯಗಳನ್ನು ಆರಂಭಿಸಬೇಕೆಂದೂ, ಸಾಲವನ್ನು ಕೊಡಬೇಕೆಂದೂ ಒತ್ತಾಯಪಡಿಸಿ ಇಲ್ಲಿನ ತಾಲ್ಲೂಕ್ ಕಛೇರಿಯಮುಂದೆ ೨ ದಿನಗಳ ಉಪವಾಸ ಮುಷ್ಕರ ವನ್ನು ೧೫ನೇ ತಾ! ದಿನ ಆರಂಭಿಸಿದ್ದಾರೆ ಈ ತಾಲ್ಲೂಕಿನ ೨೦ ಸಹಸ್ರಮಂದಿ ಕೈತರಿಗೆ ಏನೂ ಕೆಲಸವಿಲ್ಲ ದಂತಾಗಿದೆಯೆಂದೂ ಕೈತರ ಪರ ನಾಯಕರು ರೆವಿನ್ಯೂ ಅಧಿಕಾರಿಗಳಿಗೆ ಮನವಿಯೊಂದನ್ನು ಸಲ್ಲಿಸಿದ್ದಾರೆ ಡಿವಿಜನಲ್ ಎಂಜನಿಯರ್‌ರವರು ೪೦೦ ಮಂದಿ ಕೈತರಿಗೆ ಪರಿಹಾರ ಕೊಡುವುದಾಗಿ ಭರವಸೆ ಇತ್ತಾಗ್ಯೂ ಮುಷ್ಕರ ವನ್ನು ಸಲ್ಲಿಸಲಿಲ್ಲವೆಂದು ತಿಳಿದುಬಂದಿದೆ

ಹಿಂದಿಗೆ 'ಭಾರತಿ' ಎಂಬ ಹೆಸರಿಡಬೇಕು

ಹಿಂದಿಯು ರಾಷ್ಟ್ರಭಾಷೆಯಾಗಿರುವುದರಿಂದ ಅದನ್ನು 'ಭಾರತಿ' ಎಂದು ಕರೆಯಬೇಕು ಎಂದು ಮಧ್ಯ ಪ್ರದೇಶದ ಮಾಜಿ ಗವರ್ನರಾದ ಶ್ರೀ ಮಂಗಳದಾಸ ಪಕ್ಕಾಸರವರು ತಿಳಿಸಿದ್ದಾರೆ ನನ್ನ ರಾಷ್ಟ್ರದ ಹೆಸರು 'ಭಾರತ' ಎಂದಿರುವುದರಿಂದ ರಾಷ್ಟ್ರಭಾಷೆಯ ಹೆಸ ರನ್ನೂ 'ಭಾರತಿ' ಎಂದು ಕರೆಯುವುದು ಸೂಕ್ತವೆಂದು ಅವರು ಅಭಿಪ್ರಾಯಪಟ್ಟಿದ್ದಾರೆ.

ಎಂ. ಎಲ್. ಎ. ಗಳಿಗೆ ಫೈಲು ತೋರಿಸಬೇಡಿ

ಹೈದರಾಬಾದು ಸರ್ಕಾರದ ಆಜ್ಞೆ

ಕಾನೂನು ಪ್ರಕಾರ ಫೈಲುಗಳನ್ನು ಪರೀಕ್ಷಿಸಲು ಅಧಿಕಾರವಿದ್ದ ನೌಕರು ಸರಕಾರದ ಅಧಿಕಾರಿಗಳು ಎಂ ಎಲ್ ಎ ಗಳಿಗೆ ಸರಕಾರದ ಫೈಲುಗಳನ್ನು ತೋರಿಸಲಾಗದೆಂದು ಹೈದ್ರಾಬಾದು ಸರಕಾರ ನಾನಾ ಕಾರ್ಯದರ್ಶಿಗಳಿಗೂ ಕಲೆಕ್ಟರುಗಳಿಗೂ ಸೂಚನೆ ಇತ್ತಿರೆಯೆಂದು ತಿಳಿದುಬಂದಿದೆ ಇತ್ತೀಚೆಗೆ ಹಲವು ಎಂ. ಎಲ್. ಎ ಗಳು ಕೆಲವು ಆಡಳಿತಗಳಿಗೆ ಹೋಗಿ ಫೈಲುಗಳನ್ನು ಪರಿಶೀಲಿಸಿದ್ದಲ್ಲದೆ, ದಕ್ಷತೆಯಿಂದ ಕೆಲಸ ನಡೆಸದೇ ಇರುವುದಕ್ಕಾಗಿ ಹಲವು ಗುಮಾಸ್ತರನ್ನೂ ಹೆದರಿಸಿದರೆಂದು ಸಹ ವರದಿ ಬಂದಿದೆ

ಬಿ. ಎ ಬದಲು ಎಲ್. ಎಲ್. ಎಂ ಡಿಗ್ರಿ

ಪೂನಾ ವಿಶ್ವವಿದ್ಯಾನಿಲಯದ ಬಿ ಎ ಪರೀಕ್ಷೆಗೆ ಕುಳಿತು ಉತ್ತೀರ್ಣಾಳಾದ ಮಹಿಳೆಯೊಬ್ಬಳು ಕಾನ್ಸ್ಟೇ ಕೇಷನ್ನಿಗೆ ಸ್ವತಃ ಹೋಗಲು ಸಾಧ್ಯವಿಲ್ಲದ್ದರಿಂದ ಪೋಸ್ಟ್ ಮೂಲಕ ಡಿಗ್ರಿ ಸರ್ಟಿಫಿಕೇಟ್ ಕಳುಹಿಸಲು ೧೫ ರೂ. ಕಟ್ಟಬಲು, ಆಕೆಗೆ ಬಿಡಾಲಿನಲ್ಲಿ ಬಿ ಎ. ಡಿಗ್ರಿಗೆ ಬದಲು ಎಲ್. ಎಲ್. ಎಂ. ಡಿಗ್ರಿ ಬಂದಿದೆಯಂತೆ. ಆಕೆಯು ಓದಿದ್ದು ಒಂದಾದರೆ ಪಡೆದುದೇ ಬೇರೊಂದು

ಹೈದರಾಬಾದಿನಲ್ಲಿ ಗೇಣಿದಾರರಿಗೆ ರಕ್ಷಣೆ

ಹೈದರಾಬಾದಿನಲ್ಲಿ ಸಾಗುವಳಿ ಮಾಡುತ್ತಿರುವ ಭೂಮಿಗಳಿಂದ ಗೇಣಿದಾರರನ್ನು ಉಚ್ಚಾಟನೆ ಮಾಡ ದಂತೆ ತಡೆಗಟ್ಟುವ ಆರ್ಡಿನೆನ್ಸ್ ಒಂದನ್ನು ಹೈದರಾ ಬಾದಿನ ರಾಜಪ್ರಮುಖರಾದ ನಿಜಾಮರು ಹೊರಡಿ ಸಿರುವರು ಶೀಘ್ರದಲ್ಲಿ ಅದು ಜಾರಿಗೆ ಬರುವುದಾಗಿದೆ.

ಈ ವರ್ಷ ಮಾರ್ಚ್ ೩೧ರ ಹಂತರ ಜಮೀನು ದಾರರುಗಳಿಂದ ಇತರರಿಗೆ ಮಾರಲ್ಪಟ್ಟಿರುವ ಜಮೀನು ಗಳ ಮಾರಾಟವನ್ನು ಈ ಆಜ್ಞೆ ರದ್ದುಗೊಳಿಸುವು ದಾಗಿದೆ. ಜಮೀನಿನಿಂದ ಬಿಡಿಸಲ್ಪಟ್ಟಿರುವ ಗೇಣಿದಾ ರಿಗೆ ಮತ್ತೆ ಜಮೀನನ್ನು ಕೊಡಿಸಿಕೊಡಲು ಕಲೆಕ್ಟರಿಗೆ ಅಧಿಕಾರವಿದೆ. ಈ ಆರ್ಡಿನೆನ್ಸ್ ಜಾರಿಗೆ ಬಂದ ಮೇಲೆ ಉದ್ದೇಶಪೂರ್ವಕವಾಗಿ ಜಮೀನನ್ನು ಗೇಣಿದಾರನಿಂದ ಕಿತ್ತುಕೊಂಡು ತಾನೇ ಸ್ವಂತಕ್ಕೆ ಇಟ್ಟುಕೊಳ್ಳುತ್ತಿರು ಅಥವಾ ಮತ್ತೊಬ್ಬರಿಗೆ ವಹಿಸಿಕೊಡುವುದು ಮುಂತಾದ ಕಾರ್ಯಗಳನ್ನು ನಡೆಸುವ ಜಮೀನುದಾರರಿಗೆ ೬ ತಿಂಗಳ ವರೆಗೆ ತಿಕ್ಕೆ ವಿಧಿಸಬಹುದು ಅಥವಾ ೩೦೦ ರೂ. ವರೆಗೆ ದಂಡಹಾಕಬಹುದು ಅಥವಾ ಎರಡನ್ನೂ ವಿಧಿಸಬಹುದು. ಈ ಆರ್ಡಿನೆನ್ಸ್ ಜಾರಿಗೆ ಬಂದನಂತರ ಯಾವುದೇ ಜಮೀನುದಾರನೂ ಗೇಣಿದಾರರಿಂದ ಜಮೀನನ್ನು ಬಿಡಿಸುವ ಬಗ್ಗೆ ಕೋರ್ಟಿನಲ್ಲಿ ವ್ಯವಹಾರವನ್ನು ಹೂಡು ವಂತಿಲ್ಲ ಈಗ ಇರುವ ಇಂತಹ ವ್ಯವಹಾರಗಳನ್ನೂ ಮುಂದುವರಸದೆ ನಿಲ್ಲಿಸಲಾಗುತ್ತದೆ ಗೇಣಿದಾರರಿಗೆ ಕಲೆಕ್ಟರು ಭೂಮಿಯನ್ನು ವಹಿಸಿಕೊಟ್ಟ ೧೫ ದಿನ ಗಳೊಳಗೇ ಜಮೀನುದಾರರು ಆಪಿಲು ಮಾಡಬಹುದು.

ನಾನಾ ಭಾಷೆಗಳಲ್ಲಿ ಭಾರತದ ರಾಜ್ಯಾಂಗ

ಭಾರತದ ರಾಜ್ಯಾಂಗವನ್ನು ಭಾರತದ ನಾನಾ ಭಾಷೆ ಗಳಲ್ಲಿ ಭಾಷಾಂತರಿಸಲಾಗಿದೆ ಇಂಗ್ಲಿಷ್, ಹಿಂದಿ, ಕನ್ನಡ, ತಮಿಳು ತೆಲುಗು ಮುಂತಾದ ಭಾಷೆಗಳಲ್ಲೆಲ್ಲ ರಾಜ್ಯಾಂಗವನ್ನು ಓದಬಹುದು.

ಆಯಾ ಭಾಷೆಗಳ ಲಿಪಿಯಲ್ಲಿಯೇ ಅಲ್ಲದೆ ಆಯಾ ಭಾಷೆಗಳಲ್ಲಿಯೇ ದೇವನಾಗರಿ ಲಿಪಿಯಲ್ಲಿಯೂ ಪ್ರತಿಯನ್ನು ತಯಾರಿಸಲಾಗುವುದು ಎಂದು ಗೊತ್ತಾಗಿದೆ. ಎಂದರೆ ಕನ್ನಡ ಭಾಷೆಯಲ್ಲಿರುವ ರಾಜ್ಯಾಂಗದ ಪ್ರತಿಯನ್ನು ಕನ್ನಡ ಲಿಪಿಯಲ್ಲಿಯೂ ಅಚ್ಚು ಮಾಡಲಾಗುವುದು; ದೇವನಾಗರಿ ಲಿಪಿಯಲ್ಲಿಯೂ ಅಚ್ಚು ಮಾಡಲಾಗು ವುದು, ಭಾಷೆ ಕನ್ನಡ, ಲಿಪಿ ಮಾತ್ರ ದೇವನಾಗರಿ.

ಈ ರೀತಿ ಎರಡೆರಡು ಲಿಪಿಗಳಲ್ಲಿ ತಯಾರಾಗುವ ಪ್ರತಿಗಳು ಕನ್ನಡ, ಅಸ್ಸಾಮಿ, ಕಾಶ್ಮೀರಿ, ಸಂಸ್ಕೃತ, ಬಂಗಾಳಿ, ತಮಿಳು ಮತ್ತು ತೆಲುಗು ಭಾಷೆಗಳಲ್ಲಿರುವ ರಾಜ್ಯಾಂಗದ ಪ್ರತಿಗಳು

ಇದರಿಂದ ದೇವನಾಗರಿ ಲಿಪಿಯು, ಜನಪ್ರಿಯವಾಗು ವುದಲ್ಲದೆ ದೇವನಾಗರಿ ಲಿಪಿ ಮಾತ್ರ ಗೊತ್ತಿರುವವರು ಇತರ ಭಾಷೆಗಳಲ್ಲಿ ಅಸಕ್ತಿ ಬೆಳಸಿಕೊಳ್ಳಬಹುದು

ಜಪಾನ್ ಆಕ್ರಮಣ ಎದುರಿಸಲು ರಷ್ಯಾ-ಚೀನ ಸಿದ್ಧ

ಜಪಾನ್ ಅಥವಾ ಅದರ ಯಾವ ಅನುಯಾಯಿ ರಾಷ್ಟ್ರಗಳೇ ಆಗಲಿ ಆರಂಭಿಸಬಹುದಾದ 'ಹೊಸ ಆಕ್ರಮಣ'ವನ್ನೆದುರಿಸಲು ಸೋವಿಯೆಟ್‌ರಷ್ಯಾ ಮತ್ತು ಚೀನ ಬಲಯುತವಾಗಿದೆಯೆಂಬ ಗ್ಯಾರಂಟಿಯನ್ನು ಕೊಡುವುದಾಗಿ ಚೀನದ ಮಾರ್ಷೆ-ಟುಂಗ್‌ರವರು ತಿಳಿ ದ್ದಾರೆ ಜಪಾನ್ ವಿರುದ್ಧಪ್ರಥಮ ಗೆಲುವಿನದಿನಾಚರಣೆಯ ಸಂಬಂಧದಲ್ಲಿ ಮಾರ್ಷೆ-ಟುಂಗ್‌ರವರು ಸ್ಟಾಲಿನ್‌ರವರಿಗೆ ಸಂದೇಶ ಕಳುಹಿಸಿ 'ಜಪಾನ್‌ನೊಡನೆ ಚೀನ ನಡೆಸಿದ ಯುದ್ಧದಲ್ಲಿ ರಷ್ಯಾದತಿದ ಸಹಾಯದಿಂದ ಚೀನ ಜಯ ಭೇರಿಹೊಡೆದಿಯಿತು. ರಷ್ಯದ ಬೆಂಬಲದಿಂದ ಚೀನೆಯರು ತಮ್ಮ ಶಕ್ತಿಯನ್ನು ಹೆಚ್ಚಿಸಿಕೊಂಡಿದ್ದಾರೆ' ಎಂದು ತಿಳಿಸಿದ್ದಾರೆ.

ಒಂದು ತಿಂಗಳಲ್ಲಿ ೧೦ ಸಹಸ್ರ ಸಾವುನೋವು

ಈಶಿದ ಆಗಸ್ಟ್ ಮಾಸ ಒಂದರಲ್ಲಿ ಕೊರಿಯಾ ಇದಪ ರಂಗದಲ್ಲಿ ೧೯,೦೬೨ ಕಮ್ಯೂನಿಸ್ಟರಿಗೆ ಸಾವುನೋವುಂಟಾ ಗಿದೆಯೆಂದೂ ಅವುಗಳ ಪೈಕಿ ೫,೦೭೮ ಮಂದಿ ಮಡಿ ದಿರುವರೆಂದೂ ವರದಿಯಾಗಿದೆ.

೧೫ ಲಕ್ಷ ಗ್ಯಾಲನ್ ಪೆಟ್ರೋಲ್ ಭಸ್ಮ

ಸೈಗಾನಿನ ಫ್ರೆಂಚ್ ಸೇನಾದಳದ ಪೆಟ್ರೋಲ್ ಸಂಗ್ರ ಹದ ಉಗ್ರಾಣಕ್ಕೆ ಆಕಸ್ಮಿಕ ಬೆಂಕಿಬಿದ್ದದನ್ನು ಅರಿ ಸಲು ೪ ಗಂಟೆಗಳ ಕಾಲ ಅಗ್ನಿಶಮನ ಯಂತ್ರಗಳು ಹೋರಾಡಿದುದಲ್ಲಿ ಒಬ್ಬ ಫ್ರೆಂಚ್ ಸೈನಿಕನು ಮರಣ ಹೊಂದಿದನು. ಈ ಅಸ್ಫೋಟನೆಯಿಂದ ೧,೫೯,೦೦೦ ಗ್ಯಾಲನ್ ಪೆಟ್ರೋಲ್ ಉರಿದುಹೋಯಿತೆಂದು ವರದಿ ಯಾಗಿದೆ

ಸಿದ್ಧಾಂತ ಶಿಖಾಮಣಿ

ವೀರಶೈವಮತದಲ್ಲಿ ಒಪ್ಪಿರೂಢಗೊಂಡಿದ ಪ್ರಸ್ಥಾನತ್ರಯಗಳಲ್ಲೂ ಸಿದ್ಧಾಂತಶಿಖಾಮಣಿಯೆಂಬುದಕ್ಕೆ ಪ್ರಾಮಾಣಿಕತೆಯುಂಟು. ಈ ಮಹಾಗ್ರಂಥದಲ್ಲಿ ಶ್ರೀಜಗದ್ಗುರು ರೇಣುಕಾಚಾರ್ಯರು ಜಗದ್ವಿಖ್ಯಾತರಾದ ಆಗಸ್ತ್ಯಮಹರ್ಷಿಗಳಿಗೆ ವೀರಶೈವಸಿದ್ಧಾಂತವನ್ನು ಉಪದೇಶಮಾಡಿದ ವಿಷಯವನ್ನು ಪ್ರತಿಪಾದಿಸಲ್ಪಟ್ಟಿರುವುದು ವೀರಶೈವಮತದಲ್ಲಿ ಸದ್ಯ ಚಲಾವಣೆಯಲ್ಲಿರುವ ಗ್ರಂಥಗಳಲ್ಲೆಲ್ಲ ಇದೇ ಬಹು ಪುರಾತನಗ್ರಂಥವೆಂದು ಹೇಳಿಕೊಂಡು ಮೆರೆಯುತ್ತಿರುವುದು ಈ ಗ್ರಂಥವು ಈಗ್ಗೆ ಸುಮಾರು ೨೪೦೦ವರ್ಷಗಳ ಪೂರ್ವದಲ್ಲಿದ್ದ **ಶ್ರೀಶಿವಯೋಗಿಶಿವಾಚಾರ್ಯ**ರಂಬ ಆಚಾರ್ಯರಿಂದ ರಚಿಸಲ್ಪಟ್ಟಿರುವುದು ಈ ಮಹ ಗ್ರಂಥವು ವೀರಶೈವಮತತಕ್ಕೆ ಮೂಲಸ್ತಂಭವೆಂಬುದಕ್ಕೆ ಹಲವಾರು ಪುರಾವೆಗಳಿವೆ. ಇದಕ್ಕೆ ಇಂದಿನವರೆಗೆ ಅನೇಕರು ಅನೇಕ ವಿಧವಾದ ವ್ಯಾಖ್ಯಾನಗಳನ್ನು ಬರೆದಿರುತ್ತಾರೆ ಅದರ ಒಂದು ವ್ಯಾಖ್ಯಾನದಲ್ಲಿಯಾದರೂ ಗೂಢಾರ್ಥಗಳಿಲ್ಲದಿರುವುದು ಕ್ಲೋಕಗಳಿಗೆ ಸರಿಯಾದ ಅರ್ಥವು ಬರಿಯಲ್ಪಟ್ಟಿಲ್ಲ ಈ ಕೊರತೆಯನ್ನು ದೂರವಾಗುವುದಕ್ಕಾಗಿ **ಪಂಡಿತ ಶ್ರೀಕಾಶೀನಾಥ ಶಾಸ್ತ್ರಿಗಳವರು** ಬಹುಶ್ರಮವಹಿಸಿ ಈ ಗ್ರಂಥಕ್ಕೆ ಸ್ಪಷ್ಟ ಭಾಷೆಯಲ್ಲಿ ಬಹು ಸರಳ ವಿದ್ವತ್ಪೂರ್ಣವಾದ ವ್ಯಾಖ್ಯಾನವನ್ನು ರಚಿಸಿ ಸಮಸ್ತ ವೀರಶೈವರ ಕೈಚಳಿಗೆ ಪಾತ್ರರಾಗಿರುತ್ತಾರೆ ಈ ಗ್ರಂಥವನ್ನು ಹಿಂದೊಮ್ಮೆ ಮುದ್ರಿಸಿದ್ದರೂ ಸಾಮಾನ್ಯವಾಗಿ ಎಂದಿನಂತೆ ಮಂತ್ರವ್ಯಾಪಕರ ಕೈಗೆ ಸಿಕ್ಕದೆ ಅಲಭ್ಯವಾಗಿತ್ತು ಈ ಕೊರತೆಯನ್ನು ನೀಗಿಸಲು ಈ ಗ್ರಂಥವನ್ನು ಪುನರ್ಮುದ್ರಣ ಮಾಡಿಸಲು ಅನುಕೂಲಕ್ಕಾಗಿ ಬಹು ಶ್ರಮವಹಿಸಿ ಸಿದ್ಧಪಡಿಸಿದ ಪ್ರತಿಯನ್ನು ಪರಿಶೀಲಿಸಿ ಕ್ಲೋಕಾನುಕ್ರಮಣಿಕೆಯನ್ನು ಈ ಗ್ರಂಥಕ್ಕೆ ಅಳವಡಿಸಿ ಈ ಗ್ರಂಥದಲ್ಲಿ ಮುದ್ರಿಸಲ್ಪಟ್ಟಿರುವ ಈ ಗ್ರಂಥವನ್ನು ಒಮ್ಮೆ ಓದಿದ ಕೂಡಲೆ ಸರ್ವಜ್ಞ ಸುಂದರವಾಗಿ ಮನಸ್ಸಿಲಟ್ಟಾಗುವಂತೆ ಸಂಪಾದನಾ ಸಾರವಾಗಿ ಶ್ರೀಆದ್ಯರುರುಂಭಾ ಚಿರಸ್ಥಿರ ಲಿಖಿತಸ್ವಾದ ಮನೋಜವಪದಲಾಲಿತ್ಯ ಪೂರ್ಣ ಸಲ್ಲಿಪ್ಪರುಗಳ ಸ್ವಾದ ಹೊಂದುವುದು ಮನ ಸಂತೋಷ ಪೂರ್ಣವಾಗಿ ಓದುವ ಈ ಅಮೂಲ್ಯ ಗ್ರಂಥವನ್ನು ಒಂದೆಲ್ಲಾ ಪ್ರತಿಯೊಬ್ಬರೂ ಆವಶ್ಯಕವಾಗಿ ಓದಬೇಕು

ಬೆಲೆ ೩ ರೂಪಾಯಿ.

ಮನೋಹರವಾದ ಫೋಟೋಗಳು.

ಶ್ರೀರೇಣುಕಾಚಾರ್ಯರ ಲಿಂಗಾವತಾರದ ಫೋಟೋ (ನವಾವಧಿಬಣ್ಣಗಳಿಂದ ಮನ ಮೋಹಿಸುವಂತೆ) ಸೈಜು ೧೪ × ೧೦ ಬೆಲೆ	೦—೬—೦
ಶ್ರೀಜಗದ್ಗುರು ಪಂಚಾಚಾರ್ಯರು ಪಂಚಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ	೦—೩—೦
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪ × ೧೦ ಬೆಲೆ ಬಿಳ್ಳೆ	೦—೩—೦
,, ,, ,, ಚಿಕ್ಕ ಸೈಜು ಬೆಲೆ	೦—೧—೬
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸಿರುವ ಫೋಟೋ	೦—೧—೬
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಶಕ್ತಿ ಭಸ್ಮವ ಮಾಡುವ ಫೋಟೋ	೦—೧—೬
ಶ್ರೀರೇಣುಕಾಚಾರ್ಯರು ಶ್ರೀಪಂಡಿತಾರಾಧ್ಯರಿಗೆ ಚಂದ್ರಮೌಳೀಶ್ವರಲಿಂಗವನ್ನು ಅನುಗ್ರಹಿಸುವ ಫೋಟೋ	೦—೧—೬
ಶ್ರೀರೇಣುಕಾಚಾರ್ಯರು ವಿಧ್ಯುಕ್ತವಾಗಿ ಪ್ರಾಣಲಿಂಗ ಪ್ರತಿಷ್ಠೆಯನ್ನು ಮಾಡುವ ಫೋಟೋ	೦—೧—೬
ಶ್ರೀ ಕಾಶೀ ಜಗದ್ಗುರು ವೀರಭದ್ರಶಿವಾಚಾರ್ಯಮಹಾಸ್ವಾಮಿಗಳವರ ಫೋಟೋ (ನವಾವಧಿಬಣ್ಣದ್ದು)	೦—೪—೦
ಶ್ರೀಕಾಶೀಜಗದ್ಗುರುಗಳಿಗೆ ಶ್ರೀರಂಭಾಪುರೀ ಜಗದ್ಗುರುಗಳು ಕಿರೀಟಧಾರಣಮಾಡುವ ಫೋಟೋ	೦—೧—೬
ಸನ್ಮಾ ಪೀಠಾರೋಪಣಮಾಡಿರುವ ಶ್ರೀಕಾಶೀಜಗದ್ಗುರು ವಿಶ್ವೇಶ್ವರಶಿವಾಚಾರ್ಯಮಹಾಸ್ವಾಮಿಗಳವರ ಫೋಟೋ	೦—೪—೦
ಶ್ರೀಮಜ್ಜಯಾದಿ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಷಿದ್ಲಿಂಗಶಿವಾಚಾರ್ಯರ ಫೋಟೋ	೦—೧—೬
ಶ್ರೀಮದ್ರಂಭಾಪುರೀ ಸೀತಾಪೀಠಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ	೦—೧—೬
ಶ್ರೀಸುಮ್ಮಸೂರು ಜೇ ಜಗದ್ಗುರುಗಳವರ ಸದ್ಗತಿಯನ್ನಿತ್ತ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುತೆತಿಕೊಂಡಿರುವ ಫೋಟೋ	೦—೧—೬
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನವಾವಧಿ ಬಣ್ಣಗಳಿಂದ ಮುದ್ರಿತವಾದುದು) ಚಿಕ್ಕಸೈಜು ಬೆಲೆ	೦—೪—೦
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನವಾವಧಿ ಬಣ್ಣಗಳಿಂದ ಮುದ್ರಿತವಾದುದು) ದೊಡ್ಡಸೈಜು ಬೆಲೆ	೦—೪—೦
ಶ್ರೀ ಜಗದ್ಗುರು ಉಜ್ಜಯಿನೀ ಸೀತಪೀಠದ ಮಹಾಜ್ಞಾರಥದ ಅತ್ಯಂತ ಸುಂದರವಾದ ಫೋಟೋ ಬೆಲೆ	೦—೧—೬
ಶ್ರೀ ಗದ್ದುಗೆಯ ಮೇಲೆ ಉಜ್ಜಯಿನೀ ಸೀತಪೀಠದ ಅತ್ಯಂತ ಪ್ರಾಚೀನ ಕಪ್ಪುಶಿಲೆಯ ಸುಂದರ ಫೋಟೋ ಬೆಲೆ	೦—೧—೬
ಶ್ರೀ ಜಗದ್ಗುರು ಕೇದಾರಸೋಮಸಿಂಹಪೀಠದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೧—೬
ಶ್ರೀರಂಭಾಪುರೀ ಜಗದ್ಗುರುಗಳವರ ಸದ್ಗತಿಯನ್ನಿತ್ತ ಶ್ರೀಕಾಶೀನಾಥಶಾಸ್ತ್ರಿಗಳವರು ವಿರಾಜಿಸುತ್ತಿರುವ ಫೋಟೋ	೦—೧—೬
ಶ್ರೀಜಗದ್ಗುರುರಂಭಾಪುರೀ ಸೀರದಲ್ಲಿ ಸ್ಥಾಪಿಸಲ್ಪಟ್ಟಿರುವ ಶಿಲಾಶಾಸನಗಳು	೦—೨—೦

ಸರ್ವೋತ್ತಮವಾದ ಮೂತಗ್ರಂಥಗಳು

ಗೋತ್ರಸೂತ್ರಪಟ (೩ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೫ನೆಯ ಆವೃತ್ತಿ)	೧ ಆಣೆ
ಶ್ರೀಜಗದ್ಗುರು ರೇಣುಕಾಚಾರ್ಯ ಕೀರ್ತನ	೧ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೧೧ನೆಯ ಆವೃತ್ತಿ)	೩ ಆಣೆ
ಶ್ರೀರೇಣುಕಾಚಾರ್ಯಶತಕ (೩ನೆಯ ಆವೃತ್ತಿ)	೩ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ	೩ ಆಣೆ
ಶಿವಶಕ್ತಿವಿಲಾಸ	೩ ಆಣೆ
ವಿಜಯನಗರ ಸಾಮ್ರಾಜ್ಯವೂ ಶ್ರೀರೇಣುಕಾಚಾರ್ಯರೂ	೩ ಆಣೆ
ಬಿಲ್ವಮಾಹಾತ್ಮ್ಯ (೨ನೆಯ ಆವೃತ್ತಿ) ...	೩ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೧೦ನೆಯ ಆವೃತ್ತಿ)	೩ ಆಣೆ
ಭಸ್ಮಾಂಧಿಸಾಹತ್ವದರ್ಪಣ (೫ನೆಯ ಆವೃತ್ತಿ) ...	೩ ಆಣೆ
ಪಂಚಾಚಾರ್ಯಪ್ರಕಾಶ	೩ ಆಣೆ
ಪಂಚಾಚಾರ ಪ್ರಕಾಶಿಕಾ ...	೩ ಆಣೆ
ಶ್ರೀಗುರುತತ್ತ್ವಪದಗಳು (೩ನೆಯ ಆವೃತ್ತಿ)	೩ ಆಣೆ
ವೀರಶೈವಾಚಾರವಿಧಿ (೪ನೆಯ ಆವೃತ್ತಿ)	೪ ಆಣೆ
ಲಿಂಗಧಾರಣವಿಧಿ	೪ ಆಣೆ
ವಿವಾಹವಿಧಿ (೪ನೆಯ ಆವೃತ್ತಿ)	೪ ಆಣೆ
ಶ್ರೀಪಂಡಿತಾರಾಧ್ಯರ ಕಾಲನಿರ್ಣಯ	೪ ಆಣೆ
ವೀರಶೈವ ಪ್ರಾಯಶ್ಚಿತ್ತವಿಧಿ	೪ ಆಣೆ
ವೈದಿಕವಾಜ್ಮಯರಹಸ್ಯ	೪ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೩ನೆಯ ಆವೃತ್ತಿ) ...	೪ ಆಣೆ
ವೈವೋಪನಿಷತ್ಸಂಗ್ರಹ (ಸಂಸ್ಕೃತ) (೨ ನೆಯ ಆವೃತ್ತಿ) ...	೬ ಆಣೆ
ಸನ್ಯಾಸಾಶ್ರಮವಿಮರ್ಶತತ್ತ್ವಸ್ಥಿರೀಕರಣ (೩ನೆಯ ಆವೃತ್ತಿ) ...	೬ ಆಣೆ
ವೀರಶೈವಾಂಶ್ಚೈಪ್ಪ ಶ್ರಾದ್ಧವಿಧಿ	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ ಚಿಕ್ಕಸೈಜು) ...	೮ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ)	೮ ಆಣೆ
ವೀರಶೈವಮಹಾತ್ಮರು	೮ ಆಣೆ
ಬಸವಧ್ವಜಕವಿದಿನಾಕರ (೩ನೆಯ ಆವೃತ್ತಿ)	೮ ಆಣೆ
ಆಗಮಪರಿಜ್ಞಾನ	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ
ಶ್ರೀಜಗದ್ಗುರು ಶಿವಾನಂದವಿಜಯ	೮ ಆಣೆ
ಶ್ರೀಜಗದ್ಗುರು ವಿಶ್ವಕರ್ಣವಿಜಯ ನಕ್ಷತ್ರಮಾಲಿಕಾ	೮ ಆಣೆ
ಕನ್ನಡ ನ್ಯಾಯತರ್ಕಮ್	೮ ಆಣೆ
ಸಿದ್ಧಾಂತಸಾರಾವಳಿ (ಶ್ರೀಲೋಚನಶಿವಾಚಾರ್ಯಕೃತ)	೧೩ ಆಣೆ
ಶಿಖಾಸೂತ್ರಸಿದ್ಧಾಂತದರ್ಪಣ	೧೩ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ಸ್ತ್ರೀತ್ವ	೧ ರೂ
ಮಾಹೇಶ್ವರ ದೀಕ್ಷಾವಿಧಿ (೩ನೆಯ ಆವೃತ್ತಿ)	೧ ರೂ
ವಿವೇಕಮುಕ್ತಾವಳಿ ..	೧ ರೂ
ವಿಚಾರಸಾರಾವಳಿ	೧ ರೂ
ವೈದಿಕಶಿವಪೂಜಾವಿಧಿ (ವೈದಿಕಸ್ತರಯುಕ್ತವಾಯುವು ೨ನೆಯ ಆವೃತ್ತಿ)	೧೫ ರೂ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೫ ರೂ
ಸಚಿತ್ರ ರೇಣುಕವಿಜಯ (೩ ನೆಯ ಆವೃತ್ತಿ) ...	೩ ರೂ
ಶಿವಾಗಮಸಂಗ್ರಹ (ಜಂಪ್ರಜ್ಞಾನಾಗಮ-ಕಾರಣಾಗಮ-ಮಕುಟಾಗಮ-ಸೂಕ್ಷ್ಮಾಗಮಗಳಿಂದ ಕೂಡಿರುವುದು)	೩ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಛಂ ಮೀಸಲಪತ್ರಿ)	೩॥ ರೂ
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ) ..	೩ ರೂ
ವೀರಶೈವವರ್ಷ (೩ನೆಯ ಆವೃತ್ತಿ, ೩೦ ಪುಟ್ಟದ ಫೋಟೋಗಳಿರುವವು)	೩ ರೂ
ಎವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೪೪ ಪುಟ) ..	೧೩ ರೂ
A brief life-sketch of Pandit Sri Kashinatha Shastrigal (*English*)	4 As
The Philosophical Aspect of Varnasrama (*English*)	8 As
Speeches by Pandit Shri Kashinatha Shastrigal (*English*)	12 As
ಲಿಂಗಧಾರಣಚಂದ್ರಿಕಾ (ಸಂಸ್ಕೃತ)	೩ ಕ
ವೀರಶೈವರತ್ನ (ಮರಾಠಿ)	೧ ರೂ
ಮಹಾನಾರಾಯಣೋಪನಿಷತ್ (ವೀರಶೈವಭಾಷ್ಯ-ಸಂಸ್ಕೃತ)	೧ ರೂ
ಸಂದಿಕೇಶ್ವರಕಾರಿಕಾ (ಸಂಸ್ಕೃತ)	೩ ಆಣೆ

ಮ್ಯಾನೇಜರ್—ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್, ಪ್ರೆಸ್, ಮೈಸೂರು.

Edited, Printed and Published by Brihanmath Mahadevaiah at Shri Panchacharya Electric Press, Sayaji Rao Road, Mysore.

REGISTERED No M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಭ್ಯಾಂ ಪ್ರಸೀದಂತು ॥ REGISTERED No. M 2266

ಪಂಚಾಚಾರ್ಯ ಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಸಂಕಜಾತಜನಿತರ್ ಪಂಚಾಸ್ಯಪೀಠಾಧಿವರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಜೋಧಕರ್ । ಪಂಚಾಚಾರ್ಯಜಗದ್ಗುರೂತ್ತಮವರ್ ಪಾಲಿಪ್ಪ ದೀರೋಕಮಂ ॥

ಸಂಸ್ಥಾಪಕರು— ನಾಗಸೂರು ಬೃಹನ್ಶಾಧ್ಯಕ್ಷರಾದ ವೇ॥ ಪಂ॥ ಶ್ರೀ ಶಾಕೀಪಾಧಶಾಸ್ತ್ರಿಗಳವರು.

ವಾರ್ಷಿಕ ಕಂಡಾ ಪರಶ್ಮಲದವರಿಗೆ ೩ ರೂ ಸಂಪಾದಕರು— ನಾಗಸೂರು ಬ್ರಹ್ಮಶ್ರೀ ಮಹಾದೇವಯ್ಯನವರು ವಿ ಪಿ ಖರ್ಚು ಸೇರಿ ೩ ರೂ ೬ ಆಣೆ

ಸಂಪುಟ ೩೬] ಸೋಮವಾರ ತಾ॥ ೧೫ನೇ ಸೆಪ್ಟೆಂಬರ್ ೧೯೫೨ [ಸಂಚಿಕೆ ೧೯

ಪತ್ರವ್ಯವಹಾರ

[ಚಾಪ್ಕೀದಾರರು ಅಭಿಪ್ರಾಯ ಪಡುವ ಲೇಖನಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ ಎಂಬ ವಿಷಯವನ್ನು ಎಲ್ಲರೂ ಲಕ್ಷ್ಯದಲ್ಲಿಡತಕ್ಕದ್ದು —ಸಂ]

ಅಭಿನಂದನೆಯು

ಸತ್ಯಶೋಭನ್ನರೂ, ಸದಾಚಾರಿಗಳೂ, ವಿದ್ಯಾಂಕರೂ ಆದ ವೇ॥ ಪಂ॥ ಧರ್ಮಭೂಷಣ ಹರೀಶ್ವರ ಶಾಸ್ತ್ರಿಗಳವರು ಧರ್ಮತತ್ತ್ವಗಳಂತೆ ನಡೆದು ಅವುಗಳನ್ನು ಬೋಧಿಸಿ ಧರ್ಮಕ್ಕೆ ಭೂಷಣಪ್ರಾಯರಾಗಿ ಸುಮನಸಾಧನಗಳಿಂದ ರಂಭಾಪುರಿ ಮೊದಲಾದ ಪೀಠಗಳನ್ನು ಪೀರಗಳ ಸೇವೆಯನ್ನು ಕಾಯಾವಾಚಾ ಮನಃಪೂರ್ವಕವಾಗಿ ಮಾಡಿ ಇಂದೀ ಗುರುವರ್ಗಕ್ಕೆ ಯೋಗದರ್ಪಕಾರವರಲ್ಲಿ ಒಬ್ಬರಾಗಿದ್ದು ಅಖಂಡ ೫೦ ವರ್ಷಗಳ ವರೆಗೆ ತಾವು ಮಾಡಿದ ಮತಾ ಚಾರಗಳ ಸೇವೆಯನ್ನು ತಮ್ಮಲ್ಲಿ ಈಗಲೂ ಮುಡುಸಾ ಯಿಟ್ಟುಕೊಂಡು ಮಹಾಪೀಠಗಳ ಕಲ್ಯಾಭಿವಾನಿಗಳೆಂದು ಕೀರ್ತಿಯನ್ನು ಪಡೆದು ಇದೀಗ ತಮ್ಮ ಉತ್ತರ ವಯಸ್ಸಿನಲ್ಲಿಯೂ ರಾಷ್ಟ್ರಕಲ್ಯಾಣಕ್ಕಾಗಿ ಪ್ರಕೃತ ರಾಷ್ಟ್ರಕ್ಕೆ ಆಗತವಾದ ಹಿಂದೀ ಪ್ರಚಾರ ಕಾರ್ಯವನ್ನು ಆದರ ಪೂರ್ವಕವಾಗಿ ಧರ್ಮಾಭಿವೃದ್ಧಿಯ ಕಾರ್ಯವನ್ನು ಧಾರವಾಡ ॥ ಗಜೇಂದ್ರಗಡದಲ್ಲಿ ಶ್ರೀ ಗುಡ್ಡದ ಸ್ವಾಮಿಮಠದ ॥ ಪೂ॥ ಬ್ರ॥ ಪಟ್ಟಾಧ್ಯಕ್ಷ ಬಸವಲಿಂಗಶಿವಾಚಾರ್ಯ ಸ್ವಾಮಿಗಳವರ ನೆರೆಳಲ್ಲಿ ನಡಿಸಿರುವದನ್ನು ಕೇಳಿ ನಮಗೆ ಪರಮಾನಂದವಾಗಿರುತ್ತದೆ ಸ್ವಯ್ಯವಾದ ಕಾರ್ಯ ಗಳನ್ನು ಕೈಕೊಂಡ ಶ್ರೀಗಳಿಗೂ ಮತ್ತು ಪಂಡಿತರಿಗೂ ಪ್ರತ್ಯೇಕವಾಗಿ ಅಭಿನಂದಿಸುತ್ತೇನೆ ಅಲ್ಲದೆ ರಾಷ್ಟ್ರ ನಿಷ್ಠೆ, ಸಮಾಜ ಸೇವೆಯನ್ನು ಇದಕ್ಕೂ ಹೆಚ್ಚಾಗಿ ನಾಡುವಲ್ಲಿ ಶ್ರೀ ಪಂಡಿತರಿಗೆ ಉದ್ದಂಡ ಆಯುಷ್ಯ ಮತ್ತು ಆರೋಗ್ಯ ಕರುಣಿಸಿ ಕಾಪಾಡಲೆಂದು ಶ್ರೀ ಪರಶಿವನನ್ನು ಪ್ರಾರ್ಥಿಸುತ್ತೇನೆ

ಇತಿ ವಿಶ್ವಾಭಿಮಾನಿ

ಶಾಹಾರುದ್ರಾಭಿಷೇಕಾದಪೂಜಾಸಮಸಂಭ ಚಿಕ್ಕಸರಗುಂದ

ಧಾರವಾಡ ಜಿಲ್ಲಾ ನರಗುಂದ ಪೇಠಾ ಪೈಕಿ ಚಿಕ್ಕ ಸರಗುಂದ ಗ್ರಾಮದಲ್ಲಿರುವ ಶ್ರೀಮನ್ಮಾ ಎಲ್ ಬಿ ಲಕರ್ಣಯವರು ಪ್ರತಿವರ್ಷ ಪದ್ಧತಿಯಂತೆ ಶಿವರಾತ್ರಿಯಂದು ಹರೇಮಠದ ಪಟ್ಟಾಧ್ಯಕ್ಷರಾದ ಶ್ರೀ॥ ಪೂ॥ ಮುರುಗೇಂದ್ರ ಶಿವಾಚಾರ್ಯಸ್ವಾಮಿಗಳವರನ್ನು ಆಯಿಸಿಕೊಂಡು ತಮ್ಮ ಗೃಹದಲ್ಲಿ ಇದೇ ಶ್ರಾವಣ ೧೪ ಮಂಗಳವಾರದಿಂದ ರುದ್ರಾಭಿಷೇಕ ಪೂಜಾದಿಗಳನ್ನು ಪ್ರಾರಂಭಿಸಿ ಭಾದ್ರಪದ ಬ॥ ೯ ಶುಕ್ರವಾರಕ್ಕೆ ಒಳ್ಳೇ ವೈಭವದಿಂದ ಪೂರೈಗೊಳಿಸಿದರು. ಅದಿತ ವಿಕೇಷ ಜನರಿಗೆ ಅನ್ನ ಸಂತರ್ಪಣೆಯು ಪಡೆಯಲ್ಪಟ್ಟಿತು

ವೀರಪ್ಪ ಹೊಂಗಲ

ಹಳ್ಳಿಬೈಲ್ ಪೂರ್ತಿಕಾಂತಿ ಸಮಾರಂಭವು

ಬಳ್ಳಾರಿ ಜಿಲ್ಲಾ, ಹೂವಿನಹಡಗಲಿ ತಾಲೂಕು, ಹಿರೇಹಡಗಲಿ ಗ್ರಾಮದಲ್ಲಿ ಪುರಾಣಿಕಮಠದ ವೇ॥ ಪರಮೇಶ್ವರಯ್ಯನವರು ಈ ಮೊದಲು ರಂಭಾಪುರಿ, ಉಜ್ಜಯಿನಿ ಕಾಶೀ, ಶ್ರೀಶೈಲ ಕ್ಷೇತ್ರಯಾತ್ರೆಗಳನ್ನು ಮಾಡಿಕೊಂಡು ಒಂದು ಇದೇ ನಂದನ ಸಂವತ್ಸರದ ಶ್ರಾವಣ ಬಹುಳ ೮ ಬುಧವಾರ (ತಾ॥ ೧೩ ಆ-೫೨) ದಿವಸ ತಮ್ಮ ೬೦ ನೇ ವರ್ಷದ (ಷಷ್ಟ್ಯಬ್ದಪೂರ್ತಿ) ಶಾಂತಿಸಮಾರಂಭವನ್ನು ಅಒನೇಲ (ತಾಂತಾಮರಿ) ಹಿರೇಮಠದ ಪಟ್ಟಾಧ್ಯಕ್ಷರಾದ ಶ್ರೀ॥ ಷ॥ ಬ್ರ॥ ಮಡಿವಾಳ ಶಿವಾಚಾರ್ಯಸ್ವಾಮಿಗಳವರ ಸನ್ನಿಧಿಯಲ್ಲಿ ತಮ್ಮ ಅನುಜರಾದ ವೇ॥ ವಿರೂಪಾಕ್ಷಶಾಸ್ತ್ರಿಗಳವರ ಪೌರೋಹಿತ್ಯದಿಂದ ಸ್ವಸ್ತಿವಾಚನ, ಗಣೇಶಾರ್ಚನೆ, ಮಾತೃಕಾದೇಯ ಪೂಜಾ, ನವಗ್ರಹಶಾಂತಿ (ನಾರಿಕೇಳ) ತುಲಾಭಾರ ದಾನಾದಿಗಳನ್ನು ಸಕ್ರಮವಾಗಿ ನೆರವೇರಿಸಿ ಭೂರಿ ಗಣಾರಾಧನೆ ಅನ್ನ ಸಂತರ್ಪಣೆಯನ್ನು ಜರುಗಿಸಿದರು

ಪ್ರತ್ಯಕ್ಷದರ್ಶಿ

ಅನುಷ್ಠಾನ ಮತ್ತು ಪುರಾಣ ಸಮಾಪ್ತಿ ಗಜೇಂದ್ರಗಡ

ಪ್ರತಿವರ್ಷದ ಪದ್ಧತಿಯಂತೆ ಇದೇ ಖರವಾಮ ಸಂವತ್ಸರ ಶ್ರಾವಣ ಶು॥ ೧ ರಿಂದ ೮ ದಿವಸ ಶಿಷ್ಟ ಶ್ರೇಣಿಗಳೂ, ಮಾನವ ಹಿತಚಿಂತಕರೂ, ವಿದ್ಯಾವಂತರೂ, ತತ್ತಸ್ವಿಗಳೂ ಆದ ಯಲಬುರ್ಗಿ ಧರಮೂರಿನ ಹಿರೇಮಠದ ಮತ್ತು ಕಲ್ಮಠದ ಪಟ್ಟಾಧ್ಯಕ್ಷ ಶ್ರೀ॥ ಷ॥ ಬ್ರ॥ ಬಸವಲಿಂಗಶಿವಾಚಾರ್ಯಸ್ವಾಮಿಗಳವರ ತಮ್ಮ ಶಾಖಾಮಠವಾದ ಶ್ರೀ ಗಡ್ಡದಸ್ವಾಮಿ ಮಠದಲ್ಲಿ ವಿಶ್ವ ಶಾಂತಿಗಾಗಿ ಶಿವಮಹಾರುದ್ರಸಮೇತ (ಅಮೃತಾನಸನ್ನ) ವಿಧ್ಯುಕ್ತವಾಗಿ ಶಾಂತಿಯಿಂದ ಆಚಾರವಿಲ್ಲದೆ ಪಡಿಸಿದರು ಮತ್ತು ಶ್ರೀಮಠದಲ್ಲಿ ಅಮೃತಾನಸ್ಥೆಗೆ ಅಂಗವಾಗಿ ಶ್ರೀ ಶರಣಬಸವೇಶ್ವರ ಪುರಾಣ ಪ್ರವಚನವು ಸಹ ಪಡಿಸಿ ಬಿಟ್ಟಿತು ತಾ॥ ೧-೯-೫೨ ನೇ ಸೋಮವಾರ ದಿವಸ ಬೆಳಿಗ್ಗೆ ಶ್ರೀಮಠದ ಮೂಲ ಗದ್ದುಗೆಗೆ ರುದ್ರಾಭಿಷೇಕ ಸಹಸ್ರ ಬಿಲ್ವಾರ್ಚನೆಯಾಗಿ ಅಮೃತಾನ ಮತ್ತು ಪುರಾಣ ಪ್ರವಚನ ಸಮಾಪ್ತಿ ಮಂಗಲ ಮಹೋತ್ಸವವನ್ನು ಅನೇಕ ವಾದ್ಯಗಳಿಂದ ಸ್ವಕರಸ್ಪರ್ಶದ ಭಜನಾ ಮಂಡಳಿಯವರಿಂದ ಗ್ರಾಮದ ಎಲ್ಲ ಬೀದಿಗಳಲ್ಲಿ ಪಡಿಸಿ ಮಧ್ಯಾಹ್ನಕ್ಕೆ ಸಮಾಪ್ತಿಸೂಚಕ ಆರಾಧನೆಯು ಒಳ್ಳೇ ಕೃಷ್ಟಿಕರವಾಗಿ ಪಡಿಸಲ್ಪಟ್ಟಿತು.

ಇತಿ ಉತ್ಸವಭಾಗಿ

ಶ್ರೀ ವಿದ್ಯಾಗಣಪತಿಮಹೋತ್ಸವ ಕಾಡುಮಳ್ಳ

ಶಿವಮೊಗ್ಗಾ ಜಿ॥ ಸಾಗರ ತಾಲೂಕ ಕಾಡುಮಳ್ಳ ಗ್ರಾಮದ ಪ್ರವೇಟು ಪ್ರೈಮರಿ ಸ್ಕೂಲಿನಲ್ಲಿ ಉಪಾಧ್ಯಾಯರಾಗಿದ್ದ ಶ್ರೀ ಎಸ್ ಹೊಲಪ್ಪನವರು ಇದೇ ಭಾದ್ರಪದ ಶು॥ ೪ ಭಾನುವಾರ ಗಣಪತಿ ಪೂಜೆಯನ್ನು ನೆರವೇರಿಸಿದ ಸಮಯದಲ್ಲಿ ಗ್ರಾಮದ ಮಹಾಪುರುಷರಾದ ಶ್ರೀ ವೀರಭದ್ರಪ್ಪಗೌಡರು, ಶ್ರೀ ಜಿ ಹೆಚ್ ಶಿವಲಿಂಗಪ್ಪನವರು ಶ್ರೀ ಬಿ ಗಡ್ಡಪ್ಪಗೌಡರು, ಶ್ರೀ ಕೆ ಲಿಂಗಪ್ಪ ಗೌಡರೇ ಅಡಿಯಾಗಿ ಸರ್ವರೂ ಅಗಮಿಸಿದ್ದರು ಭಕ್ತಿ ಪೂರ್ವಕವಾಗಿ ವಿದ್ಯಾದಾಯಕನಾದ ಶ್ರೀ ಮಹಾಗಣಪತಿ ಪೂಜೆಯು ನಾನಾ ತರದ ಫಲಪುಷ್ಪಗಳಿಂದಲೂ ಪಕ್ವಾನ್ನ ಗಳ ನೈವೇದ್ಯದಿಂದಲೂ ಪೂಜೆಸಿದನಂತರ ವಿದ್ಯಾರ್ಥಿಗಳ ನ್ನೊಳಗೆಂಡು ಸರ್ವರ ಮುಂಗಲೊಡನೆ ಪ್ರಸಾದ ವಿನಿಯೋಗವಾಯಿತು ಮಹಾಜನಗಳು ಶಾಲೆಯ ಹುಡುಗರ ಭಾಷಣ, ಸಂಗೀತಗಳನ್ನು ಕೇಳಿ ಸಂತೋಷ ಪಟ್ಟು ಇದೇ ಪ್ರಕಾರ ಪ್ರತಿವರ್ಷವೂ ಸ್ಕೂಲಿನಲ್ಲಿ ವಿದ್ಯಾ ಗಣಪತಿ ಪೂಜೆಯು ನಡೆಯಲೆಂದು ಹಾರೈಸಿ ರಾತ್ರಿ ೧೧ ಗಂಟೆಯೊಡನೆ ಮಂತ್ರಾಯಗೊಳಿಸಿದರು

ಈ ಶಾಲೆಯು ಪ್ರಥೋಭವೃದ್ಧಿಯಾಗುತ್ತಿರುವುದು ಬಹಳ ಸಂತೋಷ ಆದರೆ ವಿದ್ಯಾಭಿಲಾಷೆಯು ಉತ್ತಮ ವಾಸ್ತೆಯಷ್ಟು ಹೊಂದಲೆಂಬ ಆಗತ ಸರ್ಕಾರದ ಧೋರಣೆ ಯಲ್ಲಿ ಈ ಸ್ಕೂಲಿಗೆ ಸರಕಾರದಿಂದ ಸಹಾಯ ದೊರೆಯದೆ ಇರುವುದು ವಿಷಾದಕರ ೪೦-೫೫ ರ ವರೆಗೆ ವಿದ್ಯಾರ್ಥಿಗಳನ್ನೊಳಗೊಂಡ ಈ ಸ್ಕೂಲಿನ ವಿಷಯ ವನ್ನು ಸರ್ಕಾರದವರು ಗಮನಕ್ಕೆ ತಂದುಕೊಂಡು ಕೂಡಲೆ ಸಹಾಯವನ್ನು ಕಲ್ಪಿಸಿಕೊಡುವರೆಂದು ನಂಬಿ ದ್ದೇನೆ

ಇತಿ ವಿದ್ಯಾಪ್ರೇಮಿ

ಜಂಗಮಾರಾಧನೆ ಹಾಗೂ ಬಟ್ಟೆ ಅಂಗಡಿ ಸ್ಥಾಪನೆ ನರಗ

ಧಾರವಾಡ ಜಿ॥ ನರಗ ನಾಸಿಗಳಾದ ವಿ ವಿ ಬಳೇಕಾಯಿ ಇವರು ತಾರೀಖು ೪ ೭ ೫೨ ನೇ ಶುಕ್ರವಾರ ದಿವಸ ಹೊಸದಾಗಿ ಬಟ್ಟೆಅಂಗಡಿಯನ್ನು ಸ್ಥಾಪಿಸಿದ್ದಲ್ಲದೆ ಶ್ರಾವಣ ಮಾಸದಲ್ಲಿ ಹನ್ನೊಂದು ದಿವಸ ಜಂಗಮಾರಾಧನೆ, ರುದ್ರಾಭಿಷೇಕ, ಸಹಸ್ರಬಿಲ್ವಾರ್ಚನೆಗಳನ್ನು ಮಾಡಿ ಕುಟುಂಬದವರೆಲ್ಲ ಕೃತಾರ್ಥರಾದರು. ಜಗದೀ ಶ್ವರು ಇವರಿಗೆ ಸಕಲ ಸನ್ಮಂಗಲವನ್ನಿತ್ತು ಶಾಶಾವಲಿ ಜಗಣ್ಣಾಯರಿಂದ ಪರಮಭಕ್ತರಾದ ಇವರ ಬಟ್ಟೆ ಅಂಗಡಿಯು ದಿನೇ ದಿನೇ ಶ್ರೀ ಗುರುಶ್ರೀಮಂತ ಅಭಿವೃದ್ಧಿಯನ್ನು ಹೊಂದಿ ಹೆಸರುವಾಸಿಯಾಗಲಿ

ಇತಿ ಹಿತಚಿಂತಕ

ವೀರಶೈವ ಶಿವಾದ್ವೈತ ಸಿದ್ಧಾಂತ

ಬ್ರಹ್ಮಾದ್ವೈತಿಗಳು ಅಂದರೆ ಅಧ್ಯಾಸವನ್ನು ಸ್ವೀಕರಿಸುವ ಮಾಯಾವಾದಿಗಳು ಮುಕ್ತಿಗೆ ಕೇವಲ ಜ್ಞಾನವೇ ಉಪಾಯವು ಆದೊಂದರಿಂದಲೇ ಮುಕ್ತಿಯಾಗುವುದೆಂದು ಹೇಳುವರು

ಜ್ಞಾನವೊಂದರಿಂದಲೇ ಮುಕ್ತಿಯೊ ? ಆ ಮುಕ್ತಿಗೆ ಮತ್ತಾವುದಾದರೊಂದು ಉಪಾಯವು ಬೇಕೊ ಎಂಬುವ ವಿಚಾರವನ್ನು ಮಾಡುವುದಕ್ಕಿಂತ ಮೊದಲು ಆ ಮಾಯಾವಾದಿಗಳ ಮತಕ್ಕೂ ಮತ್ತು ವೀರಶೈವಾಚಾರ್ಯರ ಮತಕ್ಕೂ ಇರುವ ಅಂತರವೇನೆಂಬುದನ್ನು ತಿಳಿಸುವದು ಯುಕ್ತವಾಗಿದೆ ಇದರಿಂದ ಮುಂದೆ ನಾವು ಮಾಡುವ ವಿಚಾರವು ಸ್ಪಷ್ಟವಾಗಬಹುದಲ್ಲವೆ ?

೧ ಆ ಬ್ರಹ್ಮಾದ್ವೈತಿಗಳು ಜ್ಞಾನವೊಂದರಿಂದಲೇ ಮುಕ್ತಿಯೆನ್ನುವರು ಶಿವಾದ್ವೈತಿಗಳು ಜ್ಞಾನಕರ್ಮಗಳೆರಡರಿಂದಲೇ ಮುಕ್ತಿಯೆನ್ನುವರು

೨ ಆವರು ಜಗತ್ತು ಮಿಥ್ಯವೆನ್ನುವರು ಶಿವಾದ್ವೈತಿಗಳು ಸತ್ಯವೆನ್ನುವರು

೩ ಆವರು ವೇದಾಂತಾದಿ ಶಾಸ್ತ್ರಗಳು ಅಜ್ಞಾನಿಗಳಗಲ್ಲದೆ ಜ್ಞಾನಿಗಳಿಗಲ್ಲವೆನ್ನುವರು ವೀರಶೈವರು ಜ್ಞಾನಿಗಳಿಗೂ ಶಾಸ್ತ್ರಗಳು ಬೇಕೆನ್ನುವರು

೪ ಆವರು ಅಭೇದವೈದಂತೋದೇ ಪಾರಮಾರ್ಥಿಕವೆಂದರೆ ಇವರು ಭೇದವೂ ಕೂಡ ಪಾರಮಾರ್ಥಿಕವೆನ್ನುವರು

೫ ಆವರು " ಆದಿತ್ಯಮಂಬಿಕಾಂವಿಘ್ನಂ ಗಣನಾಥಂ ಮಹೇಶ್ವರಂ " ಎಂಬ ಸ್ಮೃತಿಯನ್ನನುಸರಿಸಿ ಸೂರ್ಯ ಅಂಬಿಕೆ, ವಿಷ್ಣು, ಗಣಪತಿ, ಮಹೇಶ್ವರರು ಗಳಾದ ಪಂಚದೇವತೆಗಳನ್ನು ಸೃಜಿಸುವರು ವೀರಶೈವರು ಇವರೊಳ್ ಏದನೆಯವನಾದ ಮಹೇಶ್ವರ ನೊಬ್ಬನನ್ನೇ ಪೂಜಿಸುವರು

೬ ಬ್ರಹ್ಮಾದ್ವೈತಿಗಳು ಯೋಗದಿಂದ ಮುಕ್ತಿಯಿಲ್ಲವೆನ್ನುವರು ಶಿವಾದ್ವೈತಿಗಳಾದ ಲಿಂಗಾಂಗಿಗಳು ಶಿವಯೋಗದಿಂದಲೇ ಮುಕ್ತಿಯೆನ್ನುವರು

೭. ಆ ನಿರ್ವಿಕೇಷಬ್ರಹ್ಮವಾದಿಗಳು ಮುಮುಕ್ಷುಗಳಿಗೆ ಜಿಜ್ಞಾಸ್ಯನಾದ ವಸ್ತುವು ನಿರ್ವಿಶೇಷಬ್ರಹ್ಮವೆಂದರೆ ಇವರು ಅದನ್ನು ಸವಿಶೇಷ ಬ್ರಹ್ಮವೆನ್ನುವರು

೮ ಆ ಬ್ರಹ್ಮಾದ್ವೈತಿಗಳು ಅಂತಃಕರಣವೃತ್ತಿಗಳು ಅನಿತ್ಯಗಳೆನ್ನುವರು ಶಿವಾದ್ವೈತಿಗಳಾದ ವೀರಶೈವರು ನಿತ್ಯಗಳೆನ್ನುವರು

೯ ಸಂಸಾರಕ್ಕೆ ಕಾರಣವಾದ ಅವಿದ್ಯೆಯು ಬ್ರಹ್ಮಕ್ಕೆ ಭಿನ್ನವಾದದ್ದು ಬ್ರಹ್ಮಜ್ಞಾನದಿಂದ ಅವಿದ್ಯೆಯು ಸ್ವರೂಪತಃ ನಶ್ಯವಾಗುತ್ತದೆ ಎಂದು ಅವರು ಹೇಳುವರು ವೀರಶೈವರು ಅವಿದ್ಯೆಯು ಬ್ರಹ್ಮಕ್ಕೆ ಭಿನ್ನವಾದದ್ದಲ್ಲಾ (ಅದು ಶುದ್ಧವಾದ ತಾಲಕ್ಕೆ ಬ್ರಹ್ಮಕ್ಕೆ ಭಿನ್ನವಲ್ಲಾ) ಮತ್ತು ಅದು ಸ್ವರೂಪತಃ ನಶ್ಯವಾಗುವದಿಲ್ಲವು ಆದರೆ ತನಗೆ ಕಾರಣವಾದ ಶಕ್ತಿಯಲ್ಲಿ ಲೀನವಾಗುತ್ತದೆಂದು ಹೇಳುವರು

೧೦ ಮಾಯಾವಾದಿಗಳು ಸಾಧನಚತುಷ್ಟಯಸಂಸನ್ನತೆಗೆ ಬ್ರಹ್ಮಜಿಜ್ಞಾಸೆಗೆ ಅಧಿಕಾರಿಯೆಂದು ಹೇಳುವರು ಇವರು ಅಷ್ಟಾವರಣ ಪಂಚಾಚಾರ ಪರಾಯಣರಾಗಿ ಲಿಂಗಧಾರಣಸಾಧನವಾದ ಶಿವದೀಕ್ಷೆಯಂ ಪಡೆದಾತನೇ ಅಧಿಕಾರಿಯನ್ನುವರು

೧೧ ಆವರು ಬ್ರಹ್ಮದ ವಿವರ್ತನೇ ಜಗತ್ತು ಎಂದು ಹೇಳುವರು ಇವರು ಜಗತ್ತು ಬ್ರಹ್ಮದ ಪರಿಣಾಮ ವೆನ್ನುವರು.

೧೨ ಆವರು ಅಂತಃಕರಣದಲ್ಲಿ ಕುಡ್ಡಬ್ರಹ್ಮದ ಪ್ರತಿಬಿಂಬವೇ ಜೀವನೆಂದರೆ ಇವರು ಚಿತಶಕ್ತಿಯ (ಚಿಚ್ಛಕ್ತಿಯ) ಸಂಕೋಚರೂಪವಾದ ಚಿತ್ಪಶಿಚ್ಛಕ್ತಿನೇ ಜೀವನೆಂದು ಹೇಳುವರು

೧೩. ಆವರು ಚಿಚ್ಛಕ್ತಿಗೇನೇ ಬ್ರಹ್ಮವೆಂದರೆ ಇವರು ಚಿಚ್ಛಕ್ತಿ ವಿಶಿಷ್ಟನಿಗೆ ಬ್ರಹ್ಮವೆನ್ನುವರು

೧೪ ಆವರು ಬ್ರಹ್ಮವು ಅಹಂಪದಾರ್ಥವಲ್ಲವೆನ್ನುವರು ಇವರು ಅಹಂಪದಾರ್ಥನನ್ನೇ ಬ್ರಹ್ಮವೆನ್ನಾಗಿ ಹೇಳುವರು (ಕೃತಿಮ ಅಹಂಕಾರಕ್ಕೆ ವಿಷಯವಲ್ಲ ಆದರೆ ಪರಾಹಂಕಾರಕ್ಕೆ ವಿಷಯವಾಗುತ್ತದೆನ್ನುವರು)

೧೫ ಆವರು ಅನರ್ಥಭೂತಗಳಾದ ಚಿತ್ತಾದಿಗಳು ನಾಶವಾಗಿ ಪರಮಾನಂದಪ್ರಾಪ್ತಿಯೇ ಮೋಕ್ಷವೆಂದರೆ ಇವರು ಆ ಚಿತ್ತಾದಿಗಳು ನಾಶವಾಗದೆ ವಿಕಾಶವಾಗಿ ಶಿವತ್ವಪ್ರಾಪ್ತಿಯೇ ಮೋಕ್ಷವೆನ್ನುವರು ಇವುಗಳೆಲ್ಲವೂ ಅವರಿಗೂ ವೀರಶೈವರಿಗೂ ಇರುವ ಸೂಕ್ಷ್ಮಲಗಳಾದ ವಿಶೇಷಭೇದಗಳು ಇನ್ನೂ ಸೂಕ್ಷ್ಮಭೇದಗಳನೇಕವಿರುವವು

ಆಚಾರ

ಲೇ -ಸಂಗಯ್ಯಶಾಸ್ತ್ರಿ, ಶಿವಸ್ವಯ್ಯನವರ ಮಠ

ಆಚಾರವೆಂಬುವ ಧರ್ಮ ಸಾಧಿಸಿ
ಆಚಾರ ನಿರತರು ಆಗಿಬಾಳಿರಿ ಯಲ್ಲರು ॥೫॥
ಆಚಾರದಿಂದಲೆ ಭಕ್ತಿ ಬೆಳೆವುದು ।
ಆಚಾರದಿಂದಲೆ ಯುಕ್ತಿ ಹೊಳೆವುದು ॥
ಆಚಾರದಿಂದಲೆ ಶಕ್ತಿ ಸಾಧಿಪುದು
ಆಚಾರದಿಂದಲೆ ನಿತ್ಯಸುಖ ಸೌಲಭ್ಯವಹುದು ॥೧॥
ಆಚಾರದಿಂದಲೆ ಬಾಳಿನೀಲ್ಗೆಯು
ಆಚಾರವಿ ದಲೆ ರೀತಿ ತಿಳಿಪುದು ।
ಆಚಾರದಿಂದಲೆ ಖ್ಯಾತಿ ಬೆಳೆವುದು
ಆಚಾರದಿಂದಲೆ ನಿತ್ಯಸುಖ ಸೌಲಭ್ಯವಹುದು ॥೩॥
ಆಚಾರದಿಂದಲೆ ಗುರುವು ಒಲಿವನು
ಆಚಾರದಿಂದಲೆ ಲಿಂಗ ಒಲಿವುದು ।
ಆಚಾರದಿಂದಲೆ ಚರಿಪು ಒಲಿವನು
ಆಚಾರದಿಂದಲೆ ನಿತ್ಯಸುಖ ಸೌಲಭ್ಯವಹುದು ॥೪॥
ಆಚಾರದಿಂದಲೆ ತನುವು ಸದೃಢವು
ಆಚಾರದಿಂದಲೆ ಮನವು ನಿಲ್ಲುವುದು ।
ಆಚಾರದಿಂದಲೆ ಧನವು ದೊರೆವುದು
ಆಚಾರದಿಂದಲೆ ನಿತ್ಯಸುಖ ಸೌಲಭ್ಯವಹುದು ॥೪॥
ಆಚಾರದಿಂದಲೆ ಕಾಮಶಮನವು
ಆಚಾರದಿಂದಲೆ ರಾಗವಿರಾಗವು
ಆಚಾರದಿಂದಲೆ ಸದ್ಗುಣವೃದ್ಧಿಯು
ಆಚಾರದಿಂದಲೆ ನಿತ್ಯಸುಖ ಸೌಲಭ್ಯವಹುದು ॥೫॥

ವಾರ ಭವಿಷ್ಯ

ಲೇ ಯಡಗೋಡ ಸಾಂಪ್ರದಾಯಾಸ್ಥಾಪಕ ಜ್ಯೋತಿರ್ಮಾರ್ತಂಡ ನೇ॥ ರುಜ್ವಾಕ್ಯಶಾಸ್ತ್ರಿಗಳು

(ತಾ॥ ೨೨ ೯ ೫೬ ರಿಂದ ತಾ॥ ೨೦ ೯ ೫೬ ರವರೆಗೆ)

ಮೇಷ—ಈ ವಾರದಲ್ಲಿ ಈ ರಾಶಿಯವರಿಗೆ ಚೆನ್ನಾಗಿ ಸುಖ ಲಾಭದ ಯೋಗವಿದೆ, ಆದರೆ ಮೇಲುಸ್ಪರಿಗೆಯ ಮೇಲೆ ಕೂಡ್ರಬೇಡಿ

ವೃಷಭ—ಈ ರಾಶಿಯವರು ಈ ವಾರದಲ್ಲಿ ಹಣ ಗುಣಗಳೆರಡಕ್ಕೂ ತೊಂದರೆ ತಂದುಕೊಳ್ಳುವರು

ಮಿಥುನ—" ನೂಡಿದ್ದುನ್ನೋ ಮಂಪಾರಾಯಾ " ಎಂಬಂತೆ ನಮ್ಮ ಆಚರಣೆ ಸುಧಾರಿಸಿಕೊಳ್ಳಬೇಕು

ಕರ್ಕ—" ಹರಮುನಿದರೆ ಗುರು ಕಾಯ್ವ " ಎಂಬಂತೆ ಪ್ರಥಮ ಕಷ್ಟಬಂದರೂ ಗುರುಕಾಯುವನು ಗುರುಪೂಜೆ ಮಾಡಿರಿ

ಸಿಂಹ—" ಮಾನನನಿಗೆ ಮಾನವೇ ಧನವು " ಎಂಬಂತೆ ನಿಮಗೆ ಕಷ್ಟಬರುವುದು ಆದರೂ ಮಾನ ಬಿಡಬೇಡಿರಿ.

ಕನ್ಯಾ—ಸ್ವಲ್ಪಮಟ್ಟಿಗೆ ಈ ವಾರದಲ್ಲಿ ಆಡಚಣೆ ದೂರಾಗುವದು ಸ್ತ್ರೀಜಂತೆ ಹೆಚ್ಚುವದು

ತುಲಾ—ತ್ರಾಸು ಅಧಿಕ ತೋರಿದರೂ ಗುರುಬಲ ದಿಂದ ಕ್ಷಣ ಕ್ಷಣ ಬದಲಾವಣೆಯ ಯೋಗವಿದೆ

ವೃಶ್ಚಿಕ—ಈ ವಾರದಲ್ಲಿ ಸಮ್ಮಿಶ್ರ ಫಲವುಂಟಾಗುವದು

ಧನು—ಈ ರಾಶಿಯವರಿಗೆ ಈ ವಾರದಲ್ಲಿ ಸಾಧಾರಣ ಫಲವುಂಟು.

ಮಕರ—ಹೃದಯಮಂಡಲದಲ್ಲಿ ಕೆಂಡ ಬಿದ್ದಿದಿ ಹೋಕೆ

ಕುಂಭ—ಈ ರಾಶಿಯವರಿಗೆ ಸಮಫಲಗಳುಂಟಾಗುವವು

ಮೀನ—ಜಪಬಲಿ, ಬಟ್ಟು, ಶಿಡುಕು ಬಟ್ಟು ನೋಟು ನೆಟ್ಟಗಿಟ್ಟು ಗುಟ್ಟನ್ನು ದಟ್ಟವಾದ ಜಡಿಯುಳ್ಳ ಮೃಗಶಕ್ತಿಯುಳ್ಳರಿಗೆ ಸರ್ವ ಸುಖಕಾಂಗಿಗೊದಗುವವು.

ವರ್ತಮಾನಸಂಗ್ರಹ

ಮೈಸೂರಿನಲ್ಲಿ ದಸರಾ ಮಹೋತ್ಸವ

ಮೈಸೂರಿನಲ್ಲಿ ದಸರಾ ಉತ್ಸವ ಹೇಗೆ ನಡೆಸಬೇಕು ಎಂಬ ಬಗ್ಗೆ ಮುಜುಮಂತ್ರಿಗಳು ನಮ್ಮ ಮಹಾರಾಜರವರೊಡನೆ ಮಾತುಕತೆ ನಡೆಸಿದರು ಉತ್ಸವ ನಡೆಸುವ ಬಗ್ಗೆ ಒಂದು ತೀರ್ಮಾನಕ್ಕೆ ಬರಲಾಯಿತು

ಮೈಸೂರು ಸಂಸ್ಥಾನದಲ್ಲಿ ರಾಷ್ಟ್ರೀಯ ಹಬ್ಬವಾಗಿ ಆಚರಿಸುತ್ತಿದ್ದ ನವರಾತ್ರಿ ಉತ್ಸವ ಈ ವರುಷವೂ ವಿಜೃಂಭಣೆಯಿಂದ ನಡೆಯುತ್ತದೆ ಆದರೆ ಅರಮನೆಯಲ್ಲಿ ನಡೆಯುವ ' ದರ್ಬಾರ್ ' ಗೆ ಇನ್ನು ಮುಂದೆ ' ರಾಜಸಭೆ ' ಎಂದು ಕರೆಯಲಾಗುವುದು ಈ ರಾಜಸಭೆಯು ಕುತೂಲಕರೆ, ಪ್ರತಿಭೆ ಮತ್ತು ಸೇವೆಯ ಮನ್ನಣೆ ಮಾಡುವ ಮತ್ತು ಸನ್ಮಾನಿಸುವ ಕ್ಷೇತ್ರವಾಗುತ್ತದೆ.

ಅತ್ಯುತ್ತಮರೆನಿಸುವ ಕವಿಗಳಿಗೆ, ಸಣ್ಣ ಕತೆಗಾರರಿಗೆ, ಹಾಸ್ಯ ಕೃತಿಗಾರರಿಗೆ, ಲಾವಣಿಕಾರರಿಗೆ, ಸಂಗೀತಗಾರರಿಗೆ ರಾಮಾಯಣ ಮತ್ತು ಭಾರತ ಮಹಾ ಕಾವ್ಯಗಳ ವಾಚಕರಿಗೆ, ಚಿತ್ರ ಗಾರರಿಗೆ, ಭರತನಾಟ್ಯ ನೃತ್ಯಗಾರರಿಗೆ, ಸಮಾಜಸೇವೆ ಸಲ್ಲಿಸಿದವರಿಗೆ, ಧೀರರಿಗೆ, ಬಹುಮಾನಗಳನ್ನು ನಮ್ಮ ಮಹಾರಾಜರವರ ಹಸ್ತದಿಂದ ರಾಜಸಭೆಯಲ್ಲಿ ಕೊಡಿಸಲಾಗುವುದು

ಪ್ರಖ್ಯಾತ ವಿಜ್ಞಾನಿಗಳನ್ನೂ ಕರೆಸುವ ವಿಚಾರವು ಮಾಡಲಾಗುವುದು,

ಈ ಎಲ್ಲ ಕ್ಷೇತ್ರಗಳಲ್ಲೂ ಬಹುಮಾನಗಳನ್ನು ಹಂಚಲು ಉಪಸಮಿತಿಗಳನ್ನು ರಚಿಸಲಾಗುವುದು ಬಹುಮಾನ ಪಡೆಯುವ ಕೃತಿಗಳನ್ನು ರಾಜಸಭೆಯಲ್ಲಿ ಓದಲಾಗುವುದು ಬಹುಮಾನ ಪಡೆಯುವ ಉತ್ತಮ ಕಲಾಕೃತಿಯನ್ನು ರಾಜಸಭೆಯಲ್ಲಿ ಪ್ರದರ್ಶಿಸಲಾಗುವುದು ಬಹುಮಾನ ಪಡೆದವರನ್ನು ರಾಜಸಭೆಗೆ ಕರೆಸಿ ಸನ್ಮಾನಿಸಲಾಗುವುದು

ಹಿಂದಿನಂತೆ ದಸರಾ ಮೆರವಣಿಗೆ ಈ ಬಾರಿಯೂ ನಡೆಯುತ್ತದೆ.

ಬಿರುದಾಂಕಿತರು ಬರುವುದಿಲ್ಲ

ಬಿರುದಾಂಕಿತರನ್ನು ಈ ಬಾರಿ ಉತ್ಸವಕ್ಕೆ ಆಹ್ವಾನಿಸುವುದಿಲ್ಲ ಹಿಂದೆ ಕೊಡಲಾಗುತ್ತಿದ್ದ ಬಿರುದುಗಳಿಗೆ ಈಗ ಅಧಿಕೃತವಾದ ಅಂಗೀಕಾರ ಇರುವುದಿಲ್ಲ, ಎಂದು ತಿಳಿದುಬಂದಿದೆ.

ನೀವು ವಿಮಾನದಲ್ಲಿ ಕುಳಿತು ಪ್ರಯಾಣ ಮಾಡಬಹುದು

ಈ ತಿಂಗಳು ೨೦ ನೆಯ ತಾರೀಖು ಮೈಸೂರು ನಗರದಲ್ಲಿ ದಸರಾ ವಸ್ತುಪ್ರದರ್ಶನ ಪ್ರಾರಂಭವಾಗುತ್ತದೆ ಆ ಸಂದರ್ಭದಲ್ಲಿ ಈ ವರುಷ ಒಂದು ವಿಶೇಷ ವ್ಯವಸ್ಥೆಯು ವಿಸ್ತಾರಣಾದಿಕೆ ಸಾರ್ವಜನಿಕರು ವಿಮಾನದ ವಿಷಯವನ್ನು ತಿಳಿದುಕೊಳ್ಳುವ ಸಲುವಾಗಿ ಮತ್ತು ವಿಮಾನದಸಂಚಾರದ ಆಸೆ ಹುಟ್ಟಿಸುವ ಸಲುವಾಗಿ ಆ ವ್ಯವಸ್ಥೆ ಬೆಂಗಳೂರಿನ ವಿಮಾನ ತರಬೇತಿ ಶಾಲೆಯವರು ಈ ವಿಚಾರವನ್ನು ಮಾಡಿದ್ದಾರೆ

ವಿಮಾನದ ಆಕಾರ ಮತ್ತು ಅದರ ಒಳಗಿನ ವ್ಯವಸ್ಥೆಗಳನ್ನು ತಿಳಿಯುವ ಸಲುವಾಗಿ ಒಂದು ವಿಮಾನವನ್ನು ವಸ್ತುಪ್ರದರ್ಶನದ ಆವರಣದಲ್ಲಿ ಇಡಲಾಗುವುದು

ಅಲ್ಲದೆ, ಮೈಸೂರು ನಗರದ ಹತ್ತಿರದಲ್ಲಿರುವ ಮಂಡಳ್ಳಿ ವಿಮಾನ ನಿಲ್ದಾಣದಲ್ಲಿ ಸಾರ್ವಜನಿಕರು ಪ್ರಯಾಣಾರ್ಥವಾಗಿ ವಿಮಾನವನ್ನು ಇಡಲಾಗುವುದು ಯಾರು ಬೇಕಾದರೂ ದುಡ್ಡು ಕೊಟ್ಟು ಈ ವಿಮಾನದಲ್ಲಿ ಪ್ರಯಾಣ ಮಾಡಬಹುದು

ಸ್ವಲ್ಪಹೊತ್ತು ಪ್ರಯಾಣಮಾಡಲು ೫ ರೂಪಾಯಿ ಚಾಮುಂಡಿ ಬೆಟ್ಟದ ಮೇಲೆ ಸುತ್ತಲು ೧೦ ರೂಪಾಯಿ ಮೈಸೂರು ನಗರವನ್ನು ಸುತ್ತಲು ೧೫ ರೂಪಾಯಿ ಬೃಂದಾವನಕ್ಕೆ ಹೋಗಿ ಬರಲು ೨೫ ರೂಪಾಯಿ, ಶ್ರೀರಂಗಪಟ್ಟಣಕ್ಕೆ ಹೋಗಿ ಬರಲು ೨೫ ರೂಪಾಯಿ ಪ್ರಯಾಣ ಇಡಲಾಗಿದೆ. ಸಾರ್ವಜನಿಕರು ಈ ಸದವಕಾಶವನ್ನು ಚೆನ್ನಾಗಿ ಉಪಯೋಗಿಸಿಕೊಳ್ಳುವರೆಂದು ನಂಬಲಾಗಿದೆ

